ಶಿಕ್ಷಕರ ಪುಸ್ತಕ

ಹಂತ 1

ಸಂಡೇ ಸ್ಕೂಲ್ “ಮಕ್ಕಳೇ ಪ್ರಮುಖರು” ವತಿಯಿಂದ

Equip & Grow
ಮಕ್ಕಳೇ ಪ್ರಮುಖರು

# ಟೈಮ್ ಮೆಷಿನ್

ಯೇಸು ಕ್ರಿಸ್ತನು ನಡೆದಾಡಿದ ಸ್ಥಳಗಳಿಗೆ ಹೋಗುವದು



## ಶಿಕ್ಷಕರ ಪುಸ್ತಕ

ಎಲ್ಲಾ ವಯಸ್ಸಿನವರಿಗೆ

# ಟೈಮ್ ಮಷಿನ್




"ಮಕ್ಕಳೇ ಪ್ರಮುಖರು" ವತಿಯಿಂದ

ಸಂಡೇ ಸ್ಕೂಲ್

ಶಿಕ್ಷಕರ ಪುಸ್ತಕ

ಎಲ್ಲಾ ವಯಸ್ಸಿನವರಿಗೆ

ಹಂತ 1: ಪಾಠಗಳು 1-13

ವೆಬ್: www.ChildrenAreImportant.com/machine/

"ಮಕ್ಕಳೇ ಪ್ರಮುಖರು" ಇಡೀ ತಂಡಕ್ಕೆ ಧನ್ಯವಾದಗಳು

Founders, Dwight y Kristina Krauss

Creative Team Manager, Flor Boldo

Creative Editorial Team, Jennifer Sánchez, Areli Salinas, Ramón Martínez, Marlon Hernández.

Designer, Julio Sánchez

Contributing Designer Suzanna Kangas (Suki)

Consulting Emeritus, Miguel y Vickie Kangas

Facebook Admin, Verónica Toj

Iso traductore: alineviera, Annupama Wankhede, Anton Klymyk, Araz Mammadzadeh, Aroma Publications and Media, Arturo Jr Boron, Blessy Jacob, Carmela Dawn Flores, Chrisbresnahan, David Raju, Ephraim Njuguna Mirobi, Finny Jacob, Geenav, HamidReza Azimi (hamid.azimi1364 at gm#ail com), Heyaudrey, I-clever.com, iqbalman, Jacob Kuruvilla, kamilturk, Karunguru Mwangi, kiran, Maitrayi Mondal, Marco Chu, Marcos Rocha, Mathew Das, Mitesh Mandaliya, mrramlama, Mrs.Geethashree NavaneethaKrishnan, Nassim Bougtaia, nicbenk, Paul Mwangi, Paul Septan, Rana922, Rubina Rai, Safdar Khan, shahroshan15, Talento-Unido, ueritom, Verdia Juliansyah Cancerika, Yeoh Jung Chin, Zeina Mirella Barzaga Arencibia

# ಪರಿಚಯ

ಟೈಮ್ ಮಿಷನ್ ಸಂಡೇ ಸ್ಕೂಲ್ ಗೆ ಸ್ವಾಗತ! ಹೊಸದಾಗಿರುವ ಮತ್ತು ಆಕರ್ಷಕವಾಗಿರುವ ಈ ಕಾರ್ಯಕ್ರಮದಲ್ಲಿ ನಾವು ಯೇಸು ಕ್ರಿಸ್ತನ ಜೀವನವನ್ನು ತಿಳಿದುಕೊಳ್ಳೋಣ! ಪ್ರತಿವಾರ, ಮಕ್ಕಳು ತಮಾಷೆಯ ನಾಟಕಗಳನ್ನು ನೋಡಬಹುದು, ಆಟ ಆಡಬಹುದು, ವಿದ್ಯಾರ್ಥಿಗಳ ಪುಸ್ತಕದಲ್ಲಿರುವ ಒಗಟುಗಳನ್ನು ಬಿಡಿಸಬಹುದು ಮತ್ತು ಹಾಜರಾತಿಗಾಗಿ ಹೊಸ ಕಾರ್ಡ್ ಸಂಗ್ರಹಿಸಬಹುದು.

ತಮಾಷೆಯ ನಾಟಕವನ್ನು 3 ಅಥವಾ 4 ಪಾತ್ರಧಾರಿಗಳಿಗಾಗಿ ರೂಪಿಸಲಾಗಿದ್ದು, ಯೇಸು ಕ್ರಿಸ್ತನ ಜೀವನವನ್ನು ನೋಡಲು ಅವರು ಸಮಯದ ಹಿಂದೆ ಹೋಗುವವರಾಗಿದ್ದಾರೆ. ಪಾತ್ರಧಾರಿಗಳ ಬಗ್ಗೆ ತಿಳಿದುಕೊಳ್ಳುವಾಗ ಮತ್ತು ಪಾತ್ರಧಾರಿಗಳು ಸಮಯದ ಹಿಂದೆ ಹೋಗುವಾಗ ಅದನ್ನು ಎಣಿಸುವದು ಮಕ್ಕಳಿಗೆ ಬಹಳ ಇಷ್ಟವಾಗುವದು. ಆದರೆ ಇದು ಕೇವಲ ಮನೋರಂಜನೆ ಮಾತ್ರವಲ್ಲ. ಪ್ರತಿಯೊಂದು ನಾಟಕದಲ್ಲಿ, ವಿದ್ಯಾರ್ಥಿಗಳಂತೆ ಪಾತ್ರಧಾರಿಗಳೂ ಪಾಠಗಳನ್ನು ಕಲಿತುಕೊಳ್ಳುತ್ತಾರೆ ಮತ್ತು ಪಾಠಗಳಲ್ಲಿರುವ ಆಧುನಿಕ ಅಳವಡಿಸುವಿಕೆಗಳನ್ನು ವ್ಯಕ್ತಪಡಿಸುತ್ತಾರೆ.

ಈ ಕಾರ್ಯಕ್ರಮದಲ್ಲಿ, ಮಕ್ಕಳು ಯೇಸು ಕ್ರಿಸ್ತನ ಜೀವನವನ್ನು ಅನುಸರಿಸುತ್ತಾರೆ ಮತ್ತು ಆಧುನಿಕ ಸಮಾಜದಲ್ಲಿರುವ ನ್ಯಾಯದ ಬಗ್ಗೆ ಕಲಿತುಕೊಳ್ಳುತ್ತಾರೆ. ಇತರರನ್ನು ಪ್ರೀತಿಸುವದು ಮತ್ತು ಇತರರೊಂದಿಗೆ ಸರಿಯಾಗಿ ನಡೆದುಕೊಳ್ಳುವದನ್ನು ದೇವರು ಬಹಳ ಇಷ್ಟಪಡುವವನಾಗಿದ್ದಾನೆ. ಈ ವಿಷಯದ ಬಗ್ಗೆ ಮಾತನಾಡುವ ಅನೇಕ ವಚನಗಳಲ್ಲಿ ಒಂದು ಹೀಗಿದೆ: "ಸದಾಚಾರವನ್ನು ಅಭ್ಯಾಸ ಮಾಡಿರಿ; ನ್ಯಾಯನಿರತರಾಗಿರಿ, ಹಿಂಸಕನನ್ನು ತಿದ್ದಿ ಸರಿಪಡಿಸಿರಿ. ಅನಾಥನಿಗೆ ನ್ಯಾಯ ತೀರಿಸಿರಿ, ವಿಧವೆಯ ಪಕ್ಷವಾಗಿ ವಾದಿಸಿರಿ" ಯೆಶಾಯ 1:17.

ಕೆಲವು ಸಮಸ್ಯೆಗಳಾದ ಅಂದರೆ, ಮಾನವ ಅಪಹರಣಗಳಂಥ ಅಪರಾಧಗಳನ್ನು, ತಡೆಯುವ ಸಾಮರ್ಥ್ಯ ಮಕ್ಕಳಿಗೆ ಈಗ ಇರುವದಿಲ್ಲ. ಆದರೂ ನಾವು ಲೋಕವನ್ನು ಮಕ್ಕಳ ದೃಷ್ಟಿಕೋನದೊಳಗೆ ತೋರಿಸಬಹುದು, ಅಂದರೆ ಸಾಮಾಜಿಕ ಹಿನ್ನಲೆಯ ಬಗ್ಗೆ ಯೋಚಿಸಲು ಜನರೊಂದಿಗೆ ಮಾನ್ಯವಾಗಿ ನಡೆದುಕೊಳ್ಳುವಾಗ, ಮಕ್ಕಳು ದೊಡ್ಡವರಾದ ನಂತರ ದಬ್ಬಾಳಿಕೆಗಳಿಗೆ ಒಳಗಾಗುವವರ ಪರ ದನಿ ಎತ್ತುತ್ತಾರೆ. ಮಕ್ಕಳಿಗೆ ಸಹಾಯವಾಗುವ ರೀತಿಯಲ್ಲಿ ನ್ಯಾಯದ ವಿಷಯವನ್ನು ಕಲಿಸಲು ಮೂರು ವಿಧಾನಗಳನ್ನು ರೂಪಿಸಲಾಗಿದೆ. 1. ನ್ಯಾಯದ ಭಾಗವು ಆಧುನಿಕ ಅಳವಡಿಸುವಿಕೆಯಾಗಿದ್ದು ಮುಖ್ಯ ಪಾಠದ ಮೇಲೆ ಆಧಾರವಾಗಿರುತ್ತದೆ. ಉದಾಹರಣೆಗೆ: ಎಲ್ಲಾ ಜನರನ್ನು ದೇವರ ₹₹₹ಸೃಷ್ಟಿ ಎಂದು ಪರಿಗಣಿಸುವದು. 2. ಹೋಮ್ ವರ್ಕ್ ವಿಭಾಗವು, ಮಕ್ಕಳು ಕಲಿತುಕೊಳ್ಳುವ ವಿಷಯಗಳನ್ನು ಅನುದಿನದ ಜೀವನದಲ್ಲಿ ಅಭ್ಯಾಸ ಮಾಡಲು ಅವಕಾಶವನ್ನು ಒದಗಿಸುತ್ತದೆ. ಉದಾಹರಣೆಗೆ: ಯಾರಿಗಾದರೂ ಧನ್ಯವಾದ ತಿಳಿಸುತ್ತಾ ಪತ್ರವನ್ನು ಬರೆಯುವದು. 3. ಆತ್ಮಚರಿತ್ರೆಯ

ಭಾಗವು ಮಕ್ಕಳಿಗೆ ವಿವಿಧ ಕೆಲಸಗಳು, ಅಂದರೆ ಸಭಾಪಾಲಕ, ವಕೀಲ, ವಿಜ್ಞಾನಿ, ಆರಕ್ಷಕ, ಇತ್ಯಾದಿ ಮತ್ತು ಇವರಿಂದ ಸಮಾಜಕ್ಕೆ ಹೇಗೆ ಲಾಭವಾಗುತ್ತದೆ ಎಂಬದರ ಬಗ್ಗೆ ಕಲಿಸುತ್ತದೆ. ಈ ಭಾಗದಲ್ಲಿರುವ ಕೆಲವು ಕೆಲಸಗಳನ್ನು, ಹಲವು ದೇಶಗಳು ನಕಾರಾತ್ಮಕ ದೃಷ್ಟಿಯಿಂದ ನೋಡುತ್ತವೆ ಯಾಕಂದರೆ ಕೆಲವರು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುವವರಾಗಿದ್ದಾರೆ. ಒಬ್ಬನು ನಿಜವಾಗಿಯೂ ಏನು ಮಾಡಬೇಕು ಅಥವಾ ಯೇಸು ಕ್ರಿಸ್ತನು ಆ ಸ್ಥಾನದಲ್ಲಿ ಇರುವದಾದರೆ ಏನು ಮಾಡುತ್ತಾ ಇದ್ದನು ಎಂಬದನ್ನು ಮಕ್ಕಳಿಗೆ ಕಲಿಸುವ ಅವಕಾಶ ನಿಮಗೆ ದೊರೆಯುತ್ತದೆ. ಯಾರಿಗೆ ಗೊತ್ತು? ನಿಮ್ಮ ತರಗತಿಯಲ್ಲಿರುವ ಒಬ್ಬ ವಿದ್ಯಾರ್ಥಿಯೇ ದೊಡ್ಡವನಾದ ಮೇಲೆ ಒಳ್ಳೆಯ ಸ್ಥಾನಕ್ಕೆ ಬರಬಹುದು ಮತ್ತು ನ್ಯಾಯವನ್ನು ಆಚರಿಸುತ್ತಾ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವ ಬದಲು ಜನರ ಒಳಿತಿಗಾಗಿ ದುಡಿಯುವವನಾಗಬಹುದು. ಅವರು ತಮ್ಮ ಸಮುದಾಯದಲ್ಲಿ ಅಥವಾ ದೇಶದಲ್ಲಿ ಯೇಸು ಕ್ರಿಸ್ತನಿಗಾಗಿ ಮಿನುಗುವವರಾಗಬಹುದು. ಶಿಕ್ಷಕರೇ ಧೈರ್ಯ ತಂದುಕೊಳ್ಳಿರಿ, ಯಾಕಂದರೆ ಯೇಸು ಕ್ರಿಸ್ತನು ನಿಮ್ಮೊಂದಿಗಿದ್ದಾನೆ. ಆತನು ಲೋಕವನ್ನು ಬದಲಾಯಿಸಲು ಬಯಸುತ್ತಿದ್ದಾನೆ, ಆದ್ದರಿಂದ ಮುಂದಿನ ಪೀಳಿಗೆಗೆ ತರಬೇತಿಯನ್ನು ಕೊಡುವುದು ಅತ್ಯುತ್ತಮವಾದ ಮಾರ್ಗವಾಗಿದೆ! ದೇವರು ನಿಮ್ಮ ಮಕ್ಕಳ ಹೃದಯದಲ್ಲಿ ಕಾರ್ಯಮಾಡುವವನಾಗಿ ಅವರು ಯಾವ ಬೇಧಭಾವವಿಲ್ಲದೆ ತಮ್ಮ ಸುತ್ತಮುತ್ತಲಿನ ಜನರನ್ನು ಪ್ರೀತಿಸುವವರಾಗುವಾಗ ನಿಮ್ಮ ಸಮುದಾಯದಲ್ಲಿ ಏನಾಗಬಹುದೆಂದು ಊಹಿಸಿರಿ. ಮಕ್ಕಳಿಗೆ ಕಲಿಸುವ ಈ ಪ್ರಾಮುಖ್ಯವಾದ ಕಾರ್ಯದಲ್ಲಿ ದೇವರು ನಿಮ್ಮನ್ನು ಬಹಳವಾಗಿ ಆಶೀರ್ವದಿಸಲಿ ಎಂದು ನಾವು ನಿಮಗಾಗಿ ಪ್ರಾರ್ಥಿಸುತ್ತೇವೆ.




ಮಕ್ಕಳೇ ಪ್ರಮುಖರು ತಂಡದ ಸದಸ್ಯರು

# ಹೊರನೋಟ

## ರಾಜಮನೆತನದವನು ಅಥವಾ ಹಳ್ಳಿಯವನು?

**1**

ಬೆತ್ಲೆಹೇಮಿಗೆ ಪ್ರಯಾಣ: ಲೂಕ 2:1-5

೧ ಪೇತ್ರನು 2:9 "ನೀವು ದೇವರು ಆಯ್ದುಕೊಂಡ ಜನಾಂಗ, ರಾಜಯಾಜಕರು, ಪವಿತ್ರ ಪ್ರಜೆ, ದೇವರ ಸ್ವಕೀಯ ಜನ; ಅವರ ಅದ್ಭುತ ಕಾರ್ಯಗಳನ್ನು ಪ್ರಚುರಪಡಿಸುವುದಕ್ಕಾಗಿಯೇ ಆಯ್ಕೆಯಾದವರು. ಕಾರ್ಗತ್ತಲಿನಿಂದ ತಮ್ಮ ಅದ್ಭುತಕರವಾದ ಬೆಳಕಿಗೆ ನಿಮ್ಮನ್ನು ಕರೆತಂದವರು ಅವರೇ. "

## ಒಳ್ಳೆಯ ಸ್ನೇಹಿತನು

**2**

ಯೋಸೇಫನು ಮರಿಯಳನ್ನು ಮದುವೆ ಮಾಡಿಕೊಂಡನು: ಮತ್ತಾಯ 1:18-25

ಈ ವಾರದಲ್ಲಿ ಯಾರಾದರು ಬಂದು ನಿಮಗೆ ಯಾರ ಬಗ್ಗೆಯೋ ಗಾಳಿಮಾತು ಹೇಳಿದರೆ, ನೀವು ಹೇಳುತ್ತಿರುವದು ಕೇವಲ ಗಾಳಿ ಮಾತಾಗಿದೆ, ಅದನ್ನು ನಾನು ನಂಬುವದಿಲ್ಲ ಬದಲಾಗಿ ಆ ವ್ಯಕ್ತಿಯ ಬಗ್ಗೆ ಒಳ್ಳೆಯ ಯೋಚನೆಯನ್ನೇ ಮಾಡುತ್ತೇನೆ ಎಂದು ನೇರವಾಗಿ ಹೇಳಿರಿ.

## ರಾಜಯೋಗ್ಯ ಅಥವಾ ದೀನತೆಯ ಜನನ

**3**

ಯೇಸು ಕ್ರಿಸ್ತನ ಜನನ: ಲೂಕ 2:4-20

೨ ಕೊರಿಂಥಿಯರಿಗೆ 8:9 "ಪ್ರಭು ಯೇಸುಕ್ರಿಸ್ತರ ಕೃಪಾಶಕ್ತಿಯನ್ನು ನೀವು ಬಲ್ಲಿರಿ. ಅವರು ತಮ್ಮ ಬಡತನದಿಂದ ನಿಮ್ಮನ್ನು ಶ್ರೀಮಂತವಾಗಿಸಲೆಂದು, ತಾವು ಶ್ರೀಮಂತರಾಗಿದ್ದರೂ ನಿಮಗೋಸ್ಕರ ಬಡವರಾದರು."

## ಕಷ್ಟದ ಸಮಯಗಳು

**4**

ಯೇಸು ಕ್ರಿಸ್ತನ ಕುಟುಂಬದವರು ಐಗುಪ್ತಕ್ಕೆ ಹೋದರು: ಮತ್ತಾಯ 2:13-23

ಎಫೆಸಿಯರಿಗೆ 4:32 "ಪರಸ್ಪರ ಕರುಣೆಯಿಂದಲೂ ಕನಿಕರದಿಂದಲೂ ವರ್ತಿಸಿರಿ. ಯೇಸುಕ್ರಿಸ್ತರಲ್ಲಿ ದೇವರು ನಿಮ್ಮನ್ನು ಕ್ಷಮಿಸಿದಂತೆಯೇ, ನೀವು ಸಹ ಒಬ್ಬರನ್ನೊಬ್ಬರು ಕ್ಷಮಿಸಿರಿ."

## ಯೇಸು ಕ್ರಿಸ್ತನ ಅಗಾಧವಾದ ಬುದ್ಧಿಶಕ್ತಿ

**5**

ದೇವಾಲಯದಲ್ಲಿ ಯೇಸು ಕ್ರಿಸ್ತನು: ಲೂಕ 2:41-51

ಯಾಕೋಬನು 1:19 “ಸಹೋದರರೇ, ಇದನ್ನು ನೆನಪಿನಲ್ಲಿಡಿ; ನಿಮ್ಮಲ್ಲಿ ಪ್ರತಿಯೊಬ್ಬನು ಆಲಿಸುವುದರಲ್ಲಿ ಚುರುಕಾಗಿ, ಮಾತನಾಡುವುದರಲ್ಲಿ ದುಡುಕದೆ, ಸಿಟ್ಟುಗೊಳ್ಳುವುದರಲ್ಲಿ ಸಾವಧಾನವಾಗಿ ಇರಲಿ.”

## ಉನ್ನತವಾದ ಪ್ರಾರಂಭ

**6**

ಯೇಸು ಕ್ರಿಸ್ತನ ದೀಕ್ಷಾಸ್ನಾನ: ಮತ್ತಾಯ 3:13-17

ಹಿಬ್ರಿಯರಿಗೆ 13:17 “ನಿಮ್ಮ ಸಭಾನಾಯಕರಿಗೆ ವಿಧೇಯರಾಗಿರಿ. ಅವರ ಆಜ್ಞೆಗಳನ್ನು ಪಾಲಿಸಿರಿ. ಅವರು ನಿಮ್ಮ ಆತ್ಮಗಳ ಪಾಲಕರು; ದೇವರಿಗೆ ಲೆಕ್ಕ ಒಪ್ಪಿಸಬೇಕಾದವರು. ಈ ಸೇವೆಯನ್ನು ಅವರು ಸಂತೋಷದಿಂದ ಮಾಡುವಂತೆ ನೀವು ನಡೆದುಕೊಳ್ಳಿ. ಅವರು ಮನನೊಂದುಕೊಂಡು ಮಾಡುವ ಸೇವೆಯಿಂದ ನಿಮಗೆ ಒಳಿತಾಗದು.”

## ತಂಡವನ್ನು ರಚಿಸುವದು

**7**

ಯೇಸು ಕ್ರಿಸ್ತನು 12 ಮಂದಿ ಶಿಷ್ಯರನ್ನು ಆರಿಸಿಕೊಂಡನು: ಮತ್ತಾಯ 4:18-22, ಯೋಹಾನ 1:35-50

ಯೊವಾನ್ನ 8:12 “ಬಳಿಕ ಯೇಸು ಸ್ವಾಮಿ ಜನರನ್ನು ಮತ್ತೊಮ್ಮೆ ಕಂಡು ಹೀಗೆಂದರು: “ನಾನೇ ಜಗಜ್ಯೋತಿ, ನನ್ನನ್ನು ಹಿಂಬಾಲಿಸುವವನು ಕತ್ತಲಲ್ಲಿ ನಡೆಯುವುದಿಲ್ಲ. ಜೀವದಾಯಕ ಜ್ಯೋತಿ ಅವನಲ್ಲಿರುತ್ತದೆ.””

## ಯೇಸು ಕ್ರಿಸ್ತನು ಒದಗಿಸುತ್ತಾನೆ

**8**

ನೀರು ದ್ರಾಕ್ಷಾರಸವಾಯಿತು: ಯೋಹಾನ 2:1-11

ಲೂಕ 6:38 “ಪರರನ್ನು ಕ್ಷಮಿಸಿರಿ, ದೇವರು ನಿಮ್ಮನ್ನೂ ಕ್ಷಮಿಸುವರು; ಪರರಿಗೆ ಕೊಡಿ, ದೇವರು ನಿಮಗೂ ಕೊಡುವರು; ಅಳತೆಯಲ್ಲಿ ತುಂಬಿ, ಕುಲುಕಿ, ಅದುಮಿ ತುಳುಕುವಂತೆ ಅಳೆದು ನಿಮ್ಮ ಮಡಿಲಿಗೆ ಹಾಕುವರು. ನೀವು ಕೊಟ್ಟ ಅಳತೆಯಲ್ಲೇ ದೇವರು ನಿಮಗೂ ಅಳೆದುಕೊಡುವರು,” ಎಂದರು.”

## ಯೇಸು ಕ್ರಿಸ್ತನ ಹಾಗೆ ಪ್ರೀತಿಸಿರಿ

**9**

ಒಳ್ಳೆಯ ಸಮಾರ್ಯದವನು: ಲೂಕ 10:25-37

ಲೂಕ 10:27 ಅವನು, “ ‘ನಿನ್ನ ಸರ್ವೇಶ್ವರನಾದ ದೇವರನ್ನು ನಿನ್ನ ಪೂರ್ಣಹೃದಯದಿಂದಲೂ ನಿನ್ನ ಪೂರ್ಣಆತ್ಮದಿಂದಲೂ ನಿನ್ನ ಪೂರ್ಣಶಕ್ತಿಯಿಂದಲೂ ನಿನ್ನ ಪೂರ್ಣ ಮನಸ್ಸಿನಿಂದಲೂ ಪ್ರೀತಿಸು ಮತ್ತು ನಿನ್ನನ್ನು ನೀನೇ ಪ್ರೀತಿಸಿಕೊಳ್ಳುವಂತೆ ನಿನ್ನ ನೆರೆಯವನನ್ನೂ ಪ್ರೀತಿಸು’ ಎಂದಿದೆ,” ಎಂದು ಉತ್ತರಕೊಟ್ಟನು”

## 10

## ದೇವರು ಅಭಿವೃದ್ಧಿಪಡಿಸುವನು

5000 ಜನರಿಗೆ ಊಟ ಕೊಟ್ಟನು: ಮತ್ತಾಯ 14:13-21

ಮತ್ತಾಯ 19:26 "ಯೇಸು ಅವರನ್ನು ನಿಟ್ಟಿಸಿ ನೋಡುತ್ತಾ, "ಮನುಷ್ಯರಿಗಿದು ಅಸಾಧ್ಯ; ಆದರೆ ದೇವರಿಗೆ ಎಲ್ಲವೂ ಸಾಧ್ಯ," ಎಂದರು"

## 11

## ದೇವರಲ್ಲಿ ನಂಬಿಕೆಯುಳ್ಳವರಾಗಿರುವದು

ಯೇಸು ಕ್ರಿಸ್ತನು ಬಿರುಗಾಳಿಯನ್ನು ನಿಲ್ಲಿಸಿದನು: ಲೂಕ 8:22-25

ಧರ್ಮೋಪದೇಶಕಾಂಡ 31:8 "ಸರ್ವೇಶ್ವರ ತಾವೇ ನಿನ್ನ ಮುಂದುಗಡೆ ಹೋಗುವರು; ಅವರೇ ನಿನ್ನ ಸಂಗಡ ಇರುವರು; ನಿನ್ನನ್ನು ಅಪಜಯಕ್ಕೆ ಗುರಿಪಡಿಸುವುದೇ ಇಲ್ಲ, ಕೈಬಿಡುವುದಿಲ್ಲ. ಅಂಜಬೇಡ; ಧೈರ್ಯದಿಂದಿರು," ಎಂದು ಹೇಳಿದನು."

## 12

## ಯೇಸು ಕ್ರಿಸ್ತನು ಯಾರು?

ನಾನು ಯಾರೆಂದು ನೀವು ಹೇಳುತ್ತೀರಿ? ಮತ್ತಾಯ 16:13-20

ಯೊವಾನ್ನ 3:16 "ದೇವರು ಲೋಕವನ್ನು ಎಷ್ಟಾಗಿ ಪ್ರೀತಿಸಿದರೆಂದರೆ ತಮ್ಮ ಏಕೈಕ ಪುತ್ರನನ್ನೇ ಧಾರೆಯೆರೆದರು; ಆತನಲ್ಲಿ ವಿಶ್ವಾಸವಿಟ್ಟ ಯಾರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂಬುದೇ ದೇವರ ಉದ್ದೇಶ"

## 13

## ಯೇಸು ಕ್ರಿಸ್ತನು ಶಕ್ತಿಯನ್ನು ಪ್ರದರ್ಶಿಸಿದನು

ಲಾಜರನು: ಯೋಹಾನ 11:32-44

ಯೊವಾನ್ನ 11:25 "ಯೇಸು, ಅವಳಿಗೆ, "ಪುನರುತ್ಥಾನವೂ ಜೀವವೂ ನಾನೇ; ನನ್ನಲ್ಲಿ ವಿಶ್ವಾಸವಿಟ್ಟವನು ಸಾವಿಗೀಡಾದರೂ ಜೀವಿಸುವನು"

# ಈ ಪುಸ್ತಕವನ್ನು ಉಪಯೋಗಿಸುವದು ಹೇಗೆ

## ನಾಟಕ (ಭಾಗ 1)




ಪ್ರತಿಯೊಂದು ನಾಟಕದಲ್ಲಿಯೂ, "ನೀತಿಯ ತಂಡ" ಯೇಸು ಕ್ರಿಸ್ತನ ಜೀವನದ ಒಂದು ಭಾಗವನ್ನು ನೋಡಲು ಸಮಯದಲ್ಲಿ ಹಿಂದೆ ಹೋಗುವವರಾಗಿದ್ದಾರೆ, ಹಾಗೂ ತಂಡದ ಸದಸ್ಯರು ಸಮಾನಾಂತರ ಪಾಠವನ್ನು ಕಲಿತುಕೊಳ್ಳುತ್ತಾರೆ ಮತ್ತು ಅದನ್ನು ತಮ್ಮ ಆಧುನಿಕ ಜೀವಿತಗಳಿಗೆ ಅಳವಡಿಸಿಕೊಳ್ಳುತ್ತಾರೆ. ಮುಖ್ಯ ಪಾಠಕ್ಕೂ ಮೊದಲು ನಾಟಕದ ಭಾಗವನ್ನು ಬರೆಯಲಾಗುತ್ತದೆ, ಅದರ ಮೂಲಕ ಅವರು ಸಮಯದ ಹಿಂದೆ ಹೋಗುತ್ತಾರೆ ಮತ್ತು ಪ್ರತಿಯೊಂದು ನಾಟಕದ ಎರಡನೇ ಭಾಗವು ಮುಖ್ಯ ಪಾಠದ ನಂತರ ಬರುತ್ತವೆ, ಆಗ ಪಾತ್ರಧಾರಿಗಳು ಹಿಂದಕ್ಕೆ ಬರುವರು ಮತ್ತು ತಾವು ಕಲಿತುಕೊಂಡಿರುವದನ್ನು ಅಳವಡಿಸಿಕೊಳ್ಳುತ್ತಾರೆ.

ನಾಟಕವನ್ನು 3 ಪಾತ್ರಧಾರಿಗಳಿಗಾಗಿ ರೂಪಿಸಲಾಗಿದೆ: ನಾಯಕ, ತನಿಖಾಧಿಕಾರಿ ಮತ್ತು ಏಜೆಂಟ್. ಇನ್ನುಳಿದ ಇಬ್ಬರು ಪಾತ್ರಧಾರಿಗಳು ಅಂದರೆ ಮೆಕಾನಿಕ್ ಮತ್ತು ಟೆಕ್ನಿಷಿಯನ್ ನಿಮ್ಮಲ್ಲಿ ಅನೇಕ ವಾಲಂಟೀಯರ್ಸ್ ಇದ್ದರೆ ತೆಗೆದುಕೊಳ್ಳಬಹುದು. ನಾಯಕ, ತನಿಖಾಧಿಕಾರಿ, ಏಜೆಂಟ್, ಮೆಕಾನಿಕ್, ಟೆಕ್ನಿಷಿಯನ್.

## ಮುಖ್ಯ ಪಾಠ

ಪ್ರಾರಂಭದ ನಾಟಕದ ನಂತರ ಮುಖ್ಯ ಪಾಠ ಬರುತ್ತದೆ. ಸತ್ಯವೇದದ ಪಾಠಗಳನ್ನು ಪಾಠದಲ್ಲಿ ಸಂಪೂರ್ಣವಾಗಿ ಬರೆಯಲ್ಪಟ್ಟಿಲ್ಲ, ಆದ್ದರಿಂದ ಸತ್ಯವೇದದಲ್ಲಿರುವ ಪಾಠವನ್ನು ಓದಲು ಮರೆಯಬೇಡಿರಿ.

## ನಾಟಕ (ಭಾಗ 2)

ಮುಖ್ಯ ಪಾಠದ ನಂತರ, ನಾಟಕದ ಎರಡನೇ ಭಾಗವನ್ನು ಪೂರ್ಣಗೊಳಿಸುವ ಮೂಲಕ ವಿದ್ಯಾರ್ಥಿಗಳ ಪುಸ್ತಕದಲ್ಲಿರುವ ಒಗಟುಗಳನ್ನು ಬಿಡಿಸಿರಿ ಅಥವಾ ತಿಂಡಿಯನ್ನು ಸೇವಿಸಿರಿ.

## ನ್ಯಾಯ

ಮುಖ್ಯ ಪಾಠದಲ್ಲಿರುವ ಕ್ಲುಪ್ತವಾದ ಕಾರ್ಯವನ್ನು ವಿಮರ್ಷಿಸುವ ಮೂಲಕ, ವಿದ್ಯಾರ್ಥಿಗಳ ಪುಸ್ತಕದಲ್ಲಿರುವ ಒಗಟುಗಳನ್ನು ಬಿಡಿಸಿರಿ ಅಥವಾ ತಿಂಡಿಯನ್ನು ಸೇವಿಸಿರಿ.

## ಆತ್ಮಚರಿತ್ರೆ

ಆತ್ಮಚರಿತ್ರೆಯ ಭಾಗವು ಮಕ್ಕಳಿಗೆ ವಿವಿಧ ಕೆಲಸಗಳಿಂದ ಅಂದರೆ ಸಭಾಪಾಲಕ, ವಕೀಲ, ವಿಜ್ಞಾನಿ ಮತ್ತು ಆರಕ್ಷಕನಿಂದ ಸಮಾಜಕ್ಕೆ ಹೇಗೆ ಅನುಕೂಲವಾಗುತ್ತದೆ ಎಂಬದನ್ನು ಕಲಿಸುತ್ತದೆ. ಈ ಭಾಗದಲ್ಲಿರುವ ಕೆಲವು ಕೆಲಸಗಳನ್ನು, ಹಲವು ದೇಶಗಳು ನಕಾರಾತ್ಮಕ ದೃಷ್ಟಿಯಿಂದ ನೋಡುತ್ತವೆ ಯಾಕಂದರೆ ಕೆಲವರು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುವವರಾಗಿದ್ದಾರೆ. ಒಬ್ಬನು ನಿಜವಾಗಿಯೂ ಏನು ಮಾಡಬೇಕು ಅಥವಾ ಯೇಸು ಕ್ರಿಸ್ತನು ಆ ಸ್ಥಾನದಲ್ಲಿ ಇರುವದಾದರೆ ಏನು ಮಾಡುತ್ತಾ ಇದ್ದನು ಎಂಬದನ್ನು ಮಕ್ಕಳಿಗೆ ಕಲಿಸುವ ಅವಕಾಶ ನಿಮಗೆ ದೊರೆಯುತ್ತದೆ. ಯಾರಿಗೆ ಗೊತ್ತು? ನಿಮ್ಮ ತರಗತಿಯಲ್ಲಿರುವ ಒಬ್ಬ ವಿದ್ಯಾರ್ಥಿಯೇ ದೊಡ್ಡವನಾದ ಮೇಲೆ ಒಳ್ಳೆಯ ಸ್ಥಾನಕ್ಕೆ ಬರಬಹುದು ಮತ್ತು ನ್ಯಾಯವನ್ನು ಆಚರಿಸುತ್ತಾ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವ ಬದಲು ಜನರ ಒಳಿತಿಗಾಗಿ ದುಡಿಯುವವನಾಗಬಹುದು. ಅವರು ತಮ್ಮ ಸಮುದಾಯದಲ್ಲಿ ಅಥವಾ ದೇಶದಲ್ಲಿ ಯೇಸು ಕ್ರಿಸ್ತನಿಗಾಗಿ ಮಿನುಗುವವರಾಗಬಹುದು. ಪ್ರಾರಂಭದಲ್ಲಿ ಚಿಕ್ಕದಾಗಿ ಆಟ ಆಡಿಸುವ ಮೂಲಕ ಮಕ್ಕಳ ಆಸಕ್ತಿಯನ್ನು ನಿಮ್ಮ ಕಡೆಗೆ ಸೆಳೆದುಕೊಳ್ಳಿರಿ. ಯಾರಾದರೂ ವಕೀಲನಂತೆ, ವಿಜ್ಞಾನಿಯಂತೆ, ಆರಕ್ಷನಂತೆ ನಟಿಸಿ ತೋರಿಸಲಿ ಮತ್ತು ಮಕ್ಕಳು ಅವರು ಯಾರೆಂದು ಊಹಿಸಲಿ.

## ಕಂಠಪಾಠ ವಚನ

ಪ್ರತಿಯೊಂದು ಕಂಠಪಾಠ ವಚನವು ಪಾಠಕ್ಕೆ ಅನ್ವಯಿಸುತ್ತದೆ. ಕಂಠಪಾಠವನ್ನು ಆಸಕ್ತಿಕರವನ್ನಾಗಿ ಮಾಡಲು ಸಹಾಯ ಮಾಡುವಂಥ ಯಾವುದಾದರು ಆಟ ಅಥವಾ ಚಟುವಟಿಕೆಯಿದ್ದರೆ ತಿಳಿದುಕೊಂಡು ಅದರಂತೆ ನಡೆದುಕೊಳ್ಳಿರಿ.

## ವಿದ್ಯಾರ್ಥಿಗಳ ಪುಸ್ತಕ

ವಿದ್ಯಾರ್ಥಿ ಪುಸ್ತಕದಲ್ಲಿರುವ ಒಗಟುಗಳನ್ನು ಬಿಡಿಸುವದು ಮಕ್ಕಳಿಗೆ ಬಹಳ ಇಷ್ಟವಾಗುವದು. ಪದಗಳನ್ನು ಕಂಡುಹಿಡಿಯುವದು ಮತ್ತು ಚಿತ್ರಗಳಿಗೆ ಬಣ್ಣ ಹಚ್ಚುವದು ಪ್ರತಿಯೊಂದು ಪಾಠವನ್ನು ದೃಢಪಡಿಸಲು ಸಹಾಯ ಮಾಡುವದು. ಹುಡುಕುವ ಪದಗಳಿಂದ ಮೌಲ್ಯ, ಮಾನವೀಯತೆ ಮತ್ತು ನ್ಯಾಯ ಎಂಬೀ ಪದಗಳ ಬಗ್ಗೆ ಚರ್ಚೆ ಮಾಡಿರಿ ಹಾಗೂ ಈ ಪದಗಳು ನಿಮಗೆ ಹೇಗೆ ಅನ್ವಯವಾಗುತ್ತವೆ ಎಂದು ಮಕ್ಕಳನ್ನು ಕೇಳಿರಿ.

## ಪ್ರಶ್ನೆಗಳು ಮತ್ತು ಉತ್ತರಗಳು (ದೊಡ್ಡ ಮಕ್ಕಳಿಗೆ)

ಲೋಕದಲ್ಲಿ ವಯಸ್ಕರ ಜೀವನವು ಗೊಂದಲದಿಂದ ಕೂಡಿದೆ. ಕಷ್ಟದ ಸಮಸ್ಯೆಗಳೆದುರಾಗುವ ಸಮಯಗಳಲ್ಲಿ ಉತ್ತರ ಕೊಡುವವರು ಯಾರಾದರು ಇರುವದಾದರೆ ನಮಗೆ ಬಹಳ ಸಹಾಯವಾಗುತ್ತದಲ್ಲವೇ? ಆದರೆ ಸಾಮಾನ್ಯವಾಗಿ ಉತ್ತರ ಹೇಳುವವರು ಯಾವಾಗಲೂ ಇರುವದಿಲ್ಲ

### ಕಾರ್ಯಕ್ರಮದ ವಿವರ

ಪ್ರಾರಂಭ
- ಸ್ವಾಗತ
- ಹಾಡು

ನಾಟಕ ಮತ್ತು ಪಾಠ
- ನಾಟಕ ಭಾಗ 1
- ಪಾಠ
- ನಾಟಕ ಭಾಗ 2

ಚಟುವಟಿಕೆಗಳು

ಇತರೆ ಚಟುವಟಿಕೆಗಳಾದ ವಿದ್ಯಾರ್ಥಿ ಪುಸ್ತಕ ಅಥವಾ ತಿಂಡಿ ತಿನ್ನುವಾಗ ಆತ್ಮಚರಿತ್ರೆ ಮತ್ತು ನ್ಯಾಯದ ಭಾಗವನ್ನು ಮಾಡಿರಿ.
- ಕಂಠಪಾಠ ವಚನ
- ವಿದ್ಯಾರ್ಥಿ ಪುಸ್ತಕಗಳು
- ಪ್ರಶ್ನೆಗಳು ಮತ್ತು ಉತ್ತರಗಳು (ದೊಡ್ಡ ವಿದ್ಯಾರ್ಥಿಗಳಿಗೆ)
- ಆಟ (ಆಯ್ಕೆ)

ಮುಕ್ತಾಯ
- ಅಸೈನ್ಮೆಂಟ್
- ಅಸೈನ್ಮೆಂಟ್ ಕಾರ್ಡ್ಸ್

ಆದ್ದರಿಂದ ಬಹುತೇಕ ನಾವೇ ಉತ್ತರಗಳನ್ನು ಕಂಡುಕೊಳ್ಳಬೇಕಾಗುತ್ತದೆ. ದೊಡ್ಡ ಮಕ್ಕಳು ಸಹ ವಯಸ್ಕರಾಗುವ ದಿನಗಳು ಹತ್ತಿರವಾಗುತ್ತಿವೆ. ಆದ್ದರಿಂದ ಒಂದುವೇಳೆ ನಾವು ಸಂಡೇ ಸ್ಕೂಲ್ ನಲ್ಲಿ ಅವರಿಗೆ ಎಲ್ಲಾ ಪ್ರಶ್ನೆಗಳಿಗೂ "ಸರಿಯಾದ ಉತ್ತರವನ್ನು" ಕೊಟ್ಟು ಕಠಿಣ ಪ್ರಶ್ನೆಗಳನ್ನು ತಡೆದರೆ, ಅವರು ತರಬೇತಿ ಹೊಂದುವದಿಲ್ಲ ಮತ್ತು ತಾವಾಗಿಯೇ ಸತ್ಯವೇದದ ಉತ್ತರಗಳನ್ನು ಕಂಡುಹಿಡಿಯಲು ಮುಂದಾಗುವದಿಲ್ಲ. ಅವರಿಗೆ ಕಷ್ಟದ ಪ್ರಶ್ನೆಗಳು ಎದುರಾಗುವಾಗ ಅವರು ಗೊಂದಲಕ್ಕೆ ಒಳಗಾಗುತ್ತಾರೆ ಹಾಗೂ ನಾಶವಾಗುತ್ತಾರೆ ಮತ್ತು ತಮ್ಮ ಕಾಲೇಜ್ ಅಧ್ಯಾಪಕರು ಹಾಗೂ ಬಾಸ್ ಗಳಿಂದ ಲೌಕಿಕ ಉತ್ತರಗಳನ್ನು ಮಾತ್ರವೇ ಪಡೆಯುತ್ತಾರೆ. ಆದ್ದರಿಂದ ದೊಡ್ಡ ಮಕ್ಕಳು ಗಂಭೀರವಾಗಿ ಚಿಂತಿಸಲು ಸಹಾಯವಾಗುವ ಸಲುವಾಗಿ ಈ ಭಾಗವನ್ನು ಉಪಯೋಗಿಸಬಹುದು. ದೊಡ್ಡ ವಿದ್ಯಾರ್ಥಿಗಳ ನಡುವೆ ಚರ್ಚೆಯನ್ನು ಪ್ರಾರಂಭಿಸಿರಿ. ಅವರಿಗೆ "ಸರಿಯಾದ ಉತ್ತರವನ್ನು" ಕೊಡಬೇಡಿರಿ, ಬದಲಾಗಿ ಅವರು ತಾವಾಗಿಯೇ ಸರಿಯಾದ ನಿರ್ಧಾರಕ್ಕೆ ಬರಲು ಅವರನ್ನು ಮುನ್ನಡೆಸಿರಿ. ಶಿಕ್ಷಕರಿಗೆ ಮಾರ್ಗದರ್ಶಕವಾಗಿ ನಾವು ಕೆಲವು ಕಷ್ಟದ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟಿದ್ದೇವೆ.

## ಆಟ

ವಿದ್ಯಾರ್ಥಿಗಳೊಂದಿಗೆ ಆಟ ಆಡಿರಿ! ಮಕ್ಕಳಿಗೆ ಆಟ ಬಹಳ ಪ್ರಾಮುಖ್ಯವಾಗಿದೆ, ಅವರು ಸಾಮಾಜಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಾಯ ಮಾಡುತ್ತದೆ. ಇವುಗಳೊಂದಿಗೆ ಆಟಗಳು ಅವರಿಗೆ ಖುಷಿ ಕೊಡುತ್ತವೆ! ಮಕ್ಕಳು ಬಂದು ಯೇಸು ಕ್ರಿಸ್ತನ ಬಗ್ಗೆ ಕೇಳಿಸಿಕೊಳ್ಳುವಂತೆ ಅವರನ್ನು ಪ್ರೋತ್ಸಾಹಪಡಿಸಲು ಇದು ಬಹಳ ಪರಿಣಾಮಕಾರಿಯಾದ ಸಾಧನವಾಗಿದೆ. ಇದರಿಂದ ಮಕ್ಕಳು ತಮ್ಮ ಸ್ನೇಹಿತರನ್ನೂ ಕರೆದುಕೊಂಡು ಬರಲು ಸಾಧ್ಯವಾಗುತ್ತದೆ.

## ಹೋಮ್ ವರ್ಕ್ ಅಸೈನ್ಮೆಂಟ್

ನಾವು ದೇವರ ವಾಕ್ಯವನ್ನು ಕೇಳಿ ಅದರಂತೆ ನಡೆಯದೆ ಹೋದರೆ ಅದರಿಂದ ನಮಗೆ ಯಾವುದೇ ಪ್ರಯೋಜನವಾಗುವದಿಲ್ಲ ಎಂದು ದೇವರ ವಾಕ್ಯ ಸ್ಪಷ್ಟವಾಗಿ ಹೇಳುತ್ತದೆ (ಯಾಕೋಬ 1:22-25). ಮಕ್ಕಳಿಗೆ ಅವರು ಕಲಿತುಕೊಳ್ಳುವ ವಿಷಯಗಳನ್ನು ಪ್ರತಿದಿನ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ತರಬೇತಿ ಕೊಡಿರಿ. ಕಳೆದ ವಾರದ ಅಸೈನ್ಮೆಂಟ್ ಪೂರ್ತಿಗೊಳಿಸಿರುವ ವಿದ್ಯಾರ್ಥಿಗಳಿಗೆ ಒಂದು ಚಾಕೊಲೇಟ್ ಅಥವಾ ಸಣ್ಣ ಬಹುಮಾನ ಕೊಟ್ಟು ಸನ್ಮಾನಿಸಿರಿ.

## ಕಾರ್ಡ್ಸ್

ಈ ಕಾರ್ಡ್ ಗಳನ್ನು ಹಾಜರಾತಿಯ ಬಹುಮಾನವಾಗಿ ಉಪಯೋಗಿಸಿರಿ. ಪ್ರತಿಯೊಂದು ಕಾರ್ಡ್ ಮುಂಭಾಗದಲ್ಲಿ ಆಕರ್ಷಕ ವಿನ್ಯಾಸವಿರುವದು ಮತ್ತು ಹಿಂಭಾಗದಲ್ಲಿ ದೇವರ ವಾಕ್ಯ ಇರುವದು.

# ರಾಜಮನೆತನದವನು ಅಥವಾ ಹಳ್ಳಿಯವನು? 01

## ಬೆತ್ಲೆಹೇಮಿಗೆ ಪ್ರಯಾಣ: ಲೂಕ 2:1-5

### ನಾಟಕ (ಮೊದಲನೇ ಭಾಗ)



ಏಜೆಂಟ್ ನ್ಯಾಯದ ತಂಡವನ್ನು ಸೇರಿಕೊಂಡನು ಮತ್ತು ನಾಯಕ ಹಾಗೂ ತನಿಖಾಧಿಕಾರಿಯನ್ನು ಮೊದಲ ಬಾರಿಗೆ ಭೇಟಿ ಮಾಡಿದನು. ನಾಯಕನು ಸಂಕ್ಷಿಪ್ತವಾಗಿ ನ್ಯಾಯ ತಂಡದ ಪಾತ್ರವನ್ನು ವಿವರಿಸಿದನು, ಅದೇನೆಂದರೆ: ಟೈಮ್ ಮಷಿನ್ ನಲ್ಲಿ ಪ್ರಯಾಣಿಸುವ ಮೂಲಕ ಸಮಯದ ಹಿಂದೆ ಹೋಗಿ ಯೇಸು ಕ್ರಿಸ್ತನ ಜೀವನವನ್ನು ತನಿಖೆ ಮಾಡೂವದು ಮತ್ತು ನ್ಯಾಯದ ಮಾದರಿಗಳನ್ನು ತನಿಖೆ ಮಾಡುವದು ಹಾಗೂ ಆಧುನಿಕ ಸಮಯಗಳಲ್ಲಿ ಯೇಸು ಕ್ರಿಸ್ತನನ್ನು ಹಿಂಬಾಲಿಸುವದು. ಏಜೆಂಟ್ ನಾಯಕನಿಗೆ ಮತ್ತು ತನಿಖಾಧಿಕಾರಿಗೆ ಸಮಯದ ಹಿಂದೆ ಪ್ರಯಾಣಿಸುವ ಕಾರ್ಯಗಳಲ್ಲಿ ಸಹಾಯಕನಾಗಿರುವನು. ಇಂದಿನ ಕಾರ್ಯ ಯೇಸು ಕ್ರಿಸ್ತನ ತಂದೆತಾಯಿಗಳನ್ನು ಮತ್ತು ಅವರು ಜೀವಿಸಿದ ಸ್ಥಳ ಹಾಗೂ ಸಮಾಜವನ್ನು ಭೇಟಿ ಮಾಡುವದಾಗಿದೆ. ನಾಯಕನು ಕಾರ್ಯಗಳನ್ನು ನಿಯಂತ್ರಿಸುವವನಿಗೆ (ಬೇರೊಬ್ಬ ಪಾತ್ರಧಾರಿ ಅಥವಾ ವೇದಿಕೆಯ ಹೊರಗಿರುವ ಯಾವುದೋ ಕಾಲ್ಪನಿಕ ವ್ಯಕ್ತಿ) ಸನ್ನೆ ಮಾಡುವನು ಮತ್ತು ತನಿಖಾಧಿಕಾರಿ ಹಾಗೂ ಏಜೆಂಟ್ ಜೊತೆ ಟೈಮ್ ಮಿಷನ್ ಹತ್ತುವನು. ಎಲ್ಲಾ ನಾಟಕಗಳಲ್ಲಿಯೂ ಈ ಹಂತದಲ್ಲಿ ಸಾಧ್ಯವಾದರೆ ಟೈಮ್ ಮಿಷನ್ ಅನ್ನು ತಿರುಗಿಸಬೇಕು ಮತ್ತು ಸಮಯದಿಂದ ಹಿಂದೆ ಪ್ರಯಾಣಿಸುವ ಭಾಗಕ್ಕೆ ಅನುಗುಣವಾಗಿ ಶಬ್ದಗಳು ಬರುವಂತೆ ಮಾಡಬೇಕು. ಮುಖ್ಯ ಪಾಠವನ್ನು ಕಲಿಸಿದ ನಂತರ ಈ ಪಾತ್ರಧಾರಿಗಳು ನಾಟಕದ ಎರಡನೇ ಭಾಗಕ್ಕೆ ಹಿಂದಿರುಗಿ ಬರಬೇಕು.

### ಪಾಠ 1

ಯೌವನಸ್ಥ ದಂಪತಿಗಳಿಬ್ಬರು ಉರಿ ಬಿಸಲಿನಲ್ಲಿ ಬಹುದೂರದಲ್ಲಿದ್ದ ಊರಿಗೆ ಪ್ರಯಾಣಿಸುತ್ತಾ ಇದ್ದರು. ಅವರ ದೇಶದ ಅರಸನು ತನ್ನ ಪ್ರಜೆಗಳಿಗೆ ನೀವೆಲ್ಲರೂ ಜನಗಣತಿಗಾಗಿ ನಿಮ್ಮ ಸ್ವಂತ ಊರುಗಳಿಗೆ ಹೋಗಬೇಕು ಎಂದು ಆಜ್ಞಾಪಿಸಿದ್ದನು. ಆದ್ದರಿಂದ ಅವರು ತಮ್ಮ ಮೂಲಪಿತೃಗಳ ಊರಾದ ಬೆತ್ಲೆಹೇಮಿಗೆ ಹೊರಡಲು ಐದು ದಿನಗಳ ಪ್ರಯಾಣವನ್ನು ಕೈಗೊಂಡರು. ಆಗಿನ ಕಾಲದಲ್ಲಿ ಕಾರ್, ಬಸ್, ವಿಮಾನ ಅಥವಾ ಸೈಕಲ್ ಸಹ ಇರಲಿಲ್ಲ, ಆದ್ದರಿಂದ ಅವರು ನಡೆದುಕೊಂಡು ಹೋಗುತ್ತಿದ್ದರು. ಬಹುಶಃ ಅವರ ಬಳಿ ಕತ್ತೆ ಇದ್ದಿರಬಹುದು, ಆದರೂ ಅವರು ನಡೆದುಕೊಂಡೇ ಹೋಗುತ್ತಾ ಇದ್ದರು. ಅವರಂತೆಯೇ ಅನೇಕರು ನಡೆದುಕೊಂಡು ತಮ್ಮ ಊರುಗಳಿಗೆ ಹೋಗುತ್ತಾ ಇದ್ದರು.

ಯೋಸೇಫನು ಮತ್ತು ಮರಿಯಳು ಯೌವನಸ್ಥರಾಗಿದ್ದು ಅವರಿಬ್ಬರಿಗೂ ಮದುವೆಗೆ ನಿಶ್ಚಯವಾಗಿತ್ತು. ಅವರು ಐಶ್ವರ್ಯವಂತರಾಗಿರಲಿಲ್ಲ. ಯೋಸೇಫನು ಬಡಗಿಯ ಕೆಲಸ ಮಾಡುವವನಾಗಿದ್ದನು ಮತ್ತು ಮರಿಯಳು ಸಾಧಾರಣ ಹೆಣ್ಣು ಮಗಳಾಗಿದ್ದಳು. ಅವರಲ್ಲಿ ವಿಶೇಷವಾದ ಕಾರ್ಯಗಳು ಯಾವುವೂ ಇರಲಿಲ್ಲ. ಆದರೂ ಯೋಸೇಫನು ಮತ್ತು ಮರಿಯಳು ವಿಶೇಷರಾಗಿದ್ದರು. ಅವರಿಬ್ಬರೂ ಇಸ್ರಾಯೇಲ್ಯರ ಹಳೆಯ ಅರಸನಾದ ದಾವೀದನ ಸಂತತಿಯವರಾಗಿದ್ದರು. ಇದು ಬಹಳ ಪ್ರಾಮುಖ್ಯವಾಗಿದೆ ಯಾಕಂದರೆ ದಾವೀದನು, ಮಹಾ ಅರಸನಾಗಿದ್ದನು, ಇದಲ್ಲದೆ "ದೇವರ ಹೃದಯಕ್ಕೆ ಒಪ್ಪುವ ಮನುಷ್ಯನಾಗಿದ್ದನು." ಇದರ ಅರ್ಥ ಯೋಸೇಫನು ಮತ್ತು ಮರಿಯಳು ರಾಜಮನೆತನದವರಾಗಿದ್ದರು ಯಾಕಂದರೆ ಅವರ ಮೂಲಪಿತೃಗಳು ಅರಸರಾಗಿದ್ದರು. ಅವರಿಬ್ಬರಲ್ಲಿ ಯಾರಾದರು ಒಬ್ಬರು ಅಥವಾ ಅವರ ಮಕ್ಕಳಲ್ಲಿ ಯಾರಾದರು ಒಬ್ಬರು

ಕಾನೂನಿನ ಪ್ರಕಾರ ಅರಸರಾಗಬಹುದಾಗಿತ್ತು. ಆದರೆ, ಆ ಸಮಯದಲ್ಲಿ, ಇಸ್ರಾಯೇಲ್ಯರಿಗೆ ಸ್ವಂತ ಅರಸನಿರಲಿಲ್ಲ. ಕೈಸರನೆಂಬ ಬೇರೊಬ್ಬ ಅರಸನು ಅವರ ಮೇಲೆ ಆಳ್ವಿಕೆ ಮಾಡುತ್ತಿದ್ದನು ಮತ್ತು ಅವರಿಗೆ ಬೆತ್ಲೆಹೇಮಿಗೆ ಹೋಗುವಂತೆ ಆಜ್ಞಾಪಿಸಿದವನು ಅವನೇ ಆಗಿದ್ದಾನೆ.

ಇದು ನಿಜವಾಗಿಯೂ ಆಶ್ಚರ್ಯಕರವಾಗಿದೆ ಯಾಕಂದರೆ ದೇವರ ಪರವಾಗಿ ಮಾತನಾಡುತ್ತಿದ್ದ ಹಳೆಯ ಪ್ರವಾದಿಗಳು ಮೆಸ್ಸೀಯನೆಂದು ಕರೆಯಲ್ಪಡುವ ಹೊಸ ಅರಸನು ಬೆತ್ಲೆಹೇಮಿನಲ್ಲಿ ಹುಟ್ಟುವನು ಎಂದು ಪ್ರವಾದಿಸಿದ್ದರು. ಬೆತ್ಲೆಹೇಮ್ ದಾವೀದನ ಪಟ್ಟಣವಾಗಿದೆ ಮತ್ತು ಯೋಸೇಫನು ಹಾಗೂ ಮರಿಯಳು ದಾವೀದನ ಸಂತತಿಯಾಗಿದ್ದಾರೆ.

ಹೀಗೆ, ವೇದಿಕೆಯು ಸಿದ್ಧವಾಯಿತು. ರಾಜಮನೆತನದವರಾದ ಇಬ್ಬರು ದಂಪತಿಗಳು ಹೊಸ ಅರಸನು ಹುಟ್ಟುವ ಸ್ಥಳಕ್ಕೆ ಹೋಗುತ್ತಿದ್ದರು. ಇದು ಕಾಕತಾಳೀಯವಲ್ಲ ಬದಲಾಗಿ ದೇವರ ಅದ್ಭುತವಾದ ಯೋಜನೆಯಾಗಿದೆ.

ಈಗ ಅವರು ರಾಜಮನೆತನವರಾಗಿದ್ದಾರೋ ಅಥವಾ ಸಾಮಾನ್ಯರಾಗಿದ್ದಾರೋ? ಅವರು ಎರಡೂ ಆಗಿದ್ದಾರೆ!

ನಾವು ಸಹ ಆತನಿಗೆ ಮಕ್ಕಳಾಗಬೇಕೆಂಬದು ದೇವರ ಬಯಕೆಯಾಗಿದೆ! ನಿಜವಾಗಿ ಹೇಳುವದಾದರೆ, ನಾವು ದೇವರಿಗೆ ಕುಮಾರರು ಹಾಗೂ ಕುಮಾರಿಯರಾಗುವದನ್ನು ಸಾಧ್ಯವನ್ನಾಗಿಸುವದಕ್ಕಾಗಿಯೇ ದೇವರು ಯೇಸು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿದನು! ನೀವು ದೇವರ ಮಗುವಾಗಿದ್ದೀರೋ? ದೇವರನ್ನು "ಅಪ್ಪಾ ತಂದೆಯೇ" ಎಂದು ಕರೆಯುತ್ತೀರೋ?

## ಕಂಠಪಾಠ ವಚನ 1

೧ ಪೇತ್ರನು 2:9 "ನೀವು ದೇವರು ಆಯ್ದುಕೊಂಡ ಜನಾಂಗ, ರಾಜಯಾಜಕರು, ಪವಿತ್ರ ಪ್ರಜೆ, ದೇವರ ಸ್ವಕೀಯ ಜನ; ಅವರ ಅದ್ಭುತ ಕಾರ್ಯಗಳನ್ನು ಪ್ರಚುರಪಡಿಸುವುದಕ್ಕಾಗಿಯೇ ಆಯ್ಕೆಯಾದವರು. ಕಾರ್ಗತ್ತಲಿನಿಂದ ತಮ್ಮ ಅದ್ಭುತಕರವಾದ ಬೆಳಕಿಗೆ ನಿಮ್ಮನ್ನು ಕರೆತಂದವರು ಅವರೇ. "

## ನಾಟಕ (ಭಾಗ ಎರಡು)

ಪಾಠದ ನಂತರ ನಾಯಕ, ತನಿಖಾಧಿಕಾರಿ ಮತ್ತು ಏಜೆಂಟ್ ಟೈಮ್ ಮಿಷನ್ ನಿಂದ ಪ್ರಸ್ತುತ ಸಮಯಕ್ಕೆ ಬಂದರು. ಅವರು ತಾವು ನೋಡಿದವುಗಳ ಬಗ್ಗೆ ಚರ್ಚೆ ಮಾಡಲು ಪ್ರಾರಂಭಿದರು, ಅದೇನೆಂದರೆ: ಮರಿಯಳು ಮತ್ತು ಯೋಸೇಫನು ಸಾಧಾರಣರಂತೆಯೇ ಇದ್ದರು, ಅವರಿಗೂ ಬೇರೆಯವರಿಗೂ ಯಾವುದೇ ವ್ಯತ್ಯಾಸವಿಲ್ಲ. ಚರಿತ್ರೆಯಾದ್ಯಂತ ಎಲ್ಲರಿಗೂ ತಿಳಿದಿರುವಂತೆ ಅವರು ಪ್ರಸಿದ್ಧರಾದದ್ದು ಮತ್ತು ತನ್ನ ಮಗನ ಪಾಲನೆಗಾಗಿ ದೇವರು ಅವರಿಬ್ಬರನ್ನು ಆರಿಸಿಕೊಂಡದ್ದು ಬಹಳ ಆಶ್ಚರ್ಯದ ಸಂಗತಿಯಾಗಿದೆ. ಆಗ ಏಜೆಂಟ್ ನಾನು ಸಾಮಾನ್ಯವಾಗಿ ಎಲ್ಲರೊಂದಿಗೆ ಸರಿಯಾಗಿ ನಡೆದುಕೊಳ್ಳುತ್ತಾ ಇರಲಿಲ್ಲ ಆದರೆ ಪ್ರತಿಯೊಬ್ಬ ವ್ಯಕ್ತಿಯೂ ದೇವರ ದೃಷ್ಟಿಯಲ್ಲಿ ಬಹಳ ಅಮೂಲ್ಯನಾಗಿದ್ದಾನೆ ಎಂಬದು ನನಗೆ ಈಗ ಅರಿವಾಯಿತು ಎಂದು ಹೇಳಿದನು.

## ನ್ಯಾಯ 1

ಕಷ್ಟದ ಪರಿಸ್ಥಿತಿಯಲ್ಲಿರುವ ಜನರಿಗೆ ಹೆಚ್ಚಿನ ಅಧಿಕಾರಗಳಾಗಲಿ ಅಥವಾ ಮೌಲ್ಯಗಳಾಗಲಿ ಇರುವದಿಲ್ಲ ಎಂದು ಯೋಚಿಸುವದು ಸುಲಭ. ಆದರೆ ಜನರೆಲ್ಲರೂ ದೇವರ ಸೃಷ್ಟಿಯಾಗಿದ್ದಾರೆ ಮತ್ತು ಆತನು ಪ್ರತಿಯೊಬ್ಬನಿಗೂ ಬೆಲೆ ಕೊಡುತ್ತಾನೆ ಹಾಗೂ ಯೇಸು ಕ್ರಿಸ್ತನ ಮೂಲಕ ದೇವರ ಕುಮಾರರು ಮತ್ತು ಕುಮಾರಿಯರು ಆಗಲು ಮಾರ್ಗಗಳನ್ನು ಆತನೇ ತಿಳಿಸುತ್ತಾನೆ.


## ಆತ್ಮಚರಿತ್ರೆ (ತಂದೆ) 1

ತಂದೆಯಾದವನಿಗೆ ತನ್ನ ಕುಟುಂಬವನ್ನು ನೋಡಿಕೊಳ್ಳುವ ಪ್ರಾಥಮಿಕ ಜವಾಬ್ದಾರಿಕೆ ಇರುತ್ತದೆ. ಇದರ ಅರ್ಥ ಮಕ್ಕಳನ್ನು

ಬೆಳೆಸುವ ಹಾಗೂ ಅವರಿಗೆ ತರಬೇತಿ ನೀಡುವ ಜವಾಬ್ದಾರಿಕೆಯನ್ನು ತಾಯಿಯ ಮೇಲೆ ಹಾಕದೆ, ತಂದೆಯಾದವನು ಎಲ್ಲದರಲ್ಲಿಯೂ ಆಸಕ್ತಿಯಿಂದ ನಡೆದುಕೊಳ್ಳಬೇಕು. ಆತನು ಪ್ರತಿಯೊಂದು ಮಗುವಿನ ವಿಶೇಷ ಅವಶ್ಯಕತೆಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು ಹಾಗೂ ತಾಯಿಯಾದವಳು ಮಗುವಿನಲ್ಲಿರುವ ವಿಶಿಷ್ಟವಾದ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ದುಡಿಯಬೇಕು.

*ಜವಾಬ್ದಾರಿಕೆಗಳು:* ತಂದೆಯಾದವನು ತನ್ನ ವೈಯಕ್ತಿಕ ಆಸಕ್ತಿಗಳು ಹಾಗೂ ಬಯಕೆಗಳಿಗೆ ದ್ವಿತೀಯ ಸ್ಥಾನವನ್ನು ಕೊಟ್ಟು, ತನ್ನ ಕುಟುಂಬದ ಅವಶ್ಯಕತೆಗಳ ಕಡೆಗೆ ಗಮನಹರಿಸುವದನ್ನು ಪ್ರಥಮ ಆದ್ಯತೆಯಾಗಿ ಕಲಿತುಕೊಳ್ಳಬೇಕು. ಸಾಮಾನ್ಯವಾಗಿ ತಾಯಿ ಮಕ್ಕಳೊಂದಿಗೆ ನೇರವಾಗಿ ಕಾರ್ಯಮಾಡುವದರಿಂದ, ತಂದೆಯಾದವನು ಆ ಆಕೆಗೆ ಸಹಾಯ ಮಾಡಬಹುದು ಮತ್ತು ತಾಯಿಗೆ ಭಾವನಾತ್ಮಕವಾಗಿ ಮತ್ತು ಶಾರೀರಿಕವಾಗಿ ಹೇಗೆ ಸಹಾಯ ಮಾಡಬಹುದು ಎಂಬದರ ಬಗ್ಗೆ ಯೋಚಿಸಬೇಕು. ತನ್ನ ಕೆಲಸ ಮತ್ತು ಜೀವನದ ಆಯ್ಕೆಗಳು ತನ್ನ ಮೇಲೆ ಮಾತ್ರವಲ್ಲ ಬದಲಾಗಿ ತಾಯಿ ಹಾಗೂ ಮಕ್ಕಳ ಮೇಲೆಯೂ ಪ್ರಭಾವ ಬೀರುತ್ತದೆ ಎಂಬದನ್ನು ತಂದೆಯಾದವನು ಅರಿತುಕೊಳ್ಳಬೇಕು.

*ಅವಕಾಶಗಳು:* ತಂದೆಯಾದವನಿಗೆ ತನ್ನ ಕುಟುಂಬದವರನ್ನು ಫಲದಾಯಕ ಜೀವನದ ಕಡೆಗೆ ನಡೆಸುವ ವಿಶಿಷ್ಟವಾದ ಅವಕಾಶವಿರುತ್ತದೆ. ಕೀರ್ತನೆ 127:4-5 ಹೇಳುವದೇನೆಂದರೆ, ಯೌವನದಲ್ಲಿ ಹುಟ್ಟಿದ ಮಕ್ಕಳು ಯುದ್ಧವೀರನ ಕೈಯಲ್ಲಿರುವ ಅಂಬುಗಳಂತಿದ್ದಾರೆ. ಇವುಗಳಿಂದ ತನ್ನ ಬತ್ತಳಿಕೆಯನ್ನು ತುಂಬಿದವನು ಧನ್ಯನು. ಅಬ್ರಹಾಮನ ತಂದೆಯಾದ ತೆರಹನು (ಆದಿ 11:31) ಕಾನಾನ್ ದೇಶದಲ್ಲಿ ತನ್ನ ಕುಟುಂಬದವರಿಗೆ ಉತ್ತಮ ಸ್ಥಿತಿ ದೊರೆಯುವದೆಂಬ ದರ್ಶನಗಳನ್ನು ನೋಡಿರಬಹುದು. ಅವನು ನಾಗರೀಕತೆಯ ಪ್ರಾರಂಭದಲ್ಲಿದ್ದ ಊರ್ ಪಟ್ಟಣದಿಂದ ಹೊರಟು ಬೇರೊಂದು ಸ್ಥಳಕ್ಕೆ ಬಂದು ತಾನೇ ಒಂದು ಪಟ್ಟಣವನ್ನು ಕಟ್ಟಿದನು. ಆದರೆ ಅವನ ಮಗನಾದ ಅಬ್ರಹಾಮನಿಗೆ ವಾಗ್ದಾನ ಮಾಡಲ್ಪಟ್ಟ ಕಾನಾನ್ ದೇಶದ ಕಡೆಗೆ ಪ್ರಯಾಣಿಸುವ ಬಗ್ಗೆ ತೆರೆದ ಮನಸ್ಸಿದ್ದ ಹಾಗೆ ತೋರುತ್ತದೆ. ತಂದೆಯಾದವನು ತನ್ನ ಭವಿಷ್ಯದ ಸಂತತಿಯ ಮೇಲೆ ಅಪಾರವಾದ ಪ್ರಭಾವ ಬೀರುವ ಶಕ್ತಿಯುಳ್ಳವನಾಗಿದ್ದಾನೆ.



## ಪ್ರಶ್ನೆಗಳು ಮತ್ತು ಉತ್ತರಗಳು 1


ನಾನು ದೇವರ ಮಗು ಎಂದು ತಿಳಿದುಕೊಳ್ಳುವದು ಹೇಗೆ? (ಯೋಹಾನ 1:12-13 ವಾಕ್ಯಗಳನ್ನು ಓದುವಂತೆ ಮಕ್ಕಳನ್ನು ಪ್ರೋತ್ಸಾಹಪಡಿಸಿರಿ ಮತ್ತು ಅದರ ಬಗ್ಗೆ ಚರ್ಚಿಸಲು ಅವರಿಗೆ ಸಮಯ ಕೊಡಿರಿ)

ಒಂದುವೇಳೆ ನಾನು ತಪ್ಪು ಮಾಡಿದರೆ, ದೇವರು ನನಗೆ ಕೊಡುವ ಆಶೀರ್ವಾದಗಳನ್ನು ಕಳೆದುಕೊಳ್ಳುತ್ತೇನೋ? (ಹೌದು . . . ತಪ್ಪಾದ ಮೌಲ್ಯಗಳುಳ್ಳವರಾದ್ದರಿಂದ ತಮ್ಮ ಎಲ್ಲವುಗಳನ್ನು ಕಳೆದುಕೊಂಡವರು ಅನೇಕರಿದ್ದಾರೆ, ಆದರೂ ಇನ್ನೂ ಅನೇಕರು ತಮ್ಮ ಆಶೀರ್ವಾದಗಳಿಗಾಗಿ ಹೋರಾಡಿದ್ದಾರೆ!)


ದೇವರು ನನ್ನಿಂದ ಏನನ್ನು ಬಯಸುತ್ತಾನೆ? (ನಾವೆಲ್ಲರೂ ದೇವರಿಂದ ವಿವಿಧ ವರಗಳನ್ನು ಹಾಗೂ ಸಾಮರ್ಥ್ಯಗಳನ್ನು ಹೊಂದಿದ್ದೇವೆ. ಈ ಲೋಕದಲ್ಲಿ ತನ್ನ ಪ್ರಭಾವವನ್ನು ಪ್ರಚುರಪಡಿಸಲು ದೇವರು ನಮ್ಮೆಲ್ಲರನ್ನು ಒಂದಲ್ಲಾ ಒಂದು ರೀತಿಯಲ್ಲಿ ಉಪಯೋಗಿಸಿಕೊಳ್ಳುವನು ಮತ್ತು ಆತನಿಗಾಗಿ ಅನೇಕರನ್ನು ಸಂಧಿಸಲು ಬಲಪಡಿಸುವನು. ದೇವರು ನಮ್ಮನ್ನು ನಮ್ಮ ವರಗಳ ಹೊರತಾಗಿಯೂ ಉಪಯೋಗಿಸುವನು ಮತ್ತು ಕೆಲವೊಮ್ಮೆ ನಮ್ಮ ಬಲಹೀನತೆಯ ಮೂಲಕವೇ ಆತನು ತನ್ನ ಬಲವನ್ನು ತೋರ್ಪಡಿಸುವನು. ಆತನು ಸಿದ್ಧವಾಗಿರುವ ಹೃದಯ ಮತ್ತು ಆತನು ಹೇಳುವ ಕಾರ್ಯಗಳನ್ನು ಮಾಡಲು ಯಾವಾಗಲೂ ಸಿದ್ಧರಾಗಿರುವವರಿಗಾಗಿ ಚಿಂತಿಸುತ್ತಾನೆ).

ಯೋಸೇಫನು ಮತ್ತು ಮರಿಯಳು ಯಾವ ಊರಿಗೆ ಹೋದರು? (ಬೆತ್ಲೆಹೇಮ್)
ಯೋಸೇಫನು ಮತ್ತು ಮರಿಯಳ ಕಾಲದಲ್ಲಿ ರೈಲು ಇತ್ತೇ? (ಇಲ್ಲ, ಆಗ ಕತ್ತೆಗಳು ಎಳೆಯುತ್ತಿದ್ದ ಬಂಡಿಗಳು ಮಾತ್ರವೇ ಇದ್ದವು ಅಥವಾ ಕುದುರೆಗಳು ಹಾಗೂ ಒಂಟೆಗಳು ಮಾತ್ರವೇ ಇದ್ದವು).

## ಒಗಟಿನ ಉತ್ತರಗಳು 1







## ಆಟ 1

ಗೋಣಿಚೀಲದ ಓಟ



ಕೆಲವು ದೊಡ್ಡ ಚೀಲಗಳನ್ನು ತನ್ನಿರಿ, ಅಂದರೆ ಆಲೂಗಡ್ಡೆ ಚೀಲ ಅಥವಾ ಮಕ್ಕಳು ಚೀಲದೊಳಗೆ ಹೋಗಿ ಜಿಗಿಯಿತ್ತಾ ಅಂತಿಮ ಗೆರೆಯನ್ನು ತಲುಪಲು ಅನುಕೂಲವಾಗುವಂಥದ್ದಾಗಿರಬೇಕು. ಪ್ರಾರಂಭ ಗೆರೆ ಗಲಿಲಾಯ ಮತ್ತು ಮುಕ್ತಾಯದ ಗೆರೆ ಬೆತ್ಲೆಹೇಮ್ ಎಂದು ಹೇಳುವ ಮೂಲಕ ಆಟವನ್ನು ಸತ್ಯವೇದದ ಕಥೆಗೆ ಹೋಲಿಸಿರಿ. ಒಂದುವೇಳೆ ಮಕ್ಕಳ ಸಂಖ್ಯೆ ಹೆಚ್ಚಾಗಿದ್ದರೆ, ಒಳ್ಳೆಯ ನಡತೆಯುಳ್ಳವರಿಗೆ ಬಹುಮಾನ ಕೊಡಲಾಗುವದೆಂದು ಹೇಳಿ ಕೆಲವರನ್ನು ಆರಿಸಿಕೊಳ್ಳಿರಿ. ನೀವು ಮಕ್ಕಳನ್ನು ತಂಡವಾಗಿ ವಿಭಾಗಿಸಬಹುದು ಮತ್ತು ರಿಲೇ ಓಟವನ್ನು ಓಡಿಸಬಹುದು.

## ಹೋಮ್ ವರ್ಕ್ 1




ನೀವು ಸಾಮಾನ್ಯ ವ್ಯಕ್ತಿ ಎಂದು ತೋರಿಸುವ 5 ಕಾರಣಗಳನ್ನು ಮತ್ತು ದೇವರ ಕುಟುಂಬದವರೆಂದು ತೋರಿಸಲು 5 ಕಾರಣಗಳನ್ನು ಬರೆಯಿರಿ. ಉದಾಹರಣೆಗೆ: ನನ್ನ ಊರಲ್ಲಿರುವ ಯಾರಿಗೂ ನನ್ನ ಹೆಸರು ಗೊತ್ತಿಲ್ಲ. ದೇವರಿಗೆ ನನ್ನ ಹೆಸರು ಗೊತ್ತು ಮತ್ತು ಆತನು ಅದನ್ನು ಜೀವಬಾಧ್ಯರ ಪುಸ್ತಕದಲ್ಲಿ ಬರೆದಿದ್ದಾನೆ.

# ಒಳ್ಳೆಯ ಸ್ನೇಹಿತನು

02

## ಯೋಸೇಫನು ಮರಿಯಳನ್ನು ಮದುವೆ ಮಾಡಿಕೊಂಡನು: ಮತ್ತಾಯ 1:18-25



### ನಾಟಕ (ಮೊದಲನೆಯ ಭಾಗ)

ನಮ್ಮ ನಾಯಕನಿಗೆ ಟೈಮ್ ಮಷಿನ್ ಸರಿಯಾಗಿ ಉಪಯೋಗಿಸುವ ಅನುಭವವಿಲ್ಲ ಎಂಬ ಗಾಳಿಸುದ್ದಿಯನ್ನು ಏಜೆಂಟ್ ತನಿಖಾಧಿಕಾರಿಯೊಂದಿಗೆ ಹಂಚಿಕೊಳ್ಳುತ್ತಾನೆ. ಆದ್ದರಿಂದ ಯೇಸು ಕ್ರಿಸ್ತನ ಜೀವನದ ಕಥೆಯನ್ನು ನೋಡಲು ಟೈಮ್ ಮಿಷನ್ ಹತ್ತುವ ಸಮಯದಲ್ಲಿ, ನಾಯಕನು ನಮ್ಮನ್ನು ಪ್ರಸ್ತುತ ಸಮಯಕ್ಕೆ ಹಿಂದಿರುಗಿ ಕರೆದುಕೊಂಡು ಬರುತ್ತಾನೋ ಇಲ್ಲವೋ ಎಂದು ಸಂದೇಹಪಟ್ಟರು.

### ಪಾಠ 2

ಯೋಸೇಫನಿಗೆ ದೊಡ್ಡ ಸಮಸ್ಯೆ ಎದುರಾಯಿತು. ಮರಿಯಳು ಎಂಬ ಹುಡುಗಿಯೊಂದಿಗೆ ಅವನಿಗೆ ಮದುವೆ ನಿಶ್ಚಯವಾಗಿತ್ತು ಆದರೆ ಆಕೆ ಗರ್ಭಿಣಿಯಾಗಿದ್ದಳು. ಮದುವೆಯಾದವರಿಗೆ ಮಕ್ಕಳಾಗುವದು ಸಹಜ ಎಂಬ ಸಂಗತಿ ಎಲ್ಲರಿಗೂ ಚೆನ್ನಾಗಿ ತಿಳಿದಿತ್ತು. ಮರಿಯಳಿಗೆ ತೊಂದರೆಯಾಗದ ರೀತಿಯಲ್ಲಿ ಯೋಸೇಫನು ಯಾರಿಗೂ ತಿಳಿಯದಂತೆ ತಮ್ಮ ನಿಶ್ಚಿತಾರ್ಥವನ್ನು ಮುರಿಯಲು ತೀರ್ಮಾನಿಸಿದನು. ಆಗ ಯೋಸೇಫನಿಗೆ ಒಂದು ಕನಸು ಬಿತ್ತು, ಆ ಕನಸಿನಲ್ಲಿ ದೇವದೂತನು ಅವನಿಗೆ ನೀನು ಮರಿಯಳನ್ನು ಹೆಂಡತಿಯನ್ನಾಗಿ ತೆಗೆದುಕೊಳ್ಳಲು ಹೆದರಬೇಡ, ಯಾಕಂದರೆ ಆಕೆ ಪವಿತ್ರಾತ್ಮನ ಮೂಲಕ ಗರ್ಭಧರಿಸಿದ್ದಾಳೆ ಅಂದನು. ಹಾಗೆಯೇ ಹುಟ್ಟುವ ಮಗನಿಗೆ ಯೇಸು ಎಂದು ಹೆಸರಿಡಬೇಕು, ಯಾಕಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸುವನು ಅಂದನು. ಯೋಸೇಫನು ತನಗೆ ಹೇಳಿದಂತೆಯೇ ಮಾಡಿದನು.

ಯೋಸೇಫನಿಗೆ ಮರಿಯಳಿಗೆ ಒಳ್ಳೆಯ ಸ್ನೇಹಿತನಾಗಿದ್ದನು! ಅವನು ಮರಿಯಳ ಒಳ್ಳೆಯ ಗುಣವನ್ನು ನಂಬಿದನು ಮತ್ತು ಆಕೆಯನ್ನು ಬೆಂಬಲಿಸಿದನು.

ನೀವು ಮಾಡದೆ ಇರುವ ತಪ್ಪನ್ನು ಇತರರು ನಿಮ್ಮ ಮೇಲೆ ಹೊರಿಸಿರುವ ಅನುಭವ ನಿಮಗೆ ಆಗಿದೆಯೇ? ಅಥವಾ ಸತ್ಯವಲ್ಲದ ಯಾವುದೋ ಗಾಳಿ ಸುದ್ದಿ ನಿಮ್ಮ ವಿಷಯದಲ್ಲಿ ಪ್ರಾರಂಭವಾಗಿದೆಯೇ? ಇಂಥ ಸಮಯಗಳಲ್ಲಿ ನಿಮ್ಮನ್ನು ನಂಬಿ ನಿಮ್ಮ ಪರವಾಗಿ ಮಾತನಾಡುವ ಸ್ನೇಹಿತನು ನಿಮಗಿದ್ದರೆ ಚೆನ್ನಾಗಿರುತ್ತದೆ ಅಲ್ಲವೇ?

ಸಾಮಾಜಿಕ ಮಾಧ್ಯದಲ್ಲಿ ಸ್ವಾರ್ಥಿಗಳಾಗಿ ನಡೆದುಕೊಳ್ಳುವದು ಅಥವಾ ಸಮುದಾಯದಲ್ಲಿ ಗುಣುಗುಟ್ಟುವದು ಸುಲಭ. ಹೀಗೆ ಅನೇಕ ಸುಳ್ಳು ಆರೋಪಗಳು ಮತ್ತು ಗಾಳಿಸುದ್ದಿಗಳು ಹರಡಲಾರಂಭಿಸಿ ಹೇಳ ಹೆಸರಿಲ್ಲದೆ ಮಾಯವಾಗಿವೆ. ಇಂಥ ವಿಷಯಗಳು ಜನರನ್ನು ಬಹಳವಾಗಿ ನೋಯಿಸುವ ಶಕ್ತಿಯನ್ನು ಹೊಂದಿರುತ್ತವೆ.

ನೀವು ಸಹ ಇತರರಿಗೆ ಒಳ್ಳೆಯ ಸ್ನೇಹಿತರಾಗಬಹುದು! ಇತರರ ಬಗ್ಗೆ ಯಾರಾದರೂ ಗಾಳಿಮಾತುಗಳನ್ನು ಹೇಳಿದರೆ ಅಥವಾ ಗುಣಗುಟ್ಟಿದರೆ ಅವುಗಳನ್ನು ನಂಬಬೇಡಿರಿ. ಬದಲಾಗಿ ಒಳ್ಳೆಯ ಸ್ನೇಹಿತರಾಗಿ ನಡೆದುಕೊಳ್ಳಿರಿ. ತಪ್ಪಾದ ಆರೋಪಗಳನ್ನು ಎದುರಿಸುವವರ ಪರವಾಗಿ ಮಾತನಾಡಿರಿ. ಅಂತರ್ಜಾಲದಲ್ಲಿ ಯಾರ ಬಗ್ಗೆಯೂ ನಕಾರಾತ್ಮಕ ವಿಷಯಗಳನ್ನು ಹಾಕಬೇಡಿರಿ. ಹಾಗೆಯೇ ನಕಾರಾತ್ಮಕ ವಿಷಯಗಳನ್ನು ಯಾರಿಗೂ ಕಳುಹಿಸಬೇಡಿರಿ.

ಯೇಸು ಕ್ರಿಸ್ತನು ನಮಗೆ ಒಳ್ಳೆಯ ಸ್ನೇಹಿತನಾಗಿದ್ದಾನೆ. 1 ಯೋಹಾನ 2:1 ಹೇಳುವದೇನಂದರೆ ಯೇಸು ಕ್ರಿಸ್ತನು ಯಾವಾಗಲೂ ತಂದೆಯಾದ ದೇವರೊಂದಿಗಿದ್ದು ನಮ್ಮ ಬಗ್ಗೆ ಒಳ್ಳೆಯ ವಿಷಯಗಳನ್ನು ಹೇಳುವವನಾಗಿದ್ದಾನೆ.

## ಕಂಠಪಾಠ ವಚನ 2

ಯಾಕೋಬನು 4:11 "ಸಹೋದರರೇ, ಒಬ್ಬರನ್ನೊಬ್ಬರು ನಿಂದಿಸಬೇಡಿ. ಯಾರಾದರೂ ತನ್ನ ಸಹೋದರನನ್ನು ನಿಂದಿಸಿದರೆ ಅಥವಾ ಖಂಡಿಸಿದರೆ, ಅಂಥವನು ಧರ್ಮಶಾಸ್ತ್ರವನ್ನೇ ನಿಂದಿಸಿ ಖಂಡಿಸುತ್ತಾನೆ. ನೀನು ಧರ್ಮಶಾಸ್ತ್ರವನ್ನುಖಂಡಿಸಿದರೆ, ನ್ಯಾಯಾಧಿಪತಿ ಎನಿಸಿಕೊಳ್ಳುವೆಯೇ ಹೊರತು ನೀನು ಅದನ್ನು ಅನುಸರಿಸಿ ನಡೆಯುವವನಾಗುವುದಿಲ್ಲ"

## ನಾಟಕ (ಭಾಗ ಎರಡು)

ಮುಖ್ಯ ಪಾಠದ ನಂತರ, ಅವರು ಪ್ರಸ್ತುತ ಸಮಯಕ್ಕೆ ಬರುವ ಸಿದ್ಧತೆ ಮಾಡಿಕೊಳ್ಳುವಾಗ, ಟೈಮ್ ಮೆಷಿನ್ ಕೆಟ್ಟು ನಿಂತು ಹೋಗುತ್ತದೆ. ಏಜೆಂಟ್ ಗೆ ಏನು ಮಾಡಬೇಕೆಂದೇ ಗೊತ್ತಾಗುವದಿಲ್ಲ, ಆದರೆ ನಾಯಕನು ಮೆಷಿನ್ ಮೇಲೆ ಹತ್ತಿ ಕೆಲವು ಮೆಕಾನಿಕ್ ಗಳೊಂದಿಗೆ ಸೇರಿ ರಿಪೇರಿ ಮಾಡುತ್ತಾನೆ. ಅವರು ಪ್ರಸ್ತುತ ಸಮಯಕ್ಕೆ ಬಂದಾಗ, ಇಬ್ಬರು ಏಜೆಂಟ್ ಗಳಿಗೆ ತಮ್ಮ ನಾಯಕನ ಕುರಿತು ತಾವು ಸಂದೇಹಪಡಬಾರದಾಗಿತ್ತು ಎಂಬದು ಅರಿವಾಗುತ್ತದೆ ಹಾಗೂ ಗಾಳಿ ಸುದ್ದಿಗಳನ್ನು ಹರಡಿಸಬಾರದು ಎಂದು ಅವರು ತೀರ್ಮಾನಿಸಿಕೊಳ್ಳುತ್ತಾರೆ.

## ನ್ಯಾಯ 2


ಸಹಜವಾಗಿ ನಾವು ಇತರರಲ್ಲಿರುವ ತಪ್ಪುಗಳನ್ನು ನೋಡುತ್ತೇವೆ. ಯಾಕಂದರೆ ನಾವು ಅವರಿಗಿಂತ ಉತ್ತಮರು ಎಂದು ನಾವೇ ತೀರ್ಮಾನಿಸಿಕೊಂಡು ಸಂತೋಷಪಡುತ್ತೇವೆ. ಆದರೆ ನಾವೆಲ್ಲರೂ ಪಾಪ ಮಾಡಿದ್ದೇವೆ. ಅದೃಷ್ಟವೆಂದರೆ ದೇವರು ನಾವು ಪಾಪದಿಂದ ಹೊರಬಂದು ರಕ್ಷಣೆ ಹೊಂದಲು ವ್ಯವಸ್ಥೆ ಮಾಡಿದ್ದಾನೆ. ಇನ್ನೂ ಯಾರು ರಕ್ಷಣೆ ಹೊಂದಿಲ್ಲವೋ ಅಂಥವರನ್ನು ದೇವರು ಪ್ರೀತಿಯಿಂದ ನೋಡುತ್ತಾನೆ ಮತ್ತು ಅವರು ಪಶ್ಚಾತ್ತಾಪಪಡುವದನ್ನು ಎದುರುನೋಡುತ್ತಾನೆ. ದೇವರು ಜನರನ್ನು ನೋಡುವ ಹಾಗೆಯೇ ನಾವು ನೋಡಬೇಕು ಮತ್ತು ಆತನು ಅವರೊಂದಿಗೆ ನಡೆದುಕೊಳ್ಳುವ ಹಾಗೆಯೇ ನಾವೂ ನಡೆದುಕೊಳ್ಳಬೇಕು.

## ಆತ್ಮಚರಿತ್ರೆ (ವಕೀಲ) 2

ಜನರ ಪರ ವಾದ ಮಾಡುವದು ವಕೀಲನ ಕೆಲಸವಾಗಿದೆ. ಒಂದುವೇಳೆ ಇದು ನಿಮ್ಮ ಕೆಲಸವಾಗಿದ್ದರೆ, ಜನರಿಗೆ ಸಹಾಯ ಮಾಡಿ ರಕ್ಷಿಸಲು ದೇವರು ವಕೀಲರನ್ನು ಎದುರುನೋಡುತ್ತಾ ಇದ್ದಾನೆ ಎಂಬದು ತಿಳಿದುಕೊಳ್ಳುವದು ಉತ್ತಮವಾಗಿದೆ. ಸಾಮಾನ್ಯವಾಗಿ ಕೆಲವರು ತಮ್ಮನ್ನು ತಾವೇ ರಕ್ಷಿಸಿಕೊಳ್ಳಲು ಆಗದ ಪರಿಸ್ಥಿತಿಗಳಲ್ಲಿರುವಾಗ ಬಡವರು ಮತ್ತು ಕೊರತೆಯಲ್ಲಿರುವ ಜನರೊಂದಿಗೆ ಕೆಟ್ಟದಾಗಿ ನಡೆದುಕೊಳ್ಳುತ್ತಾರೆ. ಕೀರ್ತನೆ 82:3 ಹೇಳುವದೇನೆಂದರೆ, ಕುಗ್ಗಿದವರ ಮತ್ತು ಅನಾಥರ ನ್ಯಾಯವನ್ನು ಸ್ಥಾಪಿಸಿರಿ. ದುಃಖಿತರ ಮತ್ತು ದರಿದ್ರರ ನೀತಿಯನ್ನು ಉಳಿಸಿರಿ.

*ಜವಾಬ್ದಾರಿಕೆಗಳು:* ಕಾನೂನು ಕ್ರಮಗಳನ್ನು ತಿಳಿದುಕೊಂಡಿರಬೇಕಾದದ್ದು ಖಂಡಿತವಾಗಿಯೂ ವಕೀಲನ ಜವಾಬ್ದಾರಿಕೆಯಾಗಿದೆ, ಆದರೂ ಸಮುದಾಯದಲ್ಲಿ ನ್ಯಾಯಾಲಯಗಳ ಮೂಲಕ ಯಾವ ರೀತಿಯ ಕಾರ್ಯಗಳು ನಡೆಯುತ್ತಿವೆ ಎಂಬದನ್ನೂ ಆತನು ತಿಳಿದಿರಬೇಕು. ಒಬ್ಬ ವ್ಯಕ್ತಿ ಬಡವನನ್ನು ಹಿಂಸಿಸುತ್ತಿರುವದು ಮತ್ತು ಒಬ್ಬ ಬಡವನು ಮತ್ತೊಬ್ಬನಿಂದ ಅನ್ಯಾಯವಾಗಿ ಲಾಭಪಡೆಯಲು ಪ್ರಯತ್ನಿಸುವದರ ನಡುವೆಯಿರುವ ವ್ಯತ್ಯಾಸವನ್ನು ತಿಳಿಯಲು ಕಷ್ಟವಾಗಬಹುದು.

*ಅವಕಾಶಗಳು:* ತರಬೇತಿಯಲ್ಲಿರುವ ವಕೀಲರ ಅವಶ್ಯಕತೆಯು, ಅವರು ತಮ್ಮ ಕಕ್ಷಿದಾರರನ್ನು ಮಾತ್ರವಲ್ಲ ಬದಲಾಗಿ ಸಮುದಾಯವನ್ನು ಕಾಪಾಡುವಂತೆ ಅವರನ್ನು ಸಮಾಜದಲ್ಲಿ ಒಳ್ಳೆಯ ಸ್ಥಾನದಲ್ಲಿರಿಸುತ್ತದೆ. ಅವರು ಎಲ್ಲಾ ರೀತಿಯ ಜನರೊಂದಿಗೆ ಬೆರೆತು ಅನುಭವವನ್ನು ಪಡೆಯುತ್ತಾರೆ, ಇದರಿಂದ ಅವರು ನ್ಯಾಯದಪರ ನಿಲ್ಲಲು ಮತ್ತು ದೈವೀಕ ಆಯ್ಕೆಗಳನ್ನು ತಿಳಿಯಪಡಿಸಲು ಸಾಧ್ಯವಾಗುತ್ತದೆ. ಇದಲ್ಲದೆ ಸಮುದಾಯದಲ್ಲಿ ನಡೆಯುವ ಒಳಗಿನ ಕಾರ್ಯಗಳನ್ನೂ ಅವರು ನೋಡುತ್ತಾರೆ ಮತ್ತು ಯಾವ ಕಾರ್ಯಗಳಿಂದ ಹೆಚ್ಚು ಪ್ರಯೋಜನವಾಗುತ್ತವೆ ಎಂಬದನ್ನು ದೃಢಪಡಿಸುತ್ತಾರೆ.



## ಪ್ರಶ್ನೆಗಳು ಮತ್ತು ಉತ್ತರಗಳು 2

1. ಒಂದುವೇಳೆ ಯೇಸು ಕ್ರಿಸ್ತನು ನನ್ನ ವಕೀಲನಾಗಿದ್ದರೆ, ನನಗೇ ಬೇಕಾಗುವದನ್ನೆಲ್ಲಾ ನಾನು ಮಾಡಬಹುದೇ ಮತ್ತು ದೇವರೊಂದಿಗೆ ಒಳ್ಳೆಯ ಸಂಬಂಧವುಳ್ಳವನಾಗಿರಬಹುದೇ? (ನಾವು ಕ್ಷಮಾಪಣೆಯನ್ನು ಬೇಡಿಕೊಂಡರೆ ದೇವರು ನಮ್ಮ ಘೋರವಾದ ಪಾಪಗಳನ್ನೂ ಕ್ಷಮಿಸುತ್ತಾನೆ. ಆದರೆ ಯೇಸು ಕ್ರಿಸ್ತನು ನಮಗೆ ಸ್ಪಷ್ಟವಾಗಿ ಹೇಳಿರುವದೇನೆಂದರೆ ನಾವು ನಮಗೆ ಬೇಕಾಗಿರುವದನ್ನೆಲ್ಲಾ ಮಾಡಿ ದೇವರೊಂದಿಗೆ ಸರಿಯಾದ ಸಂಬಂಧದಲ್ಲಿರಲು ಆಗುವದಿಲ್ಲ. ಯೇಸು ಕ್ರಿಸ್ತನನ್ನು ನಂಬುವವರು ಒಳ್ಳೆಯ ಕಾರ್ಯಗಳನ್ನು ಮಾಡಿದರೆ ಪರಲೋಕಕ್ಕೆ ಹೋಗುವದಿಲ್ಲ, ಬದಲಾಗಿ ಒಬ್ಬನು ಯೇಸು ಕ್ರಿಸ್ತನನ್ನು ನಂಬಿದರೆ, ಆತನು ಒಳ್ಳೆಯ ಫಲ ಕೊಡುವ ಸಲುವಾಗಿ ಪವಿತ್ರಾತ್ಮನು ಆತನೊಳಗೆ ಕಾರ್ಯಮಾಡುತ್ತಾ ಆತನ ಹೃದಯವನ್ನು ಬದಲಾಯಿಸುತ್ತಾನೆ. ಪೌಲನು ಹೇಳುವದೇನೆಂದರೆ ನಾವು ಭಯದಿಂದ ನಡುಗುತ್ತಾ ನಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳುತ್ತೇವೆ. ನಿಮ್ಮನ್ನು ನೀವೇ ರಕ್ಷಿಸಿಕೊಳ್ಳಲು ಆಗುವದಿಲ್ಲ, ಆದರೆ ನಮ್ಮನ್ನು ರಕ್ಷಿಸುವಂತೆ ನಾವು ದೇವರಲ್ಲಿ ಭರವಸೆಯನ್ನಿಡಬಹುದು).
2. ಇಂಥ ಕೆಟ್ಟವರು ಈ ಲೋಕದಲ್ಲಿ ಇರುವದು ಯಾಕೆ?
   ಅನೇಕರು ದೇವರನ್ನು ನಂಬುವದಿಲ್ಲ ಮತ್ತು ನಮ್ಮ ಕ್ರಿಯೆಗಳಿಗೆ ತಕ್ಕ ಹಾಗೆ ದೇವರು ನಮಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ಹೇಳುವ ದೇವರ ವಾಕ್ಯವನ್ನೂ ನಂಬುವದಿಲ್ಲ. ಕೆಲವರು ಕಠಿಣ ಮತ್ತು ಕಹಿಯಾದ ಹೃದಯವುಳ್ಳವರಾಗಿ ದೇವರನ್ನು ಮತ್ತು ಆತನ ಜನರನ್ನು ತಿರಸ್ಕರಿಸುತ್ತಾರೆ. ಸಹಜವಾಗಿ ಜನರು ಇತರರನ್ನು ನೋಯಿಸುತ್ತಾರೆ ಯಾಕಂದರೆ ಅವರೇ ತಮ್ಮ ಆಂತರ್ಯದಲ್ಲಿ ನೋವನ್ನು ಅನುಭವಿಸುತ್ತಾ ಇರುತ್ತಾರೆ. ಉದಾಹರಣೆಗೆ, ಕಂಪ್ಯೂಟರ್ ಗಳನ್ನು ಹ್ಯಾಕ್ ಮಾಡಿ ತೊಂದರೆಯನ್ನುಂಟು ಮಾಡಲು ಬಯಸುವವರು, ಇತರರಿಗೆ ವಿರುದ್ಧವಾಗಿ ಅಧಿಕಾರವನ್ನು ಉಪಯೋಗಿಸುತ್ತಿರುವದರಿಂದ ತಮ್ಮಲ್ಲಿಯೇ ಅನುಭವಿಸುವ ಅಭದ್ರತೆಗೆ ಮುಯ್ಯಿ ತೀರಿಸಿಕೊಳ್ಳುತ್ತಾ ಇರಬಹುದು. ದೇವರಿಗೆ ನಮ್ಮ ಮೇಲೆ ಇರುವ ಪ್ರೀತಿ ಅಪಾರವಾದದ್ದು, ಅದ್ಭುತವಾದದ್ದು ಮತ್ತು ಶುದ್ಧವಾದದ್ದು, ಅದನ್ನು ಅರ್ಥಮಾಡಿಕೊಳ್ಳಲು ಅಥವಾ ಅಂಗೀಕರಿಸಿಕೊಳ್ಳಲು ಲೋಕದವರಿಗೆ ಆಗುವದಿಲ್ಲ.
3. ಗಾಳಿಮಾತು ಸತ್ಯವೋ ಅಥವಾ ಸುಳ್ಳೋ ಎಂದು ನಾನು ತಿಳಿದುಕೊಳ್ಳುವದು ಹೇಗೆ? ಗಾಳಿಮಾತು ನನ್ನ ಬಳಿಗೆ ಬರುವಾಗ ನಾನು ಏನು ಮಾಡಬೇಕು?
   ಗಾಳಿಮಾತುಗಳು ಸತ್ಯವಾಗಿರಲಿ ಅಥವಾ ಸುಳ್ಳಾಗಿರಲಿ ನಾವು ಅವುಗಳನ್ನು ಹೇಳಲೇಬಾರದು. ಇತರರ ಬಗ್ಗೆ ಕೆಟ್ಟ ವಿಷಯಗಳನ್ನು ಕೇಳಿಸಿಕೊಳ್ಳಬೇಕಾಗಿರುವವರು, ಇತರರನ್ನು ರಕ್ಷಿಸುವ ಅಧಿಕಾರದಲ್ಲಿರುವಂಥ ಜನರೇ ಆಗಿರಬೇಕು. ಯೌವನಸ್ಥನಾಗಿ ವಿವೇಚನೆಯನ್ನು ಕಲಿತುಕೊಳ್ಳಬೇಕಾದರೆ ನೀವು ನಂಬಿಕೆಗೆ ಅರ್ಹರಾಗಿರುವ ವಯಸ್ಕರಾದ ನಿಮ್ಮ ಅಪ್ಪಾ ಅಥವಾ ಅಮ್ಮ, ಶಿಕ್ಷಕ, ಅಥವಾ ಸಭಾಪಾಲಕನ ಸಲಹೆಯನ್ನು ಕೇಳಬೇಕು.
4. ಯೋಸೇಫನು ತನ್ನ ಜೀವನದಲ್ಲಿ ಏನನ್ನು ಕಳೆದುಕೊಂಡನು? ಅಂತ್ಯದಲ್ಲಿ ಅವನಿಗೆ ಇದರಿಂದಾದ ಲಾಭವೇನು?
   ಸ್ಥಳೀಯ ಮತ್ತು ತಾತ್ಕಾಲಿಕ ಘನತೆ, ಕೆಲಸ, ಮನೆ, ಭವಿಷ್ಯದ ನಾಯಕತ್ವ. ದೇವರ ಮಗುವಾಗಿ ಪ್ರಖ್ಯಾತಿ, ಸತ್ಯವೇದದಲ್ಲಿ ಹೆಸರು, ನೀತಿವಂತನೆಂಬ ಶಾಶ್ವತವಾದ ಕೀರ್ತಿ . . . .


5. ಯೋಸೇಫನ ಕನಸಿನಲ್ಲಿ ಏನಾಯಿತು?

ಅವನ ಕನಸಿನಲ್ಲಿ ಒಬ್ಬ ದೇವದೂತನು ಬಂದು ಮರಿಯಳನ್ನು ಮದುವೆ ಮಾಡಿಕೋ ಎಂದು ಹೇಳಿದನು.

## ಒಗಟಿನ ಉತ್ತರಗಳು 2







## ಆಟ

ರಿಲೇ ಓಟ



ಮಕ್ಕಳನ್ನು ತಂಡಗಳಾಗಿ ವಿಭಾಗಿಸಿರಿ. ಕೋಣೆಯ ದೂರದಲ್ಲಿ ಬರೆದು ಅಳಿಸಬಹುದಾದ ಬೋರ್ಡ್ ಅಥವಾ ದೊಡ್ಡ ಹಾಳೆಯನ್ನು ಇಡಿರಿ. ನೀವು ಸೀಟಿ ಊದುವಾಗ ಪ್ರತಿಯೊಂದು ತಂಡದಿಂದ ಒಂದು ಮಗು ಆ ಬೋರ್ಡ್ ಬಳಿಗೆ ಹೋಗಿ ಕಂಠಪಾಠ ವಚನದ ಮೊದಲನೆಯ ಪದವನ್ನು ಬರೆಯಬೇಕು. ನಂತರ ಮತ್ತೆ ಹಿಂದಕ್ಕೆ ಓಡಿ ಬಂದು ತನ್ನ ತಂಡದ ಮತ್ತೊಬ್ಬ ಸದಸ್ಯನಿಗೆ ಕೊಡಬೇಕು, ಅವನು ಓಡಿಹೋಗಿ ವಚನದ ಮತ್ತೊಂದು ಪದವನ್ನು ಬರೆಯಬೇಕು ಹೀಗೆ ವಾಕ್ಯ ಮುಗಿಯುವ ತನಕ ಮಾಡಿರಿ. ಯಾವ ತಂಡದವರು ಪೂರ್ತಿ ವಚನವನ್ನು ಬೇಗ ಬರೆದು ಮುಗಿಸುತ್ತಾರೋ ಅವರು ಗೆಲ್ಲುತ್ತಾರೆ.

## ಹೋಮ್ ವರ್ಕ್




ಈ ವಾರದಲ್ಲಿ ಯಾರಾದರು ಬಂದು ನಿಮಗೆ ಯಾರ ಬಗ್ಗೆಯೋ ಗಾಳಿಮಾತು ಹೇಳಿದರೆ, ನೀವು ಹೇಳುತ್ತಿರುವದು ಕೇವಲ ಗಾಳಿ ಮಾತಾಗಿದೆ, ಅದನ್ನು ನಾನು ನಂಬುವದಿಲ್ಲ ಬದಲಾಗಿ ಆ ವ್ಯಕ್ತಿಯ ಬಗ್ಗೆ ಒಳ್ಳೆಯ ಯೋಚನೆಯನ್ನೇ ಮಾಡುತ್ತೇನೆ ಎಂದು ನೇರವಾಗಿ ಹೇಳಿರಿ.

# ರಾಜಯೋಗ ಅಥವಾ ದೀನತೆಯ ಜನನ 03

## ಯೇಸು ಕ್ರಿಸ್ತನ ಜನನ: ಲೂಕ 2:4-20

### ನಾಟಕ (ಮೊದಲನೆಯ ಭಾಗ)



ನಾಯಕನು ಇಂದಿನ ಯೋಜನೆಯನ್ನು ತನಿಖಾಧಿಕಾರಿ ಮತ್ತು ಏಜೆಂಟ್ ಸಂಗಡ ಚರ್ಚಿಸಿದನು. ಆಕೆಗೆ ಬಹಳ ಅನುಭವ ಇರುವದರಿಂದ ಆಕೆಯೇ ಗೋದಲಿಯ ಬಳಿಗೆ ಹೋಗಿ ಮಗುವಾಗಿರುವ ಯೇಸು ಕ್ರಿಸ್ತನನ್ನು ನೋಡಲಿ ಎಂಬದು ತನಿಖಾಧಿಕಾರಿಯ ಆಲೋಚನೆಯಾಗಿದೆ. ನಾಯಕನು ಹೇಳಿದ್ದೇನೆಂದರೆ ಆಕೆ ಏಜೆಂಟ್ ಮತ್ತು ಕುರುಬರ ಸಂಗಡ ಹೋಗುವದೇ ಒಳ್ಳೇದು, ನಾನು ನೇರವಾಗಿ ದನದ ಕೊಟ್ಟಿಗೆಗೆ ಹೋಗುತ್ತೇನೆ. ಅವರು ತಮ್ಮ ಕಾರ್ಯದ ನಿಮಿತ್ತ ಟೈಮ್ ಮಷಿನ್ ಹತ್ತುವಾಗ ತನಿಖಾಧಿಕಾರಿ ಕೆಟ್ಟ ಮನೋಭಾವನೆಯನ್ನು ವ್ಯಕ್ತಪಡಿಸುತ್ತಾನೆ.

### ಪಾಠ 3

ಕುರಿಗಳು ಬುದ್ಧಿವಂತ ಪ್ರಾಣಿಗಳಲ್ಲ, ಆದರೆ ಅವುಗಳ ಮಾಂಸ ಬಹಳ ರುಚಿಯಾಗಿರುತ್ತದೆ, ಆದ್ದರಿಂದ ಅವುಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಕುರಿಗಳನ್ನು ನೋಡಿಕೊಳ್ಳುವದು ಕಷ್ಟದ ಕೆಲಸವಲ್ಲ. ನಿಮಗೆ ಕಾಲೇಜ್ ಡಿಗ್ರಿಯಾಗಲಿ ಅಥವಾ ವಿಶೇಷವಾದ ತರಬೇತಿಯಾಗಲಿ ಬೇಕಾಗಿಲ್ಲ ಮತ್ತು ನಿಮಗೆ ಹೆಚ್ಚು ಸಂಬಳವೂ ಸಿಗುವದಿಲ್ಲ. ಆದರೆ ನೀವು ಧೈರ್ಯಶಾಲಿಯಾಗಿರಬೇಕು ಮತ್ತು ನಂಬಿಗಸ್ತರಾಗಿರಬೇಕು. ಆದರೆ ಒಳ್ಳೆಯ ವಿಷಯವೇನೆಂದರೆ ಕುರಿಗಳು ಒಂದುದಿನವೂ ಬೇರೆ ರೀತಿಯಲ್ಲಿ ನಡೆದುಕೊಳ್ಳುವದಿಲ್ಲ ಆದ್ದರಿಂದ ಕುರುಬರು ಸಹ ಪ್ರತಿದಿನ ಕುರುಬರಾಗಿಯೇ ಇರಬೇಕು. ಇದು ಬಹಳ ಬೇಸರದ ಕೆಲಸವಾಗಿರುತ್ತದೆ.

ಲೂಕ 2:8-20 ಓದಿರಿ

ಯೇಸು ಕ್ರಿಸ್ತನು ಸಾಮಾನ್ಯ ಜನರಿಗೆ ಮೊದಲು ತಿಳಿಸಬೇಕೆಂದು ದೇವರು ತೀರ್ಮಾನಿಸಿದನು. ನಾನಾಗಿದ್ದರೆ ಧಾರ್ಮಿಕ ನಾಯಕರು ಅಥವಾ ಪ್ರಖ್ಯಾತರನ್ನು ಆರಿಸಿಕೊಳ್ಳುತ್ತಾ ಇದ್ದೆ ಆದರೆ ದೇವರು ಕುರುಬರನ್ನು ಆರಿಸಿಕೊಂಡನು.

ಯೇಸು ಕ್ರಿಸ್ತನು ತನ್ನ ಜೀವನಪರ್ಯಂತರ ಐಶ್ವರ್ಯವಂತರೊಂದಿಗಲ್ಲ, ಪ್ರಸಿದ್ಧರೊಂದಿಗಲ್ಲ ಬದಲಾಗಿ ಸಾಮಾನ್ಯ ಜನರೊಂದಿಗೆ ಸಮಯವನ್ನು ಕಳೆಯುತ್ತಾ ಇದ್ದನು.

ಯೇಸು ಕ್ರಿಸ್ತನು ಹೀಗೆ ಯಾಕೆ ಮಾಡುತ್ತಿದ್ದನು? ಯೇಸು ಕ್ರಿಸ್ತನು ಐಶ್ವರ್ಯವಂತರನ್ನು, ಪ್ರಭಾವಿಗಳನ್ನು ಮತ್ತು ಪ್ರಸಿದ್ಧರನ್ನು ರಕ್ಷಿಸಲು ಮಾತ್ರವೇ ಬರಲಿಲ್ಲ. ಆತನು ಎಲ್ಲರನ್ನೂ ರಕ್ಷಿಸಲು ಬಂದನು ಮತ್ತು ಎಲ್ಲರನ್ನು ರಕ್ಷಿಸುವ ಸಲುವಾಗಿ, ನಮ್ಮ ಸ್ನೇಹಿತನಾಗಿ ಆತನು ನಮ್ಮ ಬಳಿಗೆ ಬಂದನು.

ಆತನು ದುಬಾರಿ ಬೆಲೆಯ ವಸ್ತ್ರಗಳಿಗೆ ಬೇಡಿಕೆಯನ್ನಿಟ್ಟಿರಬಹುದಾಗಿತ್ತು ಆದರೆ ಆತನ ಬಳಿಯಲ್ಲಿ ಅವಶ್ಯಕತೆಗಿಂತ ಹೆಚ್ಚಾಗಿ ಏನೂ ಇರಲಿಲ್ಲ. ಆತನು ತನ್ನ ಸಹಾಯಕ್ಕಾಗಿ ಅನೇಕ ಸೇವಕರನ್ನು ಇಟ್ಟುಕೊಂಡಿರಬಹುದಾಗಿತ್ತು ಆದರೆ ಆತನೇ ಇತರರ ಸೇವೆ ಮಾಡುತ್ತಾ ಇದ್ದನು. ಆತನು ತನಗಾಗಿಯೇ ಸುಂದರವಾದ ಅರಮನೆಯನ್ನು ಹೊಂದಿರಬಹುದಾಗಿತ್ತು ಆದರೆ ಸತ್ಯವೇದವು ಹೇಳುವದೇನೆಂದರೆ ಆತನಿಗೆ ತಲೆಯಿಡುವಷ್ಟು ಜಾಗವೂ ಇರಲಿಲ್ಲ. ಆತನು ಘನವಾದ ಭೋಜನವನ್ನು

ಸೇವಿಸಬಹುದಾಗಿತ್ತು ಆದರೆ ಆತನು ಬೇರೆಯೊಬ್ಬರ ಕೂಟದಲ್ಲಿ ದ್ರಾಕ್ಷಾರಸ ಮಾಡಿದನು ಮತ್ತು ತನ್ನ ಬಳಿಗೆ ಬರುವವರಿಗೆ ಹೊಟ್ಟೆ ತುಂಬಾ ಊಟ ಕೊಡುತ್ತಾ ಇದ್ದನು. ಯೇಸು ಕ್ರಿಸ್ತನೊಂದಿಗೆ ಸಂಬಂಧವುಳ್ಳವರಾಗಬೇಕಾದರೆ ನಮಗೆ ಐಶ್ವರ್ಯವಾಗಲಿ ಅಧಿಕಾರವಾಗಲಿ ಬೇಡ ಎಂಬದನ್ನು ನಾವು ಈ ರೀತಿಯಾಗಿ ತಿಳಿಯಬಹುದು.

## ಕಂಠಪಾಠ ವಚನ 3

೨ ಕೊರಿಂಥಿಯರಿಗೆ 8:9 “ಪ್ರಭು ಯೇಸುಕ್ರಿಸ್ತರ ಕೃಪಾಶಕ್ತಿಯನ್ನು ನೀವು ಬಲ್ಲಿರಿ. ಅವರು ತಮ್ಮ ಬಡತನದಿಂದ ನಿಮ್ಮನ್ನು ಶ್ರೀಮಂತವಾಗಿಸಲೆಂದು, ತಾವು ಶ್ರೀಮಂತರಾಗಿದ್ದರೂ ನಿಮಗೋಸ್ಕರ ಬಡವರಾದರು.”

## ನಾಟಕ (ಎರಡನೇ ಭಾಗ)

ತಮ್ಮ ಕಾರ್ಯವನ್ನು ಮುಗಿಸಿಕೊಂಡು ಟೈಮ್ ಮಿಷನ್ ನಲ್ಲಿ ಹಿಂದಿರುಗುವಾಗ, ತನಿಖಾಧಿಕಾರಿ ಮತ್ತು ಏಜೆಂಟ್ ಇಬ್ಬರು ಅಕಾಶದಲ್ಲಿ ಕಾಣಿಸಿಕೊಂಡ ದೇವದೂತರು ಕುರುಬರೊಂದಿಗೆ ದೇವರನ್ನು ಕೊಂಡಾಡಿದ ಚಿತ್ರಗಳನ್ನು ನೋಡುತ್ತಾ ಬಹಳ ಖುಷಿಪಡುತ್ತಾ ಇದ್ದರು. ನಾಯಕನು ತನಿಖಾಧಿಕಾರಿಗಳಿಗೆ ನಿಮ್ಮ ಅನುಭವ ಹೇಗಿತ್ತು ಎಂದು ಕೇಳಿದನು. ಕುರುಬರೊಂದಿಗೆ ಹೊಲದಲ್ಲಿ ಬಹಳ ಸಮಯವನ್ನು ಕಳೆಯಬೇಕಾಯಿತಾದರೂ, ಕಡೆಯಲ್ಲಿ ದೇವರನ್ನು ಸ್ತುತಿಸುವ ದೇವದೂತರನ್ನು ನೋಡಿದಲ್ಲದೆ ಕುರುಬರೊಂದಿಗೆ ಹೋಗಿ ಮಗುವಾಗಿರುವ ಯೇಸು ಕ್ರಿಸ್ತನನ್ನೂ ನಾನು ನೋಡಿದೆನು ಅಂದಳು.

## ನ್ಯಾಯ 3

ಯೇಸು ಕ್ರಿಸ್ತನು ಘನಮಾನಗಳಿಗೆ ಅರ್ಹನಾಗಿದ್ದರೂ ಅವುಗಳನ್ನು ಬಯಸಲಿಲ್ಲವಾದ್ದರಿಂದ, ನಾವೂ ದೀನತೆಯುಳ್ಳವರಾಗಿ ದೇವರು ನಮ್ಮನ್ನು ಅರಸರನ್ನಾಗಿ, ರಾಣಿಯರನ್ನಾಗಿ ನಿರ್ಮಾಣ ಮಾಡಿದ್ದರೂ ಯಾವುದೇ ಬೇಡಿಕೆಯನ್ನು ಇಡಬಾರದು.

## ಆತ್ಮಚರಿತ್ರೆ (ಕುರುಬ) 3

ಹೊಸ ಕೆಲಸಗಾರರಿಗೆ ಕುರುಬರ ಕೆಲಸ ಬಹಳ ಉತ್ತಮವಾಗಿರುತ್ತದೆ. ಮೋಶೆ ಮತ್ತು ಅರಸನಾದ ದಾವೀದನು ಕುರುಬರಾಗಿದ್ದರು ಹಾಗೂ ಯೇಸು ಕ್ರಿಸ್ತನ ಜನನವನ್ನು ಪ್ರಕಟಿಸಲು ದೇವರು ತನ್ನ ದೂತರನ್ನು ಕುರುಬರ ಬಳಿಗೆ ಕಳುಹಿಸಿದನು.

*ಜವಾಬ್ದಾರಿಕೆಗಳು:* ಕುರುಬನಿಗೆ ತಾನು ಯಾರೊಂದಿಗೆ ಕೆಲಸ ಮಾಡುತ್ತಾ ಇರುವನೋ ಅವನ/ಅವಳ ಬಯಕೆಗಳು ಗೊತ್ತಿರಬೇಕು, ಅಂದರೆ ಅವರನ್ನು ಒಳ್ಳೆಯ ಹಸಿರುಗಾವಲುಗಳಿಗೆ ನಡೆಸಿ ಪುನಃ ಮನೆಗೆ ಕರೆದುಕೊಂಡು ಬರಬೇಕು. ಕುರುಬರು ಅವರನ್ನು ಪ್ರಾಣಿಗಳಿಂದ, ಅಪಾಯಕಾರಿ ಗಿಡಗಳಿಂದ, ಕಠಿಣವಾದ ವಾತಾವರಣದಿಂದ ಮತ್ತು ಅಪಾಯಕಾರಿಯಾದ ದಾರಿಯಿಂದ ಕಾಪಾಡಬೇಕು. ಕುರುಬನು ತನ್ನ ಕುರಿಗಳ ಲೆಕ್ಕವನ್ನು ತಿಳಿದಿರಬೇಕು ಒಂದುವೇಳೆ ಯಾವುದಾದರೊಂದು ಕುರಿ ತಪ್ಪಿಸಿಕೊಂಡರೆ ಅಥವಾ ಪೊದೆಯೊಳಗೆ ಸಿಕ್ಕಿಕೊಂಡರೆ ಅಥವಾ ಕಳ್ಳನು ಅಪಹರಿಸಿದರೆ ತೊಂದರೆಯಾಗುವದು.

*ಅವಕಾಶಗಳು:* ಕುರುಬನಾಗಿ, ನೀವು ಪ್ರಾಣಿಗಳ ಬಗ್ಗೆ ಕಲಿತುಕೊಳ್ಳಬಹುದು ಮತ್ತು ಅವುಗಳನ್ನು ಪೋಷಿಸುವದು ಹೇಗೆ ಎಂದು ತಿಳಿಯಬಹುದು. ಒಳ್ಳೆಯ ಆಹಾರ ಕೊಡುವದರಿಂದ ಅವು ಉತ್ತಮವಾಗಿ ಬೆಳೆಯುತ್ತವೆ, ಅಪಾಯದಿಂದ ತಪ್ಪಿಸುವಾಗ ನಿಮ್ಮ ಕೆಲಸವು ಸುಲಭವಾಗುತ್ತದೆ. ಮತ್ತು ನೀವು ಕಾಯುತ್ತಾ ಇರುವಾಗ, ಸಂಡೇ ಸ್ಕೂಲ್ ನಿಂದ ಪಠ್ಯ ಪುಸ್ತಕಗಳನ್ನು ತರಬಹುದು ಮತ್ತು ಕಂಠಪಾಠ ವಚನವನ್ನು ಕಲಿಯಬಹುದು, ಪಾಠಗಳ ಬಗ್ಗೆ ಯೋಚಿಸಬಹುದು ಮತ್ತು ಆ ಪಾಠಗಳನ್ನು ನಿಮ್ಮ ಜೀವನಕ್ಕೆ ಅವಳವಡಿಸಿಕೊಳ್ಳುವದರ ಬಗ್ಗೆ ಕಲಿತುಕೊಳ್ಳಬಹುದು.

## ಪ್ರಶ್ನೆಗಳು ಮತ್ತು ಉತ್ತರಗಳು 3


1. ಎಲ್ಲರೊಂದಿಗೆ ನಾವು ಬೆರೆಯುವದು ಪ್ರಾಮುಖ್ಯವಾಗಿದೆ, ಅಲ್ಲವೇ? (ದೇವರಿಗೆ ಆದ್ಯತೆಯನ್ನು ಕೊಟ್ಟು ತಮ್ಮ ನೆರೆಯವರನ್ನು ಪ್ರೀತಿಸುವ ಒತ್ತಡದ ಬಗ್ಗೆ ಅವರು ಚರ್ಚಿಸಲಿ. ಸತ್ಯವೇದ




ಹೇಳುವದೇನೆಂದರೆ ನಾವು ಸಾಧ್ಯವಾದಷ್ಟು ಸಮಾಧಾನದಿಂದ ಜೀವಿಸಬೇಕು (ರೋಮಾ 12:18) ಆದರೆ ನಾವು ಇತರರ ತೀರ್ಮಾನದಂತೆ ಅಲ್ಲದೆ ದೇವರನ್ನು ಸ್ವತಂತ್ರವಾಗಿ ಹಿಂಬಾಲಿಸಬೇಕು (ಯೋಹಾನ 21:22). ಸಮಾಧಾನ ಅಥವಾ ದೇವರನ್ನು ಹಿಂಬಾಲಿಸುವದು ಅಥವಾ ಎರಡನ್ನೂ ಮಾಡುವ ಕಾರ್ಯದ ಉದಾಹರಣೆಗಳಾಗಿರುವ, ನಿರ್ದಿಷ್ಟವಾದ ಪರಿಸ್ಥಿತಿಗಳ ಬಗ್ಗೆ ಚರ್ಚಿಸಿರಿ).

2. ದೀನತೆಯಿಂದಿರುವದೆಂದರೆ ಏನು? (ದೀನತೆ ಎಂಬದು ಗುಣಲಕ್ಷಣವಾಗಿದ್ದು, ಇದನ್ನು ಮಾನವನು ತನ್ನ ಸಾಮರ್ಥ್ಯಗಳು, ಲಕ್ಷಣಗಳು ಮತ್ತು ತಲಾಂತುಗಳನ್ನು ಗುರುತಿಸಿಕೊಳ್ಳುವಾಗ ಹಾಗೂ ಇತರರ ಒಳಿತಿಗಾಗಿ ಕಾರ್ಯಮಾಡಲು ಇವುಗಳನ್ನು ಉಪಯೋಗಿಸಿಕೊಳ್ಳುವಾಗ ಹೊಂದಿರುತ್ತಾನೆ. ದೀನತೆಯು ಒಬ್ಬನು ನಂಬಿಗಸ್ತನಾಗಿರಲು, ಹೊಂದಿಕೊಳ್ಳಲು ಮತ್ತು ಸಹಿಸಿಕೊಳ್ಳಲು ಸಹಾಯ ಮಾಡುತ್ತದೆ. ಒಬ್ಬನು ದೀನತೆಯನ್ನು ಅಭ್ಯಾಸ ಮಾಡಿದಷ್ಟೂ ಇತರರ ಹೃದಯಗಳಲ್ಲಿ ಬಲವಾಗಿ ನೆಲೆಗೊಳ್ಳುತ್ತಾನೆ).
3. ಒಳ್ಳೆಯವರೆಲ್ಲರೂ ಪರಲೋಕಕ್ಕೆ ಹೋಗುತ್ತಾರೆ, ಅಲ್ಲವೇ? (ಪರಲೋಕಕ್ಕೆ ಹೋಗಬೇಕಾದರೆ ಒಳ್ಳೆಯವರಾಗಿರ್ರಿ ಎಂದು ದೇವರು ಎಂದಿಗೂ ಹೇಳಿಲ್ಲ, ಬದಲಾಗಿ ನಿಮ್ಮ ಹೃದಯಗಳನ್ನು ನನಗೆ ಕೊಡಿರಿ ಎಂದು ಆತನು ಹೇಳಿದ್ದಾನೆ).
4. ನಾವು ಐಶ್ವರ್ಯವಂತರಾಗಬೇಕೆಂದು ದೇವರು ಬಯಸುವದಿಲ್ಲವೇ? (ಮಕ್ಕಳು ಇದನ್ನು ಚರ್ಚಿಸಲಿ, ನಂತರ ಹಣ ಇರುವದು ತಪ್ಪಲ್ಲ ಎಂದು ಅವರಿಗೆ ಹೇಳಿರಿ. ಆದರೆ ದೇವರಿಗಿಂತ ಹೆಚ್ಚಿನ ಆದ್ಯತೆಯನ್ನು ನೀವು ಅದಕ್ಕೆ ಕೊಡುವದಾದರೆ ಅಥವಾ ದೇವರನ್ನು ಹಿಂಬಾಲಿಸುವಾಗ ಮಾತ್ರವೇ ನಿಮಗೆ ಏನಾದರು ದೊರೆಯುತ್ತದೆ ಎಂದು ಬಯಸಿದರೆ ಅದು ತಪ್ಪು. ನಾವು ಭೂಲೋಕದಲ್ಲಿಯಲ್ಲ ಬದಲಾಗಿ ಪರಲೋಕದಲ್ಲಿ ಗಂಟು ಮಾಡಿಟ್ಟುಕೊಳ್ಳಬೇಕೆಂದು ದೇವರು ಬಯಸುತ್ತಾನೆ (ಕೊಲೊಸ್ಸೆ 3:2).
5. ಒಂದುವೇಳೆ ನೀವು ಮಗುವಾಗಿರುವ ಯೇಸು ಕ್ರಿಸ್ತನನ್ನು ನೋಡಲು ಹೋಗಿದ್ದರೆ ಆತನಿಗೆ ಏನು ಕೊಡುವಿರಿ? (ಮಕ್ಕಳು ಏನು ಕೊಡುವರು ಎಂದು ಹೇಳಲು ಅವಕಾಶ ಕೊಡಿರಿ).

## ಒಗಟಿನ ಉತ್ತರಗಳು 3







## ಆಟ 3

ಸಾಲುಸಾಲಾಗಿ



ಕಂಠಪಾಠ ವಚನವನ್ನು ಕಲಿಯಲು ಮಕ್ಕಳಿಗೆ ಸಹಾಯವಾಗುವ ಸಲುವಾಗಿ ಈ ಆಟವನ್ನು ಆಡಿಸಿರಿ. ವಚನವು ಪರಿಚಯವಾಗುವ ಸಲುವಾಗಿ ಒಂದೆರೆಡು

ಸಲ ಮತ್ತೆಮತ್ತೆ ಹೇಳಿಸಿರಿ. ಮಕ್ಕಳಿಗೆ 1, 2 ಎಂದು ಸಂಖ್ಯೆಗಳನ್ನು ಕೊಟ್ಟು ಎರಡು ತಂಡವಾಗಿ ವಿಭಾಗಿಸಿರಿ ಮತ್ತು ಯಾರಿಗೆಲ್ಲ ಸಂಖ್ಯೆ 1 ಸಿಕ್ಕಿದೆಯೋ ಅವರೆಲ್ಲರೂ ಕೋಣೆಯ ಒಂದು ಕಡೆಗೆ ಮತ್ತು ಯಾರಿಗೆಲ್ಲಾ ಸಂಖ್ಯೆ 2 ಸಿಕ್ಕಿದೆಯೋ ಅವರೆಲ್ಲಾ ಕೋಣೆಯ ಮತ್ತೊಂದು ಕಡೆಗೆ ಹೋಗಲು ಹೇಳಿರಿ. ನಂತರ ಒಬ್ಬರಾದ ಮೇಲೆ ಒಬ್ಬರು ವಚನದ ಪದವನ್ನು ಸರದಿಯ ಪ್ರಕಾರ ಹೇಳಲಿ. ಹೊಸ ಗುಂಪುಗಳು ಸಹ ಮತ್ತೊಮ್ಮೆ ವಚನವನ್ನು ಹೇಳಬೇಕು. ಈ ರೀತಿಯಾಗಿ ಒಂದೆರೆಡು ಸುತ್ತುಗಳು ಮಾಡಿದ ನಂತರ, ಎರಡೂ ತಂಡಗಳಿಂದ ಒಬ್ಬೊಬ್ಬರು ವಾಲಂಟಿಯರ್ ನನ್ನು ಆರಿಸಿರಿ, ಗುಂಪಿನಲ್ಲಿದ್ದಾಗ ಮಾಡಿದ ಹಾಗೆ ವಚನವನ್ನು ಭಾಗಭಾಗವಾಗಿ ಒಬ್ಬರಾದ ನಂತರ ಒಬ್ಬರು ಅವರು ಹೇಳಬೇಕು. ನಂತರ ವಾಲಂಟಿಯರ್ಸ್ ಗಳು ನೋಡದೆಯೇ ವಚನವನ್ನು ಪೂರ್ತಿಯಾಗಿ ಹೇಳಲು ಪ್ರಯತ್ನಿಸಬೇಕು. ಪ್ರತಿಯೊಬ್ಬರೂ ವಚನವನ್ನು ಸರಿಯಾಗಿ ಕಂಠಪಾಠ ಮಾಡುವ ತನಕ ಅಭ್ಯಾಸ ಮಾಡಿರಿ.

## ಹೋಮ್ ವರ್ಕ್



ಧನ್ಯವಾದದ ಕಾರ್ಡ್ ಮಾಡಿರಿ ಮತ್ತು ಯಾರನ್ನಾದರೂ ಅವರ ಕಾರ್ಯಕ್ಕಾಗಿ ಸನ್ಮಾನಿಸಲು ಅದನ್ನು ಅವರಿಗೆ ಕೊಡಿರಿ. ಯೇಸು ಕ್ರಿಸ್ತನ ಹಾಗೆ ಸನ್ಮಾನಕ್ಕೆ ಯೋಗ್ಯರಾಗಿದ್ದರೂ, ಅದರಿಂದ ದೂರ ಇರುವವರು ಇದ್ದರೆ ಅಂಥವರನ್ನು ಗುರುತಿಸಿರಿ. ಉದಾಹರಣೆಗೆ: ಮೊದಲು ಪ್ರತಿಕ್ರಿಯಿಸುವವರು, ಕಸಗೂಡಿಸುವವರು, ಕಸ ತೆಗೆದುಕೊಳ್ಳುವವರು, ನರ್ಸ್ ಗಳು.

# ಕಷ್ಟದ ಸಮಯಗಳು 04

## ಯೇಸು ಕ್ರಿಸ್ತನ ಕುಟುಂಬದವರು ಐಗುಪ್ತದೇಶಕ್ಕೆ ಹೋದರು: ಮತ್ತಾಯ **2:13-33**



### ನಾಟಕ (ಮೊದಲನೆಯ ಭಾಗ)

ತನಿಖಾಧಿಕಾರಿಯು ತನ್ನ ತಂಡದವರಿಗೆ ಕಳೆದ ವಾರ ವಲಸೆ ಬಂದಿದ್ದ ಕುಟುಂಬದವರನ್ನು ಭೇಟಿಯಾದಾಗ, ಅವರ ಸಂಸ್ಕೃತಿಯಿಂದ ಆಕೆಗೆ ಕೆಲವು ಗೊಂದಲಗಳಾದದ್ದು ಮತ್ತು ಅವರ ಹೇಳಿಕೆಗಳಿಂದ ಅಕೆಯ ಭಾವನೆಗಳಿಗೆ ನೋವಾದದ್ದರ ಬಗ್ಗೆ ಹೇಳಿಕೊಳ್ಳುತ್ತಾ ಇದ್ದಳು. ನಾಯಕ ಮತ್ತು ಏಜೆಂಟ್ ಹೊಸ ಸ್ನೇಹಿತರನ್ನು ಮಾಡಿಕೊಳ್ಳುವದು ಉತ್ತಮವಾದ ಕಾರ್ಯ ಮತ್ತು ಆ ಕ್ಷೇತ್ರದಲ್ಲಿ ಕುಟುಂಬದವರನ್ನು ಸ್ವಾಗತಿಸಿಕೊಳ್ಳಲು ಸಹಾಯ ಮಾಡುವಂತೆ ಆಕೆಯನ್ನು ಪ್ರೋತ್ಸಾಹಪಡಿಸಿದರು. ತನಿಖಾಧಿಕಾರಿಗೆ ಅವರನ್ನು ಮತ್ತೆ ಭೇಟಿಯಾಗಲು ಇಷ್ಟವಿರಲಿಲ್ಲ. ಆ ಚರ್ಚೆಯ ನಂತರ, ಅವರು ಸಮಯಕ್ಕೆ ಸರಿಯಾಗಿ ಹಿಂದಿರುಗುವ ಸಲುವಾಗಿ ತಮ್ಮ ದಿನದ ಕಾರ್ಯವನ್ನು ಮುಗಿಸಬೇಕೆಂದುಕೊಂಡು ಪುಟ್ಟ ಮಗುವಾಗಿದ್ದ ಯೇಸು ಕ್ರಿಸ್ತನು ತನ್ನ ತಂದೆತಾಯಿಗಳೊಂದಿಗೆ ಸ್ವಲ್ಪಕಾಲ ಐಗುಪ್ತ ದೇಶಕ್ಕೆ ಹೋಗುವದನ್ನು ನೋಡಲು ಹೊರಟರು.

### ಪಾಠ 4

ಬೇರೊಂದು ದೇಶ ಅಥವಾ ಪಟ್ಟಣಕ್ಕೆ ಹೋಗುವದು ಬಹಳ ಕಷ್ಟ ಮತ್ತು ಪ್ರಯಾಣಿಸಲು ಹಣ ಸಹ ಬೇಕಾಗುತ್ತದೆ, ಆದ್ದರಿಂದ ಏನಾದರೂ ಬಲವಾದ ಕಾರಣವಿದ್ದರೆ ಮಾತ್ರವೇ ನಾವು ಪ್ರಯಾಣದ ಬಗ್ಗೆ ಯೋಚಿಸುತ್ತೇವೆ. ನಾವು ಹೊಸ ಕೆಲಸವನ್ನು ಹುಡುಕಿಕೊಳ್ಳಬೇಕಾಗುತ್ತದೆ, ಅಂಗಡಿಗಳೆಲ್ಲಿವೆ, ನೀರು ಎಲ್ಲಿ ಸಿಗುತ್ತದೆ ಎಂಬದನ್ನು ತಿಳಿದುಕೊಳ್ಳಬೇಕಾಗುತ್ತದೆ. ಜನರು ವಿವಿಧವಾಗಿ ವಸ್ತ್ರಗಳನ್ನು ಧರಿಸಿಕೊಳ್ಳುತ್ತಾರೆ ಮತ್ತು ಅವರ ಮಾತಿನ ಶೈಲಿಯೂ ಬದಲಾಗುತ್ತದೆ. ಕಾರ್ಯಗಳು ಅಂದುಕೊಂಡಷ್ಟು ಸುಲಭವಾಗಿರುವದಿಲ್ಲ.

ಮತ್ತಾಯ 2:13-23 ಓದಿರಿ

ಹಳೆ ಒಡಂಬಡಿಕೆಯ ಪ್ರವಾದಿಗಳು ಈ ಎರಡು ವಿಷಯಗಳನ್ನು ಮೊದಲೇ ಪ್ರವಾದಿಸಿದ್ದರು ಮತ್ತು ಯೇಸು ಕ್ರಿಸ್ತನೇ ಮೆಸ್ಸೀಯನೆಂದು ತಿಳಿಯಲು ಅವರ ಪ್ರವಾದನೆಗಳು ನಮಗೆ ಸಹಾಯ ಮಾಡುತ್ತವೆ. ಆದರೆ ಇಸ್ರಾಯೇಲಿಗೆ ಹಿಂದಿರುಗಿ ಹೋಗುವದು ಕಠಿಣವಾದ ತೀರ್ಮಾನವಾಗಿತ್ತು! ಮರಿಯಳಿಗೆ ಮತ್ತು ಯೋಸೇಫನಿಗೆ ಹಾಗೂ ಅವನ ಕುಟುಂಬದವರಿಗೆ ಅಲ್ಲಿ ಜೀವಬೆದರಿಕೆಯಿತ್ತು, ಅವರು ತಿರಸ್ಕಾರಕ್ಕೆ ಒಳಗಾಗಿದ್ದರು, ಆದರೆ ಐಗುಪ್ತ ದೇಶದಲ್ಲಿ ಅವರಿಗೆ ಉತ್ತಮವಾದ ಜೀವನವಿತ್ತು. ನನಗಾದರೋ ಬಹಳ ಹೆದರಿಕೆಯಾಗುತ್ತಾ ಇತ್ತು ಮತ್ತು ಅಲ್ಲಿರುವ ಇತರರನ್ನು ನಂಬುವದು ಕಷ್ಟದ ಕೆಲಸವಾಗುತ್ತಾ ಇತ್ತು. ಆದರೆ ದೇವದೂತನು ಅವರಿಗೆ ನೀವು ಇಲ್ಲಿರುವದೇ ಒಳ್ಳೇದು ಎಂದು ಹೇಳಿದ್ದರಿಂದ ಅವರು ಅದಕ್ಕೆ ವಿಧೇಯರಾದರು.

ಮರಿಯಳು ಮತ್ತು ಯೋಸೇಫನು ಮತ್ತೊಮ್ಮೆ ಯೆಹೂದ್ಯ ಸಮಾಜಕ್ಕನುಸಾರ ನಜರೇತಿನಲ್ಲಿ ಒಳ್ಳೆಯ ಮನೆಯನ್ನು ಮಾಡಿದರು, ಸ್ನೇಹಿತರನ್ನು ಮಾಡಿಕೊಂಡರು ಮತ್ತು ಕೆಲಸವನ್ನೂ ಹುಡುಕಿಕೊಂಡರು.

ದೇವರು ಹೇಳುವ ಸ್ಥಳಗಳಿಗೆ ನಾವು ಯಾವುದೇ ಚಿಂತೆಯಿಲ್ಲದೆ ಹೋಗಬಹುದು. ಆತನು ಹೊಸ ಸ್ನೇಹಿತರು ಮತ್ತು ಪರಿಸ್ಥಿತಿಗಳೊಂದಿಗೆ ನಮಗಾಗಿ ಸ್ಥಳಗಳನ್ನು ಸಿದ್ಧಮಾಡುತ್ತಾನೆ ಹಾಗೂ ಆತನು ನಮಗೆ ಉತ್ತಮವಾಗಿರುವದನ್ನು ಕೊಡುತ್ತಾನೆ ಮತ್ತು ನಮ್ಮೊಂದಿಗಿರುತ್ತಾನೆ ಎಂದು ನಾವು ದೃಢವಾಗಿ ನಂಬಬಹುದು.

ನಮ್ಮ ಸ್ಥಳಗಳಿಗೆ ಹೊಸದಾಗಿ ಬರುವವರೊಂದಿಗೆ ಒಳ್ಳೆಯವರಾಗಿ ನಡೆದುಕೊಳ್ಳಲು ನಾವು ಯಾವಾಗಲೂ ಪ್ರಯತ್ನಿಸಬಹುದು. ಅವರ ಸ್ನೇಹಿತರಾಗಬಹುದು ಮತ್ತು ಅವರು ಬೇರೆ ರೀತಿಯ ಸಂಪ್ರದಾಯ ಹಾಗೂ ಸಂಸ್ಕೃತಿಯುಳ್ಳವರಾದರೂ ಪರವಾಗಿಲ್ಲ ಎಂದು ಅವರಿಗೆ ಮನವರಿಕೆ ಮಾಡಿಸಬಹುದು.

## ಕಂಠಪಾಠ ವಚನ 4

ಎಫೆಸಿಯರಿಗೆ 4:32 "ಪರಸ್ಪರ ಕರುಣೆಯಿಂದಲೂ ಕನಿಕರದಿಂದಲೂ ವರ್ತಿಸಿರಿ. ಯೇಸುಕ್ರಿಸ್ತರಲ್ಲಿ ದೇವರು ನಿಮ್ಮನ್ನು ಕ್ಷಮಿಸಿದಂತೆಯೇ, ನೀವು ಸಹ ಒಬ್ಬರನ್ನೊಬ್ಬರು ಕ್ಷಮಿಸಿರಿ."

## ನಾಟಕ (ಎರಡನೇ ಭಾಗ)

ಅವರು ತಮ್ಮ ಕೆಲಸವನ್ನು ಮುಗಿಸಿಕೊಂಡು ಹಿಂದಿರುಗಿ ಬರುವಾಗ ಯೇಸು ಕ್ರಿಸ್ತನ ಕುಟುಂಬವನ್ನು ದೊಡ್ಡ ಪಟ್ಟಣವಾದ ಐಗುಪ್ತಕ್ಕೆ ಹೊಂಬಾಲಿಸಿಕೊಂಡು ಹೋದದ್ದು ಮತ್ತು ತಮ್ಮ ಪಟ್ಟಣಕ್ಕಿಂತ ಆ ಪಟ್ಟಣವು ಎಷ್ಟು ಭಿನ್ನವಾಗಿರುವದರ ಬಗ್ಗೆ ಚರ್ಚಿಸುತ್ತಾ ಇದ್ದರು. ಆ ಸಮಯ ಬಹಳ ಕಷ್ಟಕರವಾಗಿತ್ತು! ಮತ್ತು ಅವರು ಸಮಯದಲ್ಲಿ ಸ್ವಲ್ಪ ಮುಂದೆ ಹೋದಾಗ, ಯೇಸು ಕ್ರಿಸ್ತನ ಕುಟುಂಬದವರು ಐಗುಪ್ತ ದೇಶಕ್ಕೆ ಹೋಗುವಾಗ ಅವರಿಗೆದುರಾದ ತಿರಸ್ಕಾರ ಮತ್ತು ಅಪಾಯಗಳನ್ನು ನೆನಪುಮಾಡಿಕೊಂಡು ತಮ್ಮ ಸ್ವಂತ ಊರಿಗೆ ಹಿಂದಿರುಗಿ ಬರುವದನ್ನು ನೋಡಿದರು. ಯೇಸು ಕ್ರಿಸ್ತನ ಕುಟುಂಬದವರಿಗೆ ಐಗುಪ್ತ ದೇಶದಲ್ಲಿ ಆದಂಥ ಅನುಭವವೇ ವಲಸೆಯಾಗಿ ಹೋಗುವ ಕುಟುಂಬದವರಿಗೆ ಆಗುತ್ತದೆ ಎಂದು ತನಿಖಾಧಿಕಾರಿಗೆ ಮನವರಿಕೆ ಆಯಿತು. ಆದರೂ ಅವರ ವೇದನೆಯುಳ್ಳ ಹೇಳಿಕೆಗಳು ಅವರ ಸಂಪ್ರದಾಯದಲ್ಲಿ ಕೆಟ್ಟದ್ದಾಗಿರಲಿಲ್ಲ ಮತ್ತು ಯೇಸು ಕ್ರಿಸ್ತನಿಗೆ ಎದುರಾದಂತೆ ಆಕೆಗೆ ಯಾವುದೇ ಅಪಾಯಗಳು ಎದುರಾಗಲಿಲ್ಲ. ಆಕೆ ವಲಸೆಯಾಗಿ ಬಂದಿದ್ದ ಕುಟುಂಬದವರೊಂದಿಗೆ ಸ್ನೇಹವನ್ನು ಬೆಳೆಸುವ ತೀರ್ಮಾನ ತೆಗೆದುಕೊಂಡಳು ಮತ್ತು ಅವರ ಮನಸ್ಥಿತಿಗಳನ್ನು ಅರ್ಥಮಾಡಿಕೊಳ್ಳಲು ಮುಂದಾದಳು.

## ನ್ಯಾಯ 4

ಕೆಲವೊಮ್ಮೆ ನಮ್ಮ ಸ್ನೇಹಿತರು ಅಥವಾ ಗುಂಪಿನವರು ನಮ್ಮನ್ನು ತಿರಸ್ಕರಿಸುತ್ತಾರೆ. ಇದಾಗುವಾಗ ಅವರನ್ನು ಕ್ಷಮಿಸಲು ಬಹಳ ಕಷ್ಟವಾಗುತ್ತದೆ. ಆದರೆ ಕೆಲವೊಮ್ಮೆ ಹದಗೆಟ್ಟಿರುವ ಸಂಬಂಧವನ್ನು ಸರಿಪಡಿಸುವ ಅಥವಾ ಪುನಃ ತಂಡದೊಂದಿಗೆ ಸೇರಿಕೊಳ್ಳುವ ಅವಕಾಶವು ನಮಗೆ ದೊರೆಯುತ್ತದೆ. ಯಾವುದೇ ರೀತಿಯ ಕಹಿತನವಿಲ್ಲದೆ ದೇವರ ಸಹಾಯವಿಲ್ಲದೆ ನಾವು ಈ ಕಾರ್ಯವನ್ನು ಮಾಡಬಹುದು.

## ಆತ್ಮಚರಿತ್ರೆ (ಟ್ಯಾಕ್ಸಿ ಡ್ರೈವರ್) 4


ಟ್ಯಾಕ್ಸಿ ಚಾಲಕರು ಸಮುದಾಯಕ್ಕೆ ವಿಶೇಷವಾದ ಸೇವೆಯನ್ನು ನೀಡುತ್ತಾರೆ. ಟ್ಯಾಕ್ಸಿ ಚಾಲಕನು ಸೇವೆ ಮಾಡುವ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು, ಅದುವೇ ತನ್ನ ರಾಜ್ಯಕ್ಕೆ ಅವಶ್ಯ ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ.

*ಜವಾಬ್ದಾರಿಕೆಗಳು:* ಟ್ಯಾಕ್ಸಿ ಚಾಲಕ ಯಾವುದಾದರೂ ಸಂಸ್ಥೆಗೆ ಸೇರಿದವನಾಗಿರುತ್ತಾನೆ ಅಥವಾ ಸಂಸ್ಥೆಗಾಗಿ ಕೆಲಸ ಮಾಡುವವನಾಗಿರುತ್ತಾನೆ. ಅವರು ಅವನಿಗೆ ಹಣ ತೆಗೆದುಕೊಳ್ಳುವ, ಎಲ್ಲಿಂದ ಪ್ರಾರಂಭಿಸಬೇಕೆನ್ನುವ, ಎಷ್ಟು ತಾಸುಗಳು ವಾಹನ ಚಾಲನೆ ಮಾಡಬೇಕೆನ್ನುವ ಹಾಗೂ ಇತ್ಯಾದಿ ವಿಷಯಗಳ ಮಾರ್ಗದರ್ಶನವನ್ನು ಕೊಡುತ್ತಾರೆ.

*ಅವಕಾಶಗಳು:* ಟ್ಯಾಕ್ಸಿ ಚಾಲಕರು ಯಾವಾಗಲೂ ಜನರೊಂದಿಗೆ ಮಾತನಾಡುತ್ತಾ ಇರುತ್ತಾರೆ. ಕೆಲವರು ಬಡವರಾಗಿರುತ್ತಾರೆ, ಕೆಲವರು ಐಶ್ವರ್ಯವಂತರಾಗಿರುತ್ತಾರೆ. ಕೆಲವರಿಗೆ ಆರ್ಥಿಕ ತೊಂದರೆಗಳಿರುತ್ತವೆ; ಕೆಲವರಿಗೆ


ಮಾನಸಿಕ ತೊಂದರೆಗಳೂ ಇರುತ್ತವೆ. ಚಾಲಕನಾಗಿ, ಪ್ರತಿಯೊಬ್ಬ ವ್ಯಕ್ತಿಯ ಅವಶ್ಯಕತೆ ಏನಾಗಿದೆ ಎಂಬದನ್ನು ಕಲಿತುಕೊಳ್ಳ ಬಹುದು ಮತ್ತು ನಿಮಗಿರುವ ಜವಾಬ್ದಾರಿಕೆಗಳ ಕ್ಷೇತ್ರದಲ್ಲಿ ಹೇಗೆ ಸಹಾಯ ಮಾಡಬಹುದೆಂದು ಯೋಚಿಸಬಹುದು.

## ಪ್ರಶ್ನೆಗಳು ಮತ್ತು ಉತ್ತರಗಳು 4




1. ನಾನು ಏನನ್ನು ಕೇಳಿಸಿಕೊಳ್ಳಬೇಕು? (ಮೊದಲು ದೇವರ ಮಾತು, ನಂತರ ಈ ಲೋಕದಲ್ಲಿರುವ ನಮ್ಮ ಅಧಿಕಾರಿಗಳ ಮಾತು ಕೇಳಿಸಿಕೊಳ್ಳಬೇಕು).
2. ನೀವು ಉತ್ತಮವಾದ ನಡತೆಯುಳ್ಳವರಾದ್ದರಿಂದ ದೇವರು ಮತ್ತು ಇತರರೊಂದಿಗಿನ ನಿಮ್ಮ ಸಂಬಂಧವು ಪ್ರಭಾವಕ್ಕೆ ಒಳಗಾದ ಘನತೆ ಏನಾದರು ಇದ್ದರೆ ಅದನ್ನು ಹಂಚಿಕೊಳ್ಳಿರಿ. (ನಾವು ಪ್ರತಿದಿನ ತೆಗೆದುಕೊಳ್ಳುವ ಸಣ್ಣ ತೀರ್ಮಾನದನುಸಾರ ನಡೆದುಕೊಳ್ಳುವ ಆಯ್ಕೆ ಮಾಡುವದು. ಅನೇಕ ಸಮಯಗಳಲ್ಲಿ ನಾವು ನಮ್ಮ ಗರ್ವವನ್ನು ಜಯಿಸಬೇಕಾಗುತ್ತದೆ, ಇದರ ಮೂಲಕ ನಾವು ಭವಿಷ್ಯದಲ್ಲಿ ಉತ್ತಮವಾದ ತಿರ್ಮಾನಗಳನ್ನು ತೆಗೆದುಕೊಳ್ಳಲು ನಿಯಂತ್ರಣವುಳ್ಳವರಾಗಿರುವಂತೆ ನಮಗೆ ಸಹಾಯವಾಗುತ್ತದೆ).
3. ಜನರು ನಿಮಗೆ ಏನಾದರೂ ಕೆಡುಕನ್ನು ಮಾಡಿರುವಾಗ ನೀವು ಅವರನ್ನು ಕ್ಷಮಿಸಿದ್ದೀರೋ? ಕ್ಷಮಿಸಿದ ನಂತರ ನಿಮಗಾದ ಅನುಭವ ಎಂಥಾದ್ದು? (ಮಕ್ಕಳು ತಮ್ಮ ಅನುಭವ ಹಂಚಿಕೊಳ್ಳಲು ಅವಕಾಶ ಕೊಡಿರಿ ಮತ್ತು ಕ್ಷಮಿಸುವವರಾಗಿರುವದಕ್ಕಾಗಿಯೇ ದೇವರು ನಮ್ಮನ್ನು ಕರೆದಿದ್ದಾನೆ ಎಂದು ಅವರಿಗೆ ಜ್ಞಾಪಕಪಡಿಸಿರಿ).
4. ಐಗುಪ್ತ ದೇಶದಿಂದ ಇಸ್ರಾಯೇಲಿಗೆ ಹೊರಡುವಾಗ ಮರಿಯಳಿಗೆ ಮತ್ತು ಯೋಸೇಫನಿಗೆ ಯಾವ ವಿಷಯ ಅತ್ಯಂತ ಕಷ್ಟಕರವಾಗಿತ್ತು ಎಂದು ನಿಮಗೆ ಅನ್ನಿಸುತ್ತದೆ? (ಮಕ್ಕಳು ಒಬ್ಬೊಬ್ಬರಾಗಿ ತಮ್ಮ ಅಭಿಪ್ರಾಯವನ್ನು ಹೇಳಲಿ).
5. ಯೋಸೇಫನ ನೆಚ್ಚಿನ ಸಾಕುಪ್ರಾಣಿ ಯಾವುದು ಎಂದು ನಿಮಗೆ ಅನ್ನಿಸುತ್ತದೆ? (ಉತ್ತರ ಹೇಳಲು ಅವರಿಗೆ ಅವಕಾಶ ಕೊಡಿರಿ ಮತ್ತು ಶಿಕ್ಷಕರಾಗಿ ನೀವೂ ಭಾಗವಹಿಸಬಹುದು. ಆ ಪ್ರದೇಶದಲ್ಲಿ ಯಾವ ರೀತಿಯ ಪ್ರಾಣಿಗಳಿದ್ದವು ಎಂಬದನ್ನು ಅವರಿಗೆ ಜ್ಞಾಪಕಪಡಿಸಿರಿ).

## ಒಗಟಿನ ಉತ್ತರಗಳು 4






## ಆಟ 4


ಲೀಫ್ ರೇಸ್



ಪ್ರತಿಯೊಂದು ಮಗುವಿಗೂ ಯಾವುದಾದರು ಮರ ಅಥವಾ ಗಿಡದ ತೂಕವಿಲ್ಲದ ಎಲೆಗಳನ್ನು ಮತ್ತು ನೀರು ಕುಡಿಯುವ ಸ್ಟ್ರಾ ಕೊಡಿರಿ. ಮಕ್ಕಳನ್ನು ಎರಡು ತಂಡವಾಗಿ ವಿಭಾಗಿಸಿರಿ. ಎರಡೂ ತಂಡಗಳವರಿಗೆ ಎಲೆಗಳನ್ನು ಎಲ್ಲಿ ಜೋಡಿಸಬೇಕು ಎಂಬದನ್ನು ತಿಳಿಸಿರಿ. ಪ್ರಾರಂಭಿಸಲು ನೀವು ಸಿಗ್ನಲ್

ಕೊಡುವಾಗ, ಆಟಗಾರರೆಲ್ಲರೂ ತಮ್ಮ ಎಲೆಗಳನ್ನು ಗಾಳಿಯಲ್ಲಿ ಎಸೆಯಬೇಕು ಮತ್ತು ಸ್ಟ್ರಾದಿಂದ ಊದುವ ಮೂಲಕ ಅವರು ಎಲೆಗಳನ್ನು ತಮಗೆ ಹೇಳಲಾಗಿರುವ ಸ್ಥಳದಲ್ಲಿ ಜೋಡಿಸಬೇಕು. ಯಾವ ತಂಡದವರು ತಮಗೆ ಹೇಳಲಾಗಿರುವ ಸ್ಥಳದಲ್ಲಿ ಎಲೆಗಳನ್ನು ಜೋಡಿಸುತ್ತಾರೋ ಅವರು ಗೆಲ್ಲುತ್ತಾರೆ. (ಕೆಲವೊಮ್ಮೆ ಎಲ್ಲಾ ಎಲೆಗಳು ಅವರದ್ದಲ್ಲದಿರಬಹುದು, ಅವರು ತಮ್ಮ ಎದುರಾಳಿ ತಂಡದ ಎಲೆಗಳನ್ನು ತಮ್ಮ ಕಡೆಗೆ ಎಳೆದುಕೊಂಡಿರಬಹುದು).

## ಹೋಮ್ ವರ್ಕ್ 4




ಇತ್ತೀಚೆಗೆ ಯಾರಾದರೂ ನಿಮ್ಮ ಸ್ಥಳಕ್ಕೆ ಹೊಸದಾಗಿ ಬಂದಿದ್ದಾರೋ ಎಂದು ವಿಚಾರಿಸಿರಿ ಮತ್ತು ನಿಮಗೂ ಅವರಿಗೂ ಹೊಂದಿಕೆಯಾಗುವಂಥ ವಿಷಯಗಳು ಗೊತ್ತಾಗುವ ತನಕ ಅವರ ಸಂಗಡ ಮಾತನಾಡಿರಿ. ನಿಮ್ಮಿಬ್ಬರ ಇಷ್ಟ ಏನು ಎಂದು ತಿಳಿದುಕೊಳ್ಳಿರಿ. ಅವರನ್ನು ನಿಮ್ಮ ಸಭೆಗೆ ಆಹ್ವಾನಿಸಿರಿ.

# ಯೇಸು ಕ್ರಿಸ್ತನ ಅಗಾಧವಾದ ಬುದ್ಧಿಶಕ್ತಿ 05

## ದೇವಾಲಯದಲ್ಲಿ ಯೇಸು ಕ್ರಿಸ್ತನು: ಲೂಕ 2:41-51



### ನಾಟಕ (ಮೊದಲನೆಯ ಭಾಗ)

ಏಜೆಂಟ್ ತನ್ನ ಬಳಿಯಿರುವ ಸಂವಹನದ ಯಂತ್ರದೊಂದಿಗೆ ಆಟವಾಡುತ್ತಾ ಇದ್ದಾನೆ, ಹಾಗೇ ಸುಮ್ಮನೇ ಆಟವಾಡುತ್ತಾ ಅದರ ಸೆಟ್ಟಿಂಗ್ ಗಳನ್ನೆಲ್ಲಾ ಬದಲಾಯಿಸಿದನು. ತಂಡದವರು ಇಂದಿನ ನಿಯೋಗಕ್ಕೆ ಸಿದ್ಧರಾಗುವಾಗ, ನಾಯಕನು ಎಲ್ಲರಿಗೂ ನಿಮ್ಮ ಸೆಟ್ಟಿಂಗ್ ಗಳನ್ನು ಸರಿಪಡಿಸಿಕೊಳ್ಳಿರಿ ಎಂದು ಹೇಳಿದನು. ಏಜೆಂಟ್ ಆ ಕಡೆಗೆ ಗಮನ ಕೊಡುತ್ತಾ ಇಲ್ಲ ಆದರೂ ಎಲ್ಲವೂ ನಿಯಂತ್ರಣದಲ್ಲಿದೆ ಮತ್ತು ಸಿದ್ಧವಾಗಿದೆ ಎಂಬ ರೀತಿಯಲ್ಲಿ ನಟಿಸುತ್ತಾ ಇದ್ದಾನೆ. ನಾಯಕನು ಪ್ರಶ್ನಿಸಿದಾಗ, ಏಜೆಂಟ್ ತನ್ನನ್ನು ಸಮರ್ಥಿಸಿಕೊಂಡನು ಮತ್ತು ಆತನ ಮಾತುಗಳಿಗೆ ಇನ್ನು ಲಕ್ಷ್ಯಕೊಡದೆ, ಮಧ್ಯದಲ್ಲಿ ಮಾತನಾಡುತ್ತಾ, ಆತನಿಗೆ ಅಡ್ಡಿಪಡಿಸುತ್ತಾ ಇದ್ದನು. ಮಷಿನ್ ಸಿದ್ಧಗೊಳ್ಳುವಾಗ, 12 ವರ್ಷದವನಾದ ಯೇಸು ಕ್ರಿಸ್ತನು ದೇವಾಲಯಕ್ಕೆ ಹೋದದ್ದನ್ನು ತಿಳಿಯಲು ಸಮಯದ ಹಿಂದೆ ಹೊರಟರು.

### ಪಾಠ 5

ಯೇಸು ಕ್ರಿಸ್ತನು ಮಗನಾಗಿರುವದು ಆಸಕ್ತಿಕರ ವಿಷಯವಾಗಿತ್ತು!

ಲೂಕ 2:41-51 ಓದಿರಿ

ತಮ್ಮ 12 ವಯಸ್ಸಿನ ಹುಡುಗ ಧಾರ್ಮಿಕ ನಾಯಕರೊಂದಿಗೆ ಕುಳಿತುಕೊಂಡು ದೇವರ ಕುರಿತಾದ ವಿಷಯಗಳನ್ನು ಚರ್ಚಿಸುವದನ್ನು ನೋಡಿದಾಗ ಮರಿಯಳಿಗೆ ಮತ್ತು ಯೋಸೇಫನಿಗೆ ಆದ ಆಘಾತ ಮತ್ತು ಸಂತೋಷ ಹೇಗಿರಬಹುದೆಂದು ಊಹಿಸಿಕೊಳ್ಳಿರಿ. ಪ್ರಶ್ನೆಗಳಿಗೆ ಆತನು ಕೊಡುತ್ತಿದ್ದ ಉತ್ತರಗಳು ಎಷ್ಟು ಜ್ಞಾನದಿಂದ ಕೂಡಿತ್ತೆಂದರೆ ಹಿರಿಯರು ಸಹ ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಾ ಇದ್ದರು. ಇದಲ್ಲದೆ ಯೇಸು ಕ್ರಿಸ್ತನು ಸಹ ಇತರರ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಇದ್ದನು, ಅವರು ಹೇಳುವದನ್ನೂ ಕೇಳಿಸಿಕೊಳ್ಳಬೇಕೆಂಬದು ಆತನ ಬಯಕೆಯಾಗಿತ್ತು. ಯೇಸು ಕ್ರಿಸ್ತನು ಯಾರು ಎಂಬದನ್ನು ಈ ಘಟನೆಯು ನಮಗೆ ಹೇಳುತ್ತದೆ. ಆತನು ಜವಾಬ್ದಾರಿಕೆಯುಳ್ಳವನಾದ್ದರಿಂದ ಆತನಿಗೆ ಕೇವಲ 12 ವರ್ಷ ವಯಸ್ಸಾಗಿದ್ದರೂ, ಆತನ ತಂದೆತಾಯಿಗಳು ಆತನನ್ನು ನಂಬುತ್ತಾ ಇದ್ದರು. ಯೇಸು ಕ್ರಿಸ್ತನು ಬಾಲಕನಾಗಿದ್ದಾಗಲೂ ನಂಬಿಗಸ್ತನಾಗಿದ್ದನು ಮತ್ತು ಜವಾಬ್ದಾರಿಕೆಯುಳ್ಳವನಾಗಿದ್ದನು.

ಶಾಸ್ತ್ರಾಭ್ಯಾಸ ಮಾಡಿದ್ದ ವಯಸ್ಕರ ನಡುವೆ ಕುಳಿತುಕೊಂಡು ಮಾತನಾಡುವ ಆತ್ಮವಿಶ್ವಾಸ ಮತ್ತು ಧೈರ್ಯ ಯೇಸು ಕ್ರಿಸ್ತನಿಗಿತ್ತು, ಹಾಗೆಯೇ ಅವರ ಮಧ್ಯದಲ್ಲಿ ಕುಳಿತು ಅವರ ಮಾತುಗಳನ್ನು ಕೇಳಿಸಿಕೊಳ್ಳಬೇಕೆಂಬ ತಿಳುವಳಿಕೆಯೂ ಆತನಿಗಿತ್ತು.

ನಾನೂ, ನೀವೂ ಸೇರಿ ದೇವರು ತನ್ನ ಮಕ್ಕಳೆಲ್ಲರ ಮೂಲಕ ಕಾರ್ಯ ಮಾಡುವವನಾಗಿದ್ದಾನೆ. ನಿಜವಾಗಿ ಹೇಳುವದಾದರೆ ವಯಸ್ಕರ ಮತ್ತು ಯೌವನಸ್ಥರ ದೃಷ್ಟಿಕೊನ ಬೇರೆಬೇರೆಯಾಗಿರುತ್ತವೆ ಮತ್ತು ದೇವರು ಇದನ್ನು ಉಪಯೋಗಿಸಿಕೊಳ್ಳಲು ಬಯಸುತ್ತಾನೆ. ಅಪೊಸ್ತಲನಾದ ಪೌಲನು ತಿಮೊಥೆಯನಿಗೆ ಬರೆದ ತನ್ನ ಪತ್ರಿಕೆಯಲ್ಲಿ ಹೇಳಿರುವದೇನೆಂದರೆ, "ಯೌವನಸ್ಥನೆಂದು ನಿನ್ನನ್ನು ಅಸಡ್ಡೆ ಮಾಡುವದಕ್ಕೆ ಯಾರಿಗೂ ಅವಕಾಶ ಕೊಡದೆ ನಂಬುವವರಿಗೆ ನಡೆ, ನುಡಿ, ಪ್ರೀತಿ, ನಂಬಿಕೆ, ಶುದ್ಧತ್ವ ಇವುಗಳ ವಿಷಯದಲ್ಲಿ ನೀನೇ ಮಾದರಿಯಾಗಿರು" (1 ತಿಮೊಥೆ 4:12).

ನೀವು ನಿಮ್ಮ ಸತ್ಯವೇದವನ್ನು ಓದುವಾಗ, ಪ್ರಾರ್ಥನೆ ಮಾಡುವಾಗ ಮತ್ತು ದೇವರು ನಿಮಗೆ ಹೇಳುವವುಗಳನ್ನು ಕೇಳಿಸಿಕೊಳ್ಳುವಾಗ, ಸತ್ಯವೇದದಲ್ಲಿ ಇದುವರೆಗೂ ನಿಮಗೆ ಗೊತ್ತಿರದ ವಿಷಯಗಳನ್ನು ಆತನು ನಿಮಗೆ ತಿಳಿಸುವನು. ಅವುಗಳಲ್ಲಿ ಕೆಲವು ವಿಷಯಗಳು ಕೇವಲ ನಿಮಗೆ ಮಾತ್ರವೇ ಆಗಿರುತ್ತವೆ ಮತ್ತು ಇನ್ನೂ ಕೆಲವು ವಿಷಯಗಳನ್ನು ನೀವು ಇತರರೊಂದಿಗೆ ಹಂಚಿಕೊಳ್ಳಬೇಕಾಗುತ್ತದೆ. ನಾವು ಜನರೊಂದಿಗೆ ಮಾತನಾಡುವಾಗ, ಮಾತನಾಡುವದು ಮತ್ತು ಕೇಳಿಸಿಕೊಳ್ಳುವದು ನಿಜವಾಗಿಯೂ ಚೆನ್ನಾಗಿರುತ್ತದೆ. ನಿಜವಾಗಿ ಹೇಳುವದಾದರೆ, ನಮಗೆ ಮಾತನಾಡುವದಕ್ಕಿಂತ ಕೇಳಿಸಿಕೊಳ್ಳುವದು ಕಷ್ಟವಾಗುತ್ತದೆಯಾದರೂ, ಕೇಳಿಸಿಕೊಳ್ಳುವದು ಪ್ರಾಮುಖ್ಯವಾಗಿದೆ. ಮತ್ತು ನಾವು ಮಾತನಾಡುವಾಗ, ನಮಗೆ ದೃಢತೆಯಿರುವ ವಿಷಯಗಳನ್ನು ಮಾತ್ರವೇ ನಾವು ಹೇಳಿದರೆ, ಅವುಗಳನ್ನು ಇತರರು ಕೇಳಿಸಿಕೊಳ್ಳುತ್ತಾರೆ.

### ಕಂಠಪಾಠ ವಚನ 5

ಯಾಕೋಬನು 1:19 “ಸಹೋದರರೇ, ಇದನ್ನು ನೆನಪಿನಲ್ಲಿಡಿ; ನಿಮ್ಮಲ್ಲಿ ಪ್ರತಿಯೊಬ್ಬನು ಆಲಿಸುವುದರಲ್ಲಿ ಚುರುಕಾಗಿ, ಮಾತನಾಡುವುದರಲ್ಲಿ ದುಡುಕದೆ, ಸಿಟ್ಟುಗೊಳ್ಳುವುದರಲ್ಲಿ ಸಾವಧಾನವಾಗಿ ಇರಲಿ.”

### ನಾಟಕ (ಭಾಗ ಎರಡು)

ತಮ್ಮ ಕಾರ್ಯದಿಂದ ಹಿಂದಿರುಗಿ ಬಂದ ನಂತರ ಏಜೆಂಟ್ ಸಂಗಡ ಮಾತನಾಡಲು ನಾಯಕನು ಅವನನ್ನು ಪಕ್ಕಕ್ಕೆ ಕರೆದುಕೊಂಡು ಹೋದನು. ಆತನ ಉಪಕರಣದಲ್ಲಾದ ತಪ್ಪಾದ ಸೆಟ್ಟಿಂಗ್ ನಿಂದ ಆತನು ಯಾವ ಸ್ಥಾನದಲ್ಲಿದ್ದಾನೆ ಎಂಬದನ್ನು ತಿಳಿದುಕೊಳ್ಳಲು ಅವರಿಗೆ ಕಷ್ಟವಾಗಿತ್ತು ಮತ್ತು ಆತನ ಸಾಧನದಲ್ಲಿದ್ದ ಶಬ್ದ ಸೆಟ್ಟಿಂಗ್ ಗಳಿಂದ ಜೋರಾದ ಶಬ್ದ ಬರುತ್ತಿತ್ತು ಆದ್ದರಿಂದ ಆಲಯದಲ್ಲಿ ಹೆಚ್ಚು ಶಬ್ದವಾಗುತ್ತಾ ಇತ್ತು, ಸಮಯದ ಹಿಂದೆ ಹೊರಡುವ ಪ್ರಯಾಣಕರಿಗೆ ಇದರಿಂದ ಬಹಳ ತೊಂದರೆಯಾಯಿತು. ಅವರು ಸಂಪೂರ್ಣವಾಗಿ ತಮ್ಮ ಕಾರ್ಯದಲ್ಲಿ ವಿಫಲರಾದರು. ನಾನು ತಪ್ಪು ಮಾಡಿದೆನೆಂದು ಏಜೆಂಟ್ ಒಪ್ಪಿಕೊಂಡನು ಮತ್ತು ಇನ್ನು ಮುಂದೆ ಮಾತು ಕೇಳುವದಾಗಿ ಹೇಳಿದನು.

### ನ್ಯಾಯ 5

ಯೇಸು ಕ್ರಿಸ್ತನು ಕಲಿಸುತ್ತಾ ಇದ್ದನು ಹಾಗೆಯೇ ಕೇಳಿಸಿಕೊಳ್ಳುತ್ತಲೂ ಇದ್ದನು. ಇತರರ ಮಾತುಗಳನ್ನು ಕೇಳಿಸಿಕೊಳ್ಳುವದು ಬಹಳ ಪ್ರಾಮುಖ್ಯವಾಗಿದೆ! ಕೇಳಿಸಿಕೊಳ್ಳುವದರಿಂದ ನಾವು ಹಲವು ವಿಷಯಗಳನ್ನು ಕಲಿತುಕೊಳ್ಳಬಹುದು, ಇದಲ್ಲದೆ ನಾವು ಕೇಳಿಸಿಕೊಳ್ಳುವಾಗ ಇತರರಿಗೆ ಬಹಳ ಸಂತೋಷವಾಗುತ್ತದೆ.

### ಆತ್ಮಚರಿತ್ರೆ (ಬೋಧಕ) 5

ಶಿಕ್ಷಕರು ಅತ್ಯಂತ ಪ್ರಾಮುಖ್ಯವಾದ ಸ್ಥಾನದಲ್ಲಿರುವವರಾಗಿದ್ದಾರೆ. ಜನರಿಗೆ ತರಬೇತಿ ಮತ್ತು ಮಾರ್ಗದರ್ಶನವನ್ನು ಕೊಡಲು ದೇವರು ಅವರನ್ನು ಉಪಯೋಗಿಸುತ್ತಾನೆ. ಕೆಲವೊಮ್ಮೆ ನಾವು ಕ್ರೈಸ್ತರಲ್ಲದ ಶಿಕ್ಷಕರು ಒಳ್ಳೆಯವರಲ್ಲ ಎಂದು ಯೋಚಿಸುತ್ತೇವೆ, ಆದರೆ ದೇವರು ಎಲ್ಲರನ್ನು ಪ್ರೀತಿಸುತ್ತಾನೆ ಮತ್ತು ತಾನು ಪ್ರೀತಿಸು ಜನರಿಗಾಗಿ ಯಥಾರ್ಥವಾಗಿ ಚಿಂತಿಸುವವರೊಂದಿಗೆ ಆತನು ಕೆಲಸ ಮಾಡುತ್ತಾನೆ. ಯೇಸು ಕ್ರಿಸ್ತನು ದೇವರ ಬಳಿಯಿಂದ ಬಂದಿರುವ ಬೋಧಕನು ಎಂಬದನ್ನು ನಿಕೊದೆಮನು ತಿಳಿದುಕೊಂಡನು (ಯೋಹಾನ 3:2).

*ಜವಾಬ್ದಾರಿಕೆಗಳು:* ಶಿಕ್ಷಕರು ಖಂಡಿತವಾಗಿಯೂ ತಮ್ಮ ಅಧಿಕಾರಿಗಳಿಗೆ ಅಧೀನರಾಗಿರುತ್ತಾರೆ ಮತ್ತು ಅವರ ಮಾರ್ಗದರ್ಶನಗಳನ್ನು ತಪ್ಪದೆ ಪಾಲಿಸಬೇಕಾಗುತ್ತದೆ. ಆದರೆ ಅವರು ತಮ್ಮ ಬೋಧನಾ ಕೌಶಲ್ಯ ಮತ್ತು ವಿಷಯಗಳ ಕುರಿತಾದ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಬೇಕಾದದ್ದು ಅವರ ಜವಾಬ್ದಾರಿಕೆಯಾಗಿದೆ. ಜನರ ಬಗ್ಗೆ ಹೆಚ್ಚಾಗಿ


ತಿಳಿದುಕೊಳ್ಳುವದು ಮತ್ತು ಅವರು ಜನರೊಂದಿಗೆ ಹೇಗೆ ಸಂವಹನ ನಡೆಸುತ್ತಾರೆ ಎಂಬದನ್ನು ಒಳಗೊಂಡಿರುತ್ತದೆ. ಸಮಾಜವು ಹೇಗೆ ಬದಲಾಗುತ್ತಿದೆ ಎಂಬ ಅರಿವೂ ಅವರಿಗೆ ಇರಬೇಕು ಮತ್ತು ವಿದ್ಯಾರ್ಥಿಗಳೊಂದಿಗೆ ಉತ್ತಮವಾದ ಸಂಪರ್ಕವನ್ನು ನಡೆಸಲು ಅವರು ಕಲಿಸುವ ಶೈಲಿಗಳನ್ನೂ ಬದಲಾಯಿಸಿಕೊಳ್ಳಬೇಕು.

*ಅವಕಾಶಗಳು:* ಶಿಕ್ಷಕರು ತಮ್ಮ ಕೌಶಲ್ಯಗಳನ್ನು ಯಾವಾಗಲೂ ಅಭಿವೃದ್ಧಿಪಡಿಸಿಕೊಳ್ಳಬೇಕು, ಅದು ಅವರಿಗೆ ವೈಯಕ್ತಿಕವಾಗಿಯೂ ಪ್ರಯೋಜನಕಾರಿಯಾಗಿದೆ. ಜನರ ಜೀವಿತಗಳನ್ನು ರೂಪಿಸಲು ಸಹ ಅದರಿಂದ ಸಾಧ್ಯವಾಗುತ್ತದೆ- ಅವರು ಕಲಿಸುವ ವಿಷಯಗಳ ಆಧಾರದ ಮೇರೆಗೆ ವಿದ್ಯಾರ್ಥಿಗಳು ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಭವಿಷ್ಯದಲ್ಲಿ ಯಶಸ್ವಿಯಾಗಲು ತಿಳುವಳಿಕೆಯನ್ನು ಹೊಂದುತ್ತಾರೆ. ವಿದ್ಯಾರ್ಥಿಗಳಲ್ಲಿರುವ ಸಾಮರ್ಥ್ಯಗಳನ್ನು ಗುರುತಿಸಲು ಮತ್ತು ತಕ್ಕ ಮಾರ್ಗದರ್ಶನಗಳನ್ನು ಕೊಡಲು ಶಿಕ್ಷಕರಿಗೆ ಸಾಧ್ಯವಾಗುತ್ತದೆ. ಒಳ್ಳೆಯ ಬೋಧಕನು ಜನರ ಮೇಲೆ ಮತ್ತು ಅವರ ಮುಂದಿನ ಪೀಳಿಗೆಯ ಮೇಲೆ ಪ್ರಭಾವ ಬೀರುತ್ತಾನೆ.


## ಪ್ರಶ್ನೆಗಳು ಮತ್ತು ಉತ್ತರಗಳು 5

1. ಇತರರಿಗೆ ಪ್ರೋತ್ಸಾಹಪಡಿಸುವದರಲ್ಲಿ ಪ್ರೀತಿ ಹೇಗೆ ವ್ಯಕ್ತವಾಗುತ್ತದೆ? (ತಮ್ಮ ಅಭಿಪ್ರಾಯಗಳನ್ನು ನಿರೂಪಿಸಲು ನಿಜವಾದ ಉದಾಹರಣೆಗಳನ್ನು ಕೊಡುವಂತೆ ವಿದ್ಯಾರ್ಥಿಗಳಿಗೆ ಹೇಳಿರಿ).
2. ನೀವು ಮಾಡಬೇಕೆಂದಿದ್ದ ಕೆಲಸಕ್ಕೆ ಬದಲಾಗಿ ಬೇರೆಯವರಿಗೆ ಅವರು ಬಯಸಿದ ಕಾರ್ಯವನ್ನು ಮಾಡಲು ನೀವು ಅವಕಾಶ ಮಾಡಿಕೊಟ್ಟಂಥ ಘಟನೆ ಏನಾದರು ನಿಮಗೆ ನೆನಪಿದೆಯೇ? (ಗೆಲ್ಲುವ ಅವಕಾಶವನ್ನು ಇತರರಿಗೆ ಬಿಟ್ಟುಕೊಡುವದು ಮಾನವರಾದ ನಮಗೆ ಬಹಳ ಕಷ್ಟದ ಕೆಲಸವಾಗಿದೆ. ಬೇರೆಯವರಿಗೆ ಅವರು ಬಯಸಿದ ಕಾರ್ಯಗಳನ್ನು ಮಾಡಲು ಅವಕಾಶ ನೀಡಿದ ಕಥೆಗಳು ಹಳೆಯವುಗಳಾಗಿದ್ದರೂ ಅವುಗಳನ್ನು ಹಂಚಿಕೊಳ್ಳಲು ನಿಮ್ಮ ವಿದ್ಯಾರ್ಥಿಗಳಿಗೆ ಅವಕಾಶ ಕೊಡಿರಿ. ನಾವು ಇತರರಿಗೆ ಗೆಲ್ಲುವ ಅವಕಾಶವನ್ನು ಕೊಡದೆ ಇರುವದು ಎಷ್ಟು ಘೋರವಾಗಿರುತ್ತದೆ ಮತ್ತು ನಾವು ಎಲ್ಲರೊಂದಿಗೆ ಸಮಾಧಾನದಿಂದ ಜೀವಿಸಬೇಕೆಂದು ದೇವರು ಬಯಸುತ್ತಾನೆ ಎಂಬದ ಬಗ್ಗೆ ಚರ್ಚೆ ಮಾಡಿರಿ).
3. ನಿಮ್ಮ ಶಾಲೆಯ ನಿಮ್ಮ ತರಗತಿಯಲ್ಲಿ ನೀವೇನಾದರೂ ಅಸಮಾಧಾನ, ತಿರಸ್ಕಾರ ಅಥವಾ ತಳ್ಳಲ್ಪಡುವಿಕೆಯ ಘಟನೆಯನ್ನು ನೋಡಿದ್ದೀರೋ? (ಅವರು ನೋಡಿರಬಹುದಾದ ವಿವಿಧ ಘಟನೆಗಳು, ಅವುಗಳು ಒಳ್ಳೆಯದಲ್ಲ ಮತ್ತು ಅವುಗಳಿಗೆ ಒಳಗಾಗುವ ವ್ಯಕ್ತಿಗೆ ಹೇಗೆ ನೋವಾಗುತ್ತದೆ ಎಂಬದ ನಡುವೆ ಚರ್ಚಿಸುವಂತೆ ಹೇಳಿರಿ).
4. ಬೇರೆ ಯಾರಿಂದಲೂ ಮಾಡಲಾಗದ ಯಾವ ಕಾರ್ಯವನ್ನು ನೀವು ಮಾಡಬಲ್ಲಿರಿ? (ಉದಾಹರಣೆಗೆ ಮಕ್ಕಳು ಸಾರ್ವಜನಿಕವಾಗಿ ಮಾತನಾಡಲು, ಎತ್ತರವಾಗಿ ಜಿಗಿಯಲು, ಹಾಡಲು ಇತ್ಯಾದಿ ಕಾರ್ಯಗಳನ್ನು ಮಾಡಲು ಅಡಚಣೆಯನ್ನುಂಟು ಮಾಡುವ ಕಾರ್ಯಗಳು ಯಾವುವು ಎಂದು ಕೇಳಿರಿ. ದೇವರು ಪ್ರತಿಯೊಬ್ಬರಿಗೆ ವಿಶೇಷ ತಲಾಂತು ಕೊಟ್ಟಿದ್ದಾನೆ ಎಂದು ಅವರಿಗೆ ಜ್ಞಾಪಕಪಡಿಸಿರಿ).
5. ಯೇಸು ಕ್ರಿಸ್ತನು ದೇವರ ವಿಷಯವಾಗಿ ಚರ್ಚೆ ಮಾಡುವದನ್ನು ಒಂದುವೇಳೆ ನೀವು ನೋಡುವದಾದರೆ ನಿಮಗೆ ಹೇಗೆ ಅನ್ನಿಸುತ್ತದೆ? (ಮಕ್ಕಳು ಕೊಡುವ ಉತ್ತರಗಳನ್ನು ಕೇಳಿಸಿಕೊಡಿರಿ)

## ಒಗಟಿಗೆ ಉತ್ತರಗಳು 5







## ಆಟ 5

ಕಪ್ಸ್



ಮಕ್ಕಳನ್ನು ಎರಡು ಅಥವಾ ಮೂರು ತಂಡಗಳನ್ನಾಗಿ ಮಾಡಿರಿ. ಪ್ರತಿಯೊಂದು ತಂಡದವರಿಗೆ ಸಾಲಾಗಿ 6 ಕಪ್ ಗಳನ್ನು ಕೊಡಿರಿ: 5ರಲ್ಲಿ ನೀರು ತುಂಬಿಸಿರಿ ಮತ್ತು ಕಡೆಯಲ್ಲಿರುವ 1 ಖಾಲಿಯಾಗಿರಲಿ. ಪ್ರತಿಯೊಂದು ತಂಡದವರಿಗೆ ಸ್ಟೈರೊಫೊಮ್ ಬಾಲ್ ಗಳಿರುತ್ತವೆ (ಪಾಲಿಸ್ಟ್ರೀನ್, ಥರ್ಮಾಕೊಲ್, ವಿಸ್ತರಿಸಲಾದ ಪಾಲಿಸ್ಟ್ರೀನ್ ಅಥವಾ ನೀರಿನ ಮೇಲೆ ತೇಲುವಂಥ ಲಘು ಭಾರದ ವಸ್ತು). ನೀರು ತುಂಬಿಸಿರುವ ಕಪ್ ನಲ್ಲಿ ತೇಲುವ ಚೆಂಡು ಹಾಕಿರಿ. ಮಕ್ಕಳು ಕಪ್ ನೊಳಗಿರುವ ನೀರಿನ ಮೇಲಿನ ಚೆಂಡನ್ನು ಊದುತ್ತಾ ಕಡೆಯಲ್ಲಿ ಇರುವ ಖಾಲಿ ಕಪ್ ತನಕ ಹೋಗಬೇಕು. ನಂತರ ಬೇರೊಬ್ಬ ಆಟಗಾರನ ಸರದಿ ಬರುತ್ತದೆ. ಯಾವ ತಂಡದವರು ತಮ್ಮ ಚೆಂಡುಗಳನ್ನೆಲ್ಲಾ ಕಪ್ ನೊಳಗೆ ಹಾಕುತ್ತಾರೋ ಅವರು ಗೆಲ್ಲುತ್ತಾರೆ.

## ಹೋಮ್ ವರ್ಕ್ 5




ನೀವು ಕೇಳಿಸಿಕೊಂಡವುಗಳನ್ನು ನಿಮ್ಮ ಮಾತುಗಳಲ್ಲಿ ಹೇಳುವದನ್ನು ಮತ್ತು ಕೇಳಿಸಿಕೊಳ್ಳುವದನ್ನು ಅಭ್ಯಾಸ ಮಾಡಿರಿ. ಮೊದಲು, ಗಟ್ಟಿಯಾಗಿ ಸತ್ಯವೇದದ ವಾಕ್ಯವನ್ನು ಓದಿರಿ ಮತ್ತು ದೇವರು ನಿಮ್ಮೊಂದಿಗೆ ಅದರ ಮೂಲಕ ಮಾತನಾಡುವದನ್ನು ಮನವರಿಕೆ ಮಾಡಿಕೊಂಡು, ಅದರ ಅರ್ಥ ಏನೆಂದು ನಿಮ್ಮ ಮಾತುಗಳನ್ನು ವಿವರಿಸಿರಿ. ಎರಡನೆಯದಾಗಿ, ಕುಟುಂಬದ ಸದಸ್ಯನ ಮಾತುಗಳನ್ನು ಎಚ್ಚರಿಕೆಯಿಂದ ಕೇಳಿಸಿಕೊಳ್ಳಿರಿ ಮತ್ತು ಅವರು ಯಾವ ಅರ್ಥದಿಂದ ಅದನ್ನು ಹೇಳಿದರೋ ಅದನ್ನೇ ಪುನಃ ಅವರಿಗೆ ಹೇಳಿರಿ.

# ಉನ್ನತವಾದ ಪ್ರಾರಂಭ 06

## ಯೇಸು ಕ್ರಿಸ್ತನ ದೀಕ್ಷಾಸ್ನಾನ: ಮತ್ತಾಯ 3:13-17



### ನಾಟಕ (ಮೊದಲನೇ ಭಾಗ)

ಏಜೆಂಟ್ ಟೈಮ್ ಮಿಷನ್ ಮೆಕಾನಿಕ್ ಬಗ್ಗೆ ಸ್ವಲ್ಪವಾಗಿ ಕಲಿತುಕೊಳ್ಳಲು ಪ್ರಾರಂಭಿಸಿದನು ಮತ್ತು ಅವುಗಳನ್ನು ಬಹುಬೇಗ ಕಲಿತುಕೊಳ್ಳುತ್ತಾ ಇದ್ದನು. ಬಹುಬೇಗನೇ ಅವನು ಮಷಿನ್ ಸ್ಟಾರ್ಟ್ ಅಪ್ ವಿಧಾನಕ್ಕೆ ಅಡ್ಡದಾರಿ ಆಲೋಚನೆಗಳನ್ನು ಮಾಡಿದನು ಮತ್ತು ಅವುಗಳನ್ನು ಅನುಸರಿಸುವದಾದರೆ ಸಮಯವನ್ನು ಹಾಗೂ ಇಂಧನವನ್ನು ಉಳಿಸಬಹುದು ಎಂದು ಸೂಚಿಸಿದನು. ಇಂದು ಪ್ರಮುಖ ಮೆಕಾನಿಕ್ ರಜೆಯಲ್ಲಿದ್ದಾನೆ ಮತ್ತು ನಾಯಕನು ಮೆಷಿನ್ ನಡೆಸುತ್ತಾ ಇದ್ದಾನೆ, ಆದರೆ ಏಜೆಂಟ್ ಆಗಾಗ ನಡುವೆ ಬಂದು ತನ್ನ ಹೊಸ ತಂತ್ರಗಳನ್ನು ಪ್ರಯತ್ನಿಸುತ್ತಾ ಇದ್ದಾನೆ. ಬಹಳ ಹಿಂಸೆಯಾದರೂ, ಅದು ಕಾರ್ಯ ಮಾಡುವಂತೆ ನಾಯಕನು ಗಮನಿಸಿದನು ಮತ್ತು ಅವರು ತಮ್ಮ ಕಾರ್ಯಕ್ಕೆ ಹೋದರು.

### ಪಾಠ 6

ಯೇಸು ಕ್ರಿಸ್ತನು ಈಗ ಯೌವನಸ್ಥನಾಗಿ ತನ್ನ ಸಾರ್ವಜನಿಕ ಸೇವೆಯನ್ನು ಪ್ರಾರಂಭಿಸುತ್ತಾ ಇದ್ದಾನೆ. ಆತನು ಕಾರ್ಯಗಳನ್ನು ಸರಿಯಾಗಿ ಮಾಡಬೇಕೆಂದಿದ್ದನು, ಆದ್ದರಿಂದ ದೇವರ ಪ್ರವಾದಿಯೆಂದು ಗುರುತಿಸಲ್ಪಡುತ್ತಾ ಇದ್ದ ಸ್ನಾನಿಕನಾದ ಯೋಹಾನನ ಬಳಿಗೆ ಹೋದನು. ಯೋಹಾನನು ಮಾತ್ರವೇ ಆ ಸಮಯದಲ್ಲಿ ಯೇಸು ಕ್ರಿಸ್ತನು ಯಾರು ಎಂದು ಅರ್ಥಮಾಡಿಕೊಂಡಿದ್ದ ವ್ಯಕ್ತಿಯಾಗಿದ್ದನು ಮತ್ತು ಯೇಸು ಕ್ರಿಸ್ತನು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದಿದ್ದನು. ದೀಕ್ಷಾಸ್ನಾನವು ಸಾರ್ವಜನಿಕವಾದ ಸಂಪ್ರದಾಯವಾದ ಸ್ನಾನವಾಗಿದ್ದು ಒಬ್ಬ ವ್ಯಕ್ತಿಯ ಹೊಸ ಪ್ರಾರಂಭಕ್ಕೆ ಗುರುತಾಗಿದೆ.

ಮತ್ತಾಯ 3:11-17 ಓದಿರಿ

ಎಂಥಾ ದಿನ! ಯೇಸು ಕ್ರಿಸ್ತನು ದೇವಕುಮಾರನೆಂದು ದೃಢಪಟ್ಟಿತು ಮತ್ತು ನಾನು ಈತನನ್ನು ಮೆಚ್ಚಿದ್ದೇನೆ ಎಂದು ದೇವರು ಹೇಳಿದನು! ಇದನ್ನು ಕೇಳಲು ಬಹಳ ಖುಷಿಯಾಗುತ್ತದೇ ಅಲ್ಲವೇ!

ಇದು ಅದ್ಭುತವಾದ ಕಥೆಯಾಗಿದೆ. ಸ್ನಾನಿಕನಾದ ಯೋಹಾನನ್ನೂ ಸೇರಿಸಿ ಯೇಸು ಕ್ರಿಸ್ತನಿಗೆ ಜನರ ಸಮ್ಮತಿ ಬೇಕಾಗಿರಲಿಲ್ಲ, ಆದರೆ ಯೇಸು ಕ್ರಿಸ್ತನು ಎಲ್ಲಾ ಧರ್ಮವನ್ನು ನೆರವೇರಿಸಬೇಕೆಂದಿದ್ದನು. ಅದರ ಪರಿಣಾಮಗಳು ಬಹಳ ಯುಕ್ತವಾಗಿದ್ದವು. ಯೇಸು ಕ್ರಿಸ್ತನು ದೇವರಾಗಿದ್ದಾನೆ ಮತ್ತು ದೇವರ ಕೆಲಸ ಮಾಡುತ್ತಾ ಇದ್ದಾನೆ ಎಂದು ದೇವರೇ ಸಾರ್ವಜನಿಕವಾಗಿ ತಿಳಿಸಿದನು.

ನಾವು ಸಹ ಅವಶ್ಯವಾದ ಕಾರ್ಯಗಳನ್ನೆಲ್ಲಾ ಮಾಡಲು ಸಿದ್ಧರಾಗಿರಬೇಕು. ರಕ್ಷಣೆಗಾಗಿ ಯೇಸು ಕ್ರಿಸ್ತನನ್ನು ಬೇಡಿಕೊಳ್ಳುವದು, ದೀಕ್ಷಾಸ್ನಾನಕ್ಕಾಗಿ ಒಪ್ಪಿಸುವದು, ತರಬೇತಿ ಹೊಂದುವದು, ನಿಮ್ಮ ಬೋಧಕರು ಮತ್ತು ಸಭಾಪಾಲಕರ ಅಧೀನದಲ್ಲಿ ಕಾರ್ಯ ಮಾಡುವದು ಮತ್ತು ಇತರರಿಂದ ಕಲಿತುಕೊಳ್ಳುವದು. ನಮ್ಮ ಸುತ್ತಮುತ್ತಲಿನಲ್ಲಿರುವ ಜನರಿಗೆ ಸಹಾಯ ಮಾಡುವ ಸಲುಆಗಿ ದೇವರು ಈ ಎಲ್ಲಾ ಕಾರ್ಯಗಳನ್ನು ನಮ್ಮ ಜೀವಿತದಲ್ಲಿ ಉಪಯೋಗಿಸುವನು.

### ಕಂಠಪಾಠ ವಚನ 6

ಹಿಬ್ರಿಯರಿಗೆ 13:17 "ನಿಮ್ಮ ಸಭಾನಾಯಕರಿಗೆ ವಿಧೇಯರಾಗಿರಿ. ಅವರ ಆಜ್ಞೆಗಳನ್ನು ಪಾಲಿಸಿರಿ. ಅವರು ನಿಮ್ಮ ಆತ್ಮಗಳ ಪಾಲಕರು; ದೇವರಿಗೆ ಲೆಕ್ಕ ಒಪ್ಪಿಸಬೇಕಾದವರು. ಈ ಸೇವೆಯನ್ನು ಅವರು ಸಂತೋಷದಿಂದ ಮಾಡುವಂತೆ ನೀವು ನಡೆದುಕೊಳ್ಳಿ. ಅವರು ಮನನೊಂದುಕೊಂಡು ಮಾಡುವ ಸೇವೆಯಿಂದ ನಿಮಗೆ ಒಳಿತಾಗದು."

## ನಾಟಕ (ಎರಡನೇ ಭಾಗ)

ಅವರು ತಮ್ಮ ಕಾರ್ಯದಿಂದ ಹಿಂದಿರುಗಿ ಬಂದಾಗ ತಂಡದ ಸದಸ್ಯರ ತಲೆಯೆಲ್ಲಾ ಧೂಳು ತುಂಬಿತ್ತು ಮತ್ತು ಬಟ್ಟೆಯೆಲ್ಲಾ ಕೊಳೆಯಾಗಿತ್ತು. ಅವರು ಸಮಯದ ಹಿಂದೆ ಹೋಗುವಾಗ, ಹಾಳಾದ ಮಷಿನ್ ಭಾಗವನ್ನು ಸರಿಪಡಿಸಲು ಪ್ರಯತ್ನಿಸಿದಾಗ, ಕೆಲವು ದಿನಗಳು ಸಿಕ್ಕಿಕೊಂಡಿದ್ದರು. ಮಷಿನ್ ನಲ್ಲಿ ಅವರು ಪ್ರಯೋಗಿಸಿದ ಅಡ್ಡ ಮಾರ್ಗದಿಂದ ಹೆಚ್ಚು ಸಮಯ ನಷ್ಟವಾಯಿತು ಮತ್ತು ಬಹುತೇಕ ಹಿಂದಿರುಗುವದೇ ಅನುಮಾನವಾಗಿತ್ತು. ಬಹಳ ಆಯಾಸದಿಂದ, ಹಿಂದಿರುಗಿ ಬಂದದ್ದಕ್ಕೆ ಖುಷಿಪಟ್ಟರು ಮತ್ತು ಮನೆಗೆ ಹೋಗಿ ವಿಶ್ರಮಿಸಿಕೊಂಡರು.

## ನ್ಯಾಯ 6

ಕೆಲವೊಮ್ಮೆ ಸುಲಭವಾದ ಮಾರ್ಗಗಳನ್ನು ಆರಿಸಿಕೊಳ್ಳಬೇಕೆಂಬ ಶೋಧನೆಯು ಎದುರಾಗುತ್ತದೆ. ಆದರೆ ಎಲ್ಲಾ ಕಾರ್ಯಗಳನ್ನು ಕೈಗೊಳ್ಳುವದು ಮತ್ತು ಇತರರನ್ನು ಈ ವಿಧಾನದಲ್ಲಿ ಸೇರಿಸಿಕೊಳ್ಳುವದು ಉತ್ತಮವಾಗಿದೆ.

## ಆತ್ಮಚರಿತ್ರೆ (ಸಭೆಯ ಸಂಗೀತಗಾರ) 6


ಸಭೆಯ ಸಂಗೀತಗಾರನು ಸಂಗೀತವನ್ನು ಕಲಿತುಕೊಳ್ಳಲು ಪ್ರಯತ್ನಿಸುತ್ತಾನೆ, ವೇದಿಕೆಯ ಮೇಲೆ ಕಾಣಿಸಿಕೊಳ್ಳಲು ಬಯಸುತ್ತಾನೆ ಮತ್ತು ಸಭೆಗೆ ಬರುವ ಜನರಿಗೆ ಒಳ್ಳೆಯ ಆರಾಧಾನೆಯ ಅನುಭವ ಪಡೆಯಲು ಸಹಾಯ ಮಾಡುತ್ತಾನೆ. ಸತ್ಯವೇದದಲ್ಲಿ ನಾವು ನೋಡುವದಾದರೆ ವಿವಿಧ ಸಮಯಗಳಲ್ಲಿ, ಆರಾಧನೆಯ ತಂಡದವರು ಆರಾಧನೆಯನ್ನು ಇಡೀ ದಿನ ಮತ್ತು ಇಡೀ ರಾತ್ರಿ ನಡೆಸಿದ್ದಾರೆ. ಬೇರೊಂದು ಸಮಯದಲ್ಲಿ, ಆರಾಧನೆಯ ತಂಡವೇ ಯುದ್ಧವನ್ನು ನಡೆಸಿದೆ ಮತ್ತು ಆರಾಧನೆಯ ಮೂಲಕವೇ ವೈರಿಯನ್ನು ಸೋಲಿಸಲಾಗಿದೆ! (2 ಪೂರ್ವಕಾಲವೃತ್ತಾಂತ 20:14-25).

*ಜವಾಬ್ದಾರಿಕೆಗಳು:* ಸಭೆಯ ಸಂಗೀತಗಾರನು ಸಭಾಪಾಲಕನ ಅಥವಾ ಆರಾಧನೆ ತಂಡದ ನಾಯಕನ ಮಾತು ಕೇಳುತ್ತಾನೆ. ಉಪಕರಣವನ್ನು ಶುದ್ಧವಾಗಿ ಸರಿಪಡಿಸಿಕೊಂಡು ಸಮಯಕ್ಕೆ ಸರಿಯಾಗಿ ಸಿದ್ಧವಾಗಿರುವದು ಪ್ರಾಮುಖ್ಯವಾಗಿದೆ, ಇದಲ್ಲದೆ ಹಾಡಲು ನಿಮ್ಮ ಸ್ವರವನ್ನು ಕಾಪಾಡಿಕೊಂಡು ಸಿದ್ಧರಾಗಿರುವದು ಅವಶ್ಯವಾಗಿದೆ.

*ಅವಕಾಶಗಳು:* ನಿಮ್ಮ ಸಾಧಾನದಲ್ಲಿ ನಿಮಗಿರುವ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವದು ನೋಟ್ಸ್ ಮತ್ತು ಕಾರ್ಡ್ಸ್ ಬದಲಾಗುವದರ ಬಗ್ಗೆ ಚಿಂತೆ ಮಾಡುತ್ತಾ ಸಮಯ ಕಳೆಯುವದು ತಪ್ಪುತ್ತದೆ, ಹಾಗೆಯೇ ನಿಮ್ಮ ಜೊತೆಯಲ್ಲಿರುವ ಸಂಗೀತಗಾರರು ಹಾಗೂ ಆರಾಧಿಸುವವರ ಬಗ್ಗೆ ಯೋಚನೆ ಮಾಡುವದು ತಪ್ಪುತ್ತದೆ. ಅವರು ಸಂಗೀತಕ್ಕೆ ಸರಿಯಾಗಿ ಪ್ರತಿಕ್ರಿಯಿಸುತ್ತಾ ಇದ್ದಾರೋ ಎಂಬದನ್ನು ನೀವು ಗಮನಿಸುವದು ಮಾತ್ರವಲ್ಲ ಬದಲಾಗಿ ಯಾರಿಗೆ ನಿಜವಾಗಿಯೂ ಪ್ರಾರ್ಥನೆಯ ಅವಶ್ಯಕತೆಯಿದೆ; ಹೃದಯದ ವೇದನೆಯಿದೆ, ತೊಂದರೆಗಳಿಗೆ ಒಳಗಾಗುತ್ತಾ ಇದ್ದಾರೋ, ದೇವರಾತ್ಮನಿಂದ ನಡೆಸಲ್ಪಡುತ್ತಾ ಇದ್ದಾರೋ ಎಂಬದನ್ನೂ ತಿಳಿಯಲು ಸಾಧ್ಯವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ನೀವು ಮಾಡುವ ಪ್ರಾರ್ಥನೆ ದೊಡ್ಡ ವ್ಯತ್ಯಾಸವನ್ನುಂಟು ಮಾಡುತ್ತದೆ.


## ಪ್ರಶ್ನೆಗಳು ಮತ್ತು ಉತ್ತರಗಳು


1. ದೇವರಿಗೆ ಅವಿಧೇಯನಾಗುವದರಿಂದ ನಾನು ಪ್ರಸಿದ್ಧನಾದರೆ ಏನಾಗುತ್ತದೆ? (ಈ ರೀತಿಯ ವಿವಿಧ ಪರಿಸ್ಥಿತಿಗಳ ಬಗ್ಗೆ ಮಾತನಾಡಿರಿ. ಕೆಲವೊಮ್ಮೆ ದೇವರಿಗೆ ವಿಧೇಯರಾಗುವದು ಮತ್ತು ಪ್ರಸಿದ್ಧರಾಗುವದರ ನಡುವೆ ಆಯ್ಕೆ ಮಾಡಿಕೊಳ್ಳುವ ಪರಿಸ್ಥಿತಿಗಳು ನಿಮಗೆ ಎದುರಾಗುತ್ತವೆ ಎಂಬದನ್ನು ನೀವು ಅರಿಯಬೇಕು ಎಂದು ಮಕ್ಕಳಿಗೆ ತಿಳಿಸಿರಿ).



2. ನಿಮಗೆ ತೊಂದರೆಗಳೆದುರಾಗಿ ಯೇಸು ಕ್ರಿಸ್ತನ ಸ್ವರಕ್ಕೆ ನೀವು ವಿಧೇಯರಾಗದೆ ಹೋದರೆ ಆತನಿಗೆ ಯಾವ ಕಾರಣವನ್ನು ಕೊಡುವಿರಿ? ಬಹುಶಃ ನಿಮಗೆ ಬೋಧನೆ ಮಾಡುವ ಸಾಮರ್ಥ್ಯ ಇಲ್ಲದೆ ಇರಬಹುದು, ನೀವು ಸ್ತ್ರೀಯಾಗಿರಬಹುದು, ನಿಮ್ಮ ಕುಟುಂಬದಲ್ಲಿ ನೀವು ಮಾತ್ರವೇ ಕ್ರೈಸ್ತರಾಗಿರಬಹುದು? (ಸತ್ಯವೇದದಲ್ಲಿಯೂ ನಾವು ದೇವರಿಗೆ ವಿಧೇಯರಾಗದೆ ಇದ್ದಾಗ ಜನರು ಹಲವು ಕಾರಣ ಕೊಟ್ಟಿರುವದನ್ನು ನಾವು ನೋಡುತ್ತೇವೆ, ಆದರೆ ನೆನಪಿನಲ್ಲಿಡಿರಿ ನಿಮ್ಮ ಜೀವಿತವು ಪರಿಪೂರ್ಣವಾಗಿದ್ದರೆ ಮಾತ್ರವೇ ನಾನು ನಿಮ್ಮನ್ನು ಉಪಯೋಗಿಸುತ್ತೇನೆ ಎಂದು ಯೇಸು ಕ್ರಿಸ್ತನು ಎಲ್ಲಿಯೂ ಹೇಳಿಲ್ಲ. ಆತನು ವಿಧೇಯತೆಯನ್ನು ಮಾತ್ರವೇ ಬಯಸುವವನಾಗಿದ್ದಾನೆ).
3. ನಾವು ದೇವರನ್ನು ಮೆಚ್ಚಿಸುವದು ಹೇಗೆ? (ಆತನಿಗೆ ನಮ್ಮ ಹೃದಯವನ್ನು ಕೊಡುವದು, ಆತನಿಗೆ ವಿಧೇಯರಾಗುವದು ಮತ್ತು ಆತನೊಂದಿಗೆ ಸಮಯ ಕಳೆಯುವದು ಹಾಗೂ ಜನರನ್ನು ಪ್ರೀತಿಸುವ ಮೂಲಕ ದೇವರನ್ನು ಮೆಚ್ಚಿಸಬಹುದು).
4. ನೀವು ಯಾವುದಾದರು ವಿಷಯದಲ್ಲಿ ನಿಮ್ಮ ಅಧಿಕಾರಿಗಳಿಗೆ ವಿಧೇಯರಾಗಿ ನಡೆದುಕೊಂಡಿದ್ದರೆ ಅದನ್ನು ಹಂಚಿಕೊಳ್ಳಿರಿ (ಅದು ದೇವರಾಗಿರಬಹುದು, ನಿಮ್ಮ ತಂದೆತಾಯಿಗಳು, ಬೋಧಕರಾಗಿರಬಹುದು, ಇತ್ಯಾದಿ).
5. ಯೇಸು ಕ್ರಿಸ್ತನು ದೇವರಿಗೆ ಮೆಚ್ಚಿಕೆಯಾಗುವ ಹಾಗೆ ಜೀವಿಸಿದ ಉತ್ತಮ ಉದಾಹರಣೆ ಎಂದು ನಿಮಗೆ ಅನ್ನಿಸುತದೆಯಾ, ಹಾಗಾದರೆ ಯಾಕೆ ಹೇಳಿರಿ? (ಮಕ್ಕಳ ಅಭಿಪ್ರಾಯಗಳನ್ನು ಕೇಳಿಸಿಕೊಳ್ಳಿರಿ ಮತ್ತು ಕಡೆಯಲ್ಲಿ ದೇವಕುಮಾರನಾಗಿರುವ ಆತನು ಎಲ್ಲದರಲ್ಲಿಯೂ ಸಂಪೂರ್ಣನು ಹಾಗೂ ಪಾಪವಿಲ್ಲದವನು ಎಂಬದನ್ನು ಹೇಳಿರಿ).

## ಒಗಟಿನ ಉತ್ತರಗಳು 6









## ಆಟ 6


ಇಲ್ಲಿ ನಮ್ಮ ನಡುವೆ

ಈ ಆಟಕ್ಕಾಗಿ ನೀವು ಬಲೂನ್ ಗಳನ್ನು, ಸಾಮಾನ್ಯ ಅಳತೆಯ ಬಲೂನ್ ಗಳನ್ನು ಅಥವಾ ಪೇಪರ್ ಚೆಂಡುಗಳನ್ನು ಉಪಯೋಗಿಸಬಹುದು.



ಮಕ್ಕಳನ್ನು ಚದುರಿಸಿರಿ ನಂತರ ಅವರಿಗೆ ನಿಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ಸುತ್ತುತ್ತಾ ಮುಂದೆ ಸಾಗಿರಿ ಎಂದು ಹೇಳಿರಿ. ಅವರು ಮೊದಲು ಯಾವ ವ್ಯಕ್ತಿಯನ್ನು ಮುಟ್ಟುತ್ತಾರೋ, ಅವರನ್ನು ಹಿಡಿದುಕೊಳ್ಳಬೇಕು, ಅವರೇ ಅವರಿಗೆ ಆಟದ ಜೊತೆಗಾರರಾಗಿರುತ್ತಾರೆ. ಸಲಹೆ: ಜೋಡಿಗಳಾಗಿ ಆರಿಸಲ್ಪಟ್ಟವರು ಸಮಾನ ಎತ್ತರದವರಾಗಿರಬೇಕು. ಪ್ರಾರಂಭದ ಮತ್ತು ಮುಕ್ತಾಯದ ಗೆರೆಗಳನ್ನು ಹಾಕಿರಿ ಹಾಗೂ ಪ್ರತಿಯೊಂದು ಜೋಡಿಗಳಿಗೆ ತೇಲುವ ಬಲೂನ್ ಅಥವಾ ಚೆಂಡು ಕೊಡಿರಿ. ಅವರು ತಮ್ಮ ಹೊಟ್ಟೆಯ ಎತ್ತರಕ್ಕೆ ಬಲೂನ್ ಸಿಕ್ಕಿಸಿಕೊಳ್ಳಬೇಕು, ಅದನ್ನು ಬೀಳದಂತೆ ಹಾಗೆಯೇ

ಕಾಪಾಡಿಕೊಳ್ಳಬೇಕು. ನಂತರ ಕೈಯಿಂದ ಮುಟ್ಟದೆ, ಅವರು ಅದನ್ನು ಕೆಳಗೆ ಬೀಳಿಸದೆ ಅಥವಾ ಬಲೂನ್ ಒಡೆದು ಹಾಕದೆ ಮುಕ್ತಾಯದ ಗೆರೆಯನ್ನು ತಲುಪಬೇಕು.




### ಹೋಮ್ ವರ್ಕ್ 6

ಮುಂದೆ ತೆಗೆದುಕೊಳ್ಳಬೇಕಾದ ನಿರ್ಧಾರಕ್ಕೆ ವೃತ್ತವನ್ನು ಹಾಕಿರಿ: ಯೇಸು ಕ್ರಿಸ್ತನಲ್ಲಿ ರಕ್ಷಣೆಯನ್ನು ಬೇಡಿಕೊಳ್ಳುವದು, ದೀಕ್ಷಾಸ್ನಾನಕ್ಕಾಗಿ ಒಪ್ಪಿಸಿಕೊಡುವದು, ತರಬೇತಿ ಹೊಂದುವದು, ನಿಮ್ಮ ಬೋಧಕ ಅಥವಾ ಸಭಾಪಾಲಕನ ಅಡಿಯಲ್ಲಿ ಕಾರ್ಯಮಾಡುವದು, ತಡಮಾಡದೆ ಕೂಡಲೇ ನಿಮ್ಮ ತಂದೆತಾಯಿಗಳಿಗೆ ವಿಧೇಯರಾಗುವದು, ಇತರರಿಂದ ಕಲಿತುಕೊಳ್ಳುವದು. ಮುಂದಿನ ವಾರದಲ್ಲಿ ಈ ಕಾರ್ಯಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಿರಿ.

# ತಂಡವನ್ನು ರಚಿಸುವದು 07

**ಯೇಸು ಕ್ರಿಸ್ತನು 12 ಮಂದಿ ಶಿಷ್ಯರನ್ನು ಕರೆದನು: ಮತ್ತಾಯ 4:18-22, ಯೋಹಾನ 1:35-50**

### ನಾಟಕ (ಮೊದಲನೆಯ ಭಾಗ)



ಏಜೆಂಟ್ ಸೇರಿಕೊಂಡಾಗ ಕ್ರೈಸ್ತನಾಗಿರಲಿಲ್ಲ. ಯೇಸು ಕ್ರಿಸ್ತನ ಜೀವನವನ್ನು ಗಮನಿಸಿದ್ದು ಮತ್ತು ನ್ಯಾಯದ ತಂಡದವರೊಂದಿಗೆ ಸಮಯ ಕಳೆದದ್ದು ಅವನ ಮೇಲೆ ಪ್ರಭಾವ ಬೀರಿ ಅವನು ಕ್ರೈಸ್ತನಾಗಲು ಬಯಸಿದನು. ಅವನು ಟೋಪಿ ಹಾಕಿಕೊಳ್ಳಲು ನಿರ್ಧರಿಸಿದನು (ಪೇಪರ್ ನಿಂದ ಮಾಡಲಾಗಿದ್ದ ಆ ಟೋಪಿ ಅಷ್ಟೇನೂ ಚೆನ್ನಾಗಿರಲಿಲ್ಲ), ಅದರ ಮೂಲಕ ತಾನು ಯೇಸು ಕ್ರಿಸ್ತನನ್ನು ಹಿಂಬಾಲಿಸುತ್ತಾ ಇದ್ದೇನೆ ಎಂದು ತೋರಿಸಲು ಅವನು ಬಯಸಿದನು. ಇದಲ್ಲದೆ ತನ್ನ ತಂಡದಲ್ಲಿರುವವರಲ್ಲಿರುವವರು ಕೆಮ್ಮುವಾಗ ಅಥವಾ ನಡೆಯುವಾಗ ಅವರಲ್ಲಿರುವ "ಪಾಪಗಳು" ಕಂಡುಹಿಡಿಯಲು ಪ್ರಯತ್ನಿಸಿದನು. ಆಗ ನಾಯಕನು ಅವನನ್ನು ಪಕ್ಕಕ್ಕೆ ಕರೆದು ಮಾತನಾಡಿಸಿದಾಗ ಏಜೆಂಟ್ ಯೇಸು ಕ್ರಿಸ್ತನನ್ನು ಹಿಂಬಾಲಿಸುವ ಬಯಕೆಯುಳ್ಳವನಾಗಿದ್ದಾನೆ ಆದರೆ ಹೇಗೆ ಎಂಬದು ಅವನಿಗೆ ಗೊತ್ತಿಲ್ಲ ಎಂಬದನ್ನು ತಿಳಿದುಕೊಂಡನು. ಅವರು ಸಿದ್ಧರಾದರು ಮತ್ತು ತಮ್ಮ ಕಾರ್ಯಕ್ಕೆ ಹೊರಟರು.

### ಪಾಠ 7

ಒಂದು ಸಣ್ಣ ಜನರ ಗುಂಪು ತನ್ನೊಂದಿಗಿರಬೇಕೆಂದು ಯೇಸು ಕ್ರಿಸ್ತನು ಬಯಸಿದನು, ಅವರಿಗೆ ಬೋಧಿಸಬೇಕು ಮತ್ತು ನಂತರದಲ್ಲಿ ಆತನು ಭೂಲೋಕದಲ್ಲಿದ್ದಾಗ ಅವರಿಗೆ ಏನು ಕಲಿಸಿದನು ಎಂಬದನ್ನು ಅವರು ಇತರರಿಗೆ ಹೇಳಬೇಕೆಂಬದು ಆತನ ಬಯಕೆಯಾಗಿತ್ತು. ಯೇಸು ಕ್ರಿಸ್ತನು ಹಾಗೇ ಕೆಲವರಿಗೆ ನನ್ನನ್ನು ಹಿಂಬಾಲಿಸಿರಿ ಅಂದನು, ಅವರು ಆತನನ್ನು ಹಿಂಬಾಲಿಸಿದರು.

ಮತ್ತಾಯ 4:18-22 ಮತ್ತು ಯೋಹಾನ 1:35-40 ಓದಿರಿ

ಸುಂಕದವನಾಗಿದ್ದ ಮತ್ತಾಯನು ಯೇಸು ಕ್ರಿಸ್ತನು ಕರೆದ ಕೂಡಲೇ ಆತನ ಹಿಂದೆ ಹೋಗುವ ಮೂಲಕ ಆತನ ಕರೆಗೆ ಪ್ರತಿಕ್ರಿಯಿಸಿದನು. ಯೇಸು ಕ್ರಿಸ್ತನು 12 ಮಂದಿಯನ್ನು ಕರೆದನು ಅವರು ಪ್ರತಿಕ್ರಿಯಿಸಿ ಆತನ ಹಿಂದೆ ಹೋದರು. ಅವರು ಪ್ರಸಿದ್ಧರು, ಐಶ್ವರ್ಯವಂತರು, ಪ್ರಭಾವಶಾಲಿಗಳು ಅಥವಾ ವಿದ್ಯಾವಂತರಾಗಿರಲಿಲ್ಲ. ಅವರು ನಿರ್ದಿಷ್ಟವಾಗಿ ಪ್ರಾಮಾಣಿಕರು ಅಥವಾ ಧೈರ್ಯಶಾಲಿಗಳು ಆಗಿರಲಿಲ್ಲ. ಅವರಲ್ಲಿ ಬಹುತೇಕರು ಸಾಧಾರಣ ಮೀನುಗಾರರಾಗಿದ್ದರು.

ಅವರಲ್ಲಿ ಯಾರೊಬ್ಬರೂ ಧಾರ್ಮಿಕ ನಾಯಕರಾಗಿರಲಿಲ್ಲ. ಆದರೆ ನನ್ನನ್ನು ಹಿಂಬಾಲಿಸಿರಿ ಎಂದು ಯೇಸು ಕ್ರಿಸ್ತನು ಹೇಳಿದ ಕೂಡಲೇ ಆತನನ್ನು ಹಿಂಬಾಲಿಸಿದರು.

ನೀವು ಪಾಪವಿಲ್ಲದವರಾಗಿರಬೇಕು ಅಥವಾ ಪರೀಕ್ಷೆಗಳನ್ನು ಗೆಲ್ಲಬೇಕು ಅಥವಾ ಪ್ರಮಾಣಗಳನ್ನು ಮಾಡಬೇಕು ಎಂದು ಯೇಸು ಕ್ರಿಸ್ತನು ಅವರಿಗೆ ಹೇಳಲಿಲ್ಲ. ಯೇಸು ಕ್ರಿಸ್ತನು ಅವರಿಗೆ ನನ್ನನ್ನು ಹಿಂಬಾಲಿಸಿರಿ ಎಂದು ಹೇಳಿದನು ಮತ್ತು ಆತನನ್ನು ತಿಳಿದುಕೊಂಡು ಆತನು ಮಾಡುವವುಗಳನ್ನು ನೋಡಬೇಕಾಗಿತ್ತಷ್ಟೆ.

ಯೂದನನ್ನು ಬಿಟ್ಟು ಉಳಿದವರೆಲ್ಲರೂ ಕಡೆಯ ತನಕ ಆತನನ್ನು ಅನುಸರಿಸಿ ಜೀವಿಸಿದರು. ಯೇಸು ಕ್ರಿಸ್ತನ ಮರಣ ಮತ್ತು

ಪುನರುತ್ಥಾನದ ನಂತರ ಅವರು ಆತನ ಜೀವನದ ಬಗ್ಗೆ ಇತರರಿಗೆ ತಿಳಿಸಿದರು. ಯೇಸು ಕ್ರಿಸ್ತನು ದೇವಕುಮಾರನೆಂದು ಅವರಿಗೆ ಮನವರಿಕೆಯಾಯಿತು ಆದ್ದರಿಂದ ಅವರು ಆತನಿಗಾಗಿ ತಮ್ಮ ಪ್ರಾಣವನ್ನು ಕೊಡಲು ಸಿದ್ಧರಾದರು, ಹಾಗೆಯೇ ಬಹುತೇಕ ಅವರೆಲ್ಲರೂ ಆತನಿಗಾಗಿ ಪ್ರಾಣ ಕೊಟ್ಟರು.

ಈ ಕಾರ್ಯಕ್ಕಾಗಿಯೇ ಯೇಸು ಕ್ರಿಸ್ತನು ಜನರನ್ನು ಕರೆಯುತ್ತಾನೆ: ಅವರು ಸುಮ್ಮನೇ ಆತನನ್ನು ಹಿಂಬಾಲಿಸಬೇಕು ಮತ್ತು ಆತನು ಮಾಡುವವುಗಳನ್ನು ನೋಡಬೇಕು. ಇದು ಯೇಸು ಕ್ರಿಸ್ತನನ್ನು ತಿಳಿದುಕೊಳ್ಳಲು ಮತ್ತು ಆತನೊಂದಿಗೆ ಸಮಯ ಕಳೆಯಲು ದೊರೆಯುವ ಕರೆಯಾಗಿದೆ.

ಯೇಸು ಕ್ರಿಸ್ತನನ್ನು ಹಿಂಬಾಲಿಸುವ ಗುಂಪಿನಲ್ಲಿ ನೀವೂ ಇದ್ದೀರೋ? ಆ ಗುಂಪಿನಲ್ಲಿ ನೀವು ಇರಬೇಕೆಂಬದು ಯೇಸು ಕ್ರಿಸ್ತನ ಬಯಕೆಯಾಗಿದೆ. ಇದು ಅದ್ಭುತ ಸುದ್ದಿಯಾಗಿದೆ ಅಲ್ಲವೇ!!!

## ಕಂಠಪಾಠ ವಚನ 7

ಯೊವಾನ್ನ 8:12 "ಬಳಿಕ ಯೇಸು ಸ್ವಾಮಿ ಜನರನ್ನು ಮತ್ತೊಮ್ಮೆ ಕಂಡು ಹೀಗೆಂದರು: "ನಾನೇ ಜಗಜ್ಯೋತಿ, ನನ್ನನ್ನು ಹಿಂಬಾಲಿಸುವವನು ಕತ್ತಲಲ್ಲಿ ನಡೆಯುವುದಿಲ್ಲ. ಜೀವದಾಯಕ ಜ್ಯೋತಿ ಅವನಲ್ಲಿರುತ್ತದೆ.""

## ನಾಟಕ (ಎರಡನೇ ಭಾಗ)

ಅವರು ತಮ್ಮ ಕಾರ್ಯದಿಂದ ಹಿಂದಿರುಗಿ ಬರುವಾಗ ಶಿಷ್ಯರು ಸಾಧಾರಣ ಜನರಾಗಿರುವದು ಮತ್ತು ತಮ್ಮ ಹಳೆಯ ಜೀವಿತವನ್ನು ಬಿಟ್ಟುಬಿಡಬೇಕು ಎಂಬದನ್ನು ಹೊರತುಪಡಿಸಿ ಯೇಸು ಕ್ರಿಸ್ತನು ಬದಲಾಯಿಸಿಕೊಳ್ಳುವಂತೆ ಅವರಿಗೆ ಏನೂ ಹೇಳದೆ ಇದ್ದದ್ದರ ಬಗ್ಗೆ ಚರ್ಚಿಸುತ್ತಾ ಇದ್ದರು. ತಂಡದವರು ಏಜೆಂಟ್ ಗಾಗಿ ಪ್ರಾರ್ಥನೆ ಮಾಡಿ ನಿನ್ನ ಜೀವಿತವನ್ನು ಯೇಸು ಕ್ರಿಸ್ತನಿಗೆ ಒಪ್ಪಿಸು ಎಂದು ಹೇಳಿದರು. ನಂತರ ಯೇಸು ಕ್ರಿಸ್ತನು ನಿನ್ನ ಹೃದಯದಲ್ಲಿ ಕಾರ್ಯಮಾಡುವನು, ಕಾಲಕ್ರಮೇಣ ನಿನ್ನ ಆಂತರ್ಯವನ್ನು ಬದಲಾಯಿಸುವನು ಎಂದು ಅವನನ್ನು ಪ್ರೋತ್ಸಾಹಪಡಿಸಿದರು.

## ನ್ಯಾಯ 7


ಗುಂಪಾಗಿ ಜೀವನವು ಉತ್ತಮವಾಗಿರುತ್ತದೆ. ಒಂದುವೇಳೆ ಯಾರಾದರು ಚೆನ್ನಾಗಿಲ್ಲವೆಂದರೆ ಅಥವಾ ಉತ್ತಮರಾಗಿಲ್ಲವೆಂದರೆ ಚಿಂತಿಸಬೇಡಿರಿ. ನಾವು ಉತ್ತಮರಲ್ಲವಾದರೂ ಯೇಸು ಕ್ರಿಸ್ತನು ನಮ್ಮನ್ನು ತನ್ನ ಗುಂಪಿನೊಳಗೆ ಸೇರಿಸಿಕೊಂಡಿದ್ದಾನೆ. ಇತರರ ವಿಷಯದಲ್ಲಿಯೂ ನಾವು ಹೀಗೆಯೇ ನಡೆದುಕೊಳ್ಳಬೇಕು.

## ಆತ್ಮಚರಿತ್ರೆ (ಸಭಾಪಾಲಕ) 7

ಸಭಾಪಾಲಕನ ಪ್ರಾಥಮಿಕ ಜವಾಬ್ದಾರಿಕೆ ತನ್ನ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳುವದಾಗಿದೆ (1 ತಿಮೊಥೆ 3:1-7). ಸಭೆಯ ವಿಷಯಕ್ಕೆ ಬರುವದಾದರೆ ಉತ್ತಮವಾದ ಸಭಾಪಾಲಕನಾಗಲು, ಸಂದೇಶಗಳನ್ನು ಸಿದ್ಧಮಾಡಲು ಮತ್ತು ತನ್ನ ಸಭೆಯ ಸಭಿಕರನ್ನು ಆತ್ಮೀಕ ಪರಿಪಕ್ವತೆಗೆ ನಡೆಸಲು ಸತ್ಯವೇದ ಅಧ್ಯಯನವನ್ನು ಮಾಡಬೇಕು ಮತ್ತು ಇತರೆ ಪುಸ್ತಕಗಳನ್ನು ಓದಿ ತರಬೇತಿಯನ್ನು ಪಡೆಯಬೇಕು.

*ಜವಾಬ್ದಾರಿಕೆಗಳು:* ತನ್ನ ಕುಟುಂಬವನ್ನು ನೋಡಿಕೊಳ್ಳಬೇಕು, ಸ್ಥಳೀಯ ರಾಜಕೀಯಗಳಿಗೆ ಒಳಗಾಗದಂತೆ ಎಚ್ಚರಿಕೆಯಿಂದಿರಬೇಕು, ಇತ್ಯಾದಿ, ತನ್ನ ಸಭಿಕರ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು. (2 ತಿಮೊಥೆ 2:4) ಮತ್ತು ಸಭೆಯ ಆತ್ಮೀಕ ಬೆಳವಣಿಗೆಯ ಅರಿವು ಇರಬೇಕು. ದೇವರು ಅವನನ್ನು/ಅವಳನ್ನು ಸಭೆಗೆ ನೇಮಿಸಿದ್ದಾನೆ (ಎಫೆಸ 4:11-12) ಮತ್ತು ಆ ಜವಾಬ್ದಾರಿಕೆಯನ್ನು ಆತನು ಅಂಗೀಕರಿಸಿಕೊಳ್ಳಬೇಕು.


*ಅವಕಾಶಗಳು:* ಸಭೆಯ ವಿವಿಧ ಕಾರ್ಯಗಳಿಗೆ ಜನರನ್ನು ತರಬೇತುಗೊಳಿಸುವ ಅವಕಾಶ ಸಭಾಪಾಲಕನಿಗೆ ದೊರೆಯುತ್ತದೆ. ಸಭಾ ಚಟುವಟಿಕೆಗಳ ವಿವಿಧ ಕಾರ್ಯಗಳಲ್ಲಿ ಅವರು ಭಾಗಿಯಾಗಬಹುದು. ಯಾವುದೇ ಗಿಡವಾದರೂ ಸರಿಯಾದ ವಾತಾವರಣದಲ್ಲಿ ಉತ್ತಮವಾಗಿ ಬೆಳೆಯುವ ಹಾಗೆಯೇ, ಸಭೆಯೂ ಬೆಳೆಯುತ್ತದೆ. ಹಾಗೆಯೇ ವಿವಿಧ ರೀತಿಯ ಸಭಾ ಸೇವೆಗಾಗಿ ದೇವರು ಕರೆದಿರುವವರ ಕಡೆಗೂ ಆತನು ಗಮನವನ್ನು ಹರಿಸಬಹುದಾಗಿದೆ. ಎಫೆಸ 4:11-12 ಅಪೊಸ್ತಲರು, ಪ್ರವಾದಿಗಳು, ಸೌವಾರ್ತಿಕರು, ಸಭಾಪಾಲಕರು ಮತ್ತು ಉಪದೇಶಕರ ಬಗ್ಗೆ ಮಾತನಾಡುತ್ತದೆ. ಸಭಾಪಾಲಕನು ಉತ್ತಮವಾದ ಸೌವಾರ್ತಿಕನಾಗಿರುವದಿಲ್ಲ, ಆದ್ದರಿಂದ ದೇವರು ಕಳುಹಿಸಿರುವ ಆ ಸಾಮರ್ಥ್ಯವುಳ್ಳ ವ್ಯಕ್ತಿ ಯಾರು ಎಂದು ಗುರುತಿಸುವದು ಸಭೆಯ ಬೆಳವಣಿಗೆಗೆ ಬಹಳ ಪ್ರಾಮುಖ್ಯವಾಗಿದೆ. ಸಭಾಪಾಲಕನು ಉತ್ತಮವಾದ ಅಪೊಸ್ತಲನಾಗಿರುವದಿಲ್ಲ, ಆದ್ದರಿಂದ ಆ ಸಾಮರ್ಥ್ಯವಿರುವವನನ್ನು ಗುರುತಿಸುವದು ಮತ್ತು ಹೊಸ ಸಭೆಯನ್ನು ಸ್ಥಾಪಿಸಲು ಆತನನ್ನು ಪ್ರತಿಷ್ಠಿಸುವದು ಬೆಳವಣಿಗೆಗೆ ಸಹಕರಿಸುವ ಮತ್ತೊಂದು ಪ್ರಮುಖ ಸಂಗತಿಯಾಗಿದೆ. ಇದಲ್ಲದೆ ತಮ್ಮಲ್ಲಿ ಸಾಮರ್ಥ್ಯವಿಲ್ಲದಿದ್ದರೂ ಒಳನುಸುಳಲು ಪ್ರಯತ್ನಿಸುವ "ದುಷ್ಟರನ್ನು" ಸಹ ಸಭಾಪಾಲಕನು ಗುರುತಿಸಬಹುದು. ಒಳ್ಳೆಯ ಕುರುಬನು ತನ್ನ ಕುರಿಗಳನ್ನು ಕಾಪಾಡುತ್ತಾನೆ.





## ಪ್ರಶ್ನೆಗಳು ಮತ್ತು ಉತ್ತರಗಳು 7

1. ದೇವರು ಬಲಶಾಲಿಗಳನ್ನು ಉಪಯೋಗಿಸಿಕೊಳ್ಳುತ್ತಾನೋ ಅಥವಾ ಬಲಹೀನರನ್ನು ಉಪಯೋಗಿಸಿಕೊಳ್ಳುತ್ತಾನೋ? (ಹುದುವಾಗಿ, ತನ್ನ ಬಲವನ್ನು ತೋರ್ಪಡಿಸಲು ದೇವರು ಬಲಹೀನರನ್ನು ಉಪಯೋಗಿಸಿಕೊಳ್ಳಲು ಬಯಸುತ್ತಾನೆ. ನಮ್ಮಲ್ಲಿ ಅಧಿಕವಾದ ಆತ್ಮೀಕ ವ್ಯರ್ಥತೆ ಇದ್ದರೆ, ದೇವರು ನಮ್ಮನ್ನು ಉಪಯೋಗಿಸಿಕೊಳ್ಳುವ ಸಾಧ್ಯತೆ ಕಡಿಮೆಯಾಗಿರುತ್ತದೆ).
2. ನಿಮಗಿರುವ ಯಾವ ತಲಾಂತುಗಳನ್ನು ನೀವು ದೇವರ ಸೇವೆಗಾಗಿ ಉಪಯೋಗಿಸುವಿರಿ? (ವಿವಿಧ ತಲಾಂತುಗಳು ಮತ್ತು ಸಾಮರ್ಥ್ಯಗಳ ಬಗ್ಗೆ ಚರ್ಚಿಸಲು ಹಾಗೂ ಹಂಚಿಕೊಳ್ಳಲು ಮಕ್ಕಳಿಗೆ ಸ್ವಲ್ಪ ಸಮಯ ಕೊಡಿರಿ. ಮಕ್ಕಳು ಹಂಚಿಕೊಳ್ಳುವಾಗ ಇತರರು ತಮಾಷೆ ಮಾಡದಂತೆ ನೋಡಿಕೊಳ್ಳಿರಿ. ಹಂಚಿಕೊಳ್ಳುವಂತೆ ಪ್ರತಿಯೊಬ್ಬರನ್ನು ಪ್ರೋತ್ಸಾಹಪಡಿಸಿರಿ).
3. ಒಂಟಿಯಾಗಿ ಕಾರ್ಯಮಾಡುವದಕ್ಕಿಂತ ತಂಡವಾಗಿ ಕಾರ್ಯಮಾಡುವದು ಉತ್ತಮ ಅಲ್ಲವೇ? (ಮಕ್ಕಳು ತಮ್ಮ ಅಭಿಪ್ರಾಯವನ್ನು ತಿಳಿಸಿದ ನಂತರ, ಅವರು ಒಂಟಿಯಾಗಿದ್ದಾರೆ ಎಂದು ಕೆಲವರು ಹೇಳಬಹುದು ಆದರೆ ತಂಡವಾಗಿ ಕಾರ್ಯಮಾಡುವಾಗ ಉತ್ತಮ ಫಲಿತಾಂಶಗಳು ದೊರೆಯುತ್ತವೆ, ವಿವಿಧ ರೀತಿಯ ಆಲೋಚನೆಗಳು ಬರುತ್ತವೆ, ಒಬ್ಬರನ್ನೊಬ್ಬರು ಪ್ರೋತ್ಸಾಹಪಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ನೀವು ಮಕ್ಕಳಿಗೆ ತಿಳಿಸಬಹುದು).
4. ಯೇಸು ಕ್ರಿಸ್ತನ ಶಿಷ್ಯರು ಆಗಾಗ ತಮಾಷೆಗಳನ್ನು ಮಾಡುತ್ತಾ ಇದ್ದರು ಎಂದು ನಿಮಗೆ ಅನ್ನಿಸುತದೆಯೋ ಅಥವಾ ಅವರ ನಡುವೆ ಯಾವಾಗಲೂ ಗಂಭೀರತೆ ಇರುತ್ತಾ ಇತ್ತೋ? (ಯೇಸು ಕ್ರಿಸ್ತನು ಅವರ ಸ್ನೇಹಿತನಾಗಿದ್ದನು ಮತ್ತು ನಮ್ಮ ಸ್ನೇಹಿತರ ನಡುವೆ ಇರುವ ಹಾಗೆ, ಅವರ ನಡುವೆ ಭರವಸೆ ಇತ್ತು. ಬಹುಶಃ ಅವರೂ ತಮಾಷೆ ಮಾಡಿಕೊಂಡಿರಬಹುದು ಅಥವಾ ತಮಗಾದ ತಮಾಷೆಯ ಅನುಭವವನ್ನು ಹಂಚಿಕೊಂಡಿರಬಹುದು).
5. 12 ಮಂದಿ ಶಿಷ್ಯರ ಹೆಸರುಗಳು ಏನು? (ಸೀಮೋನ್ ಪೇತ್ರ, ಆಂದ್ರೇಯ, ಯಾಕೋಬ, ಯೋಹಾನ, ಫಿಲಿಪ್ಪ, ಬಾರ್ತಲೊಮಾಯ, ತೋಮ, ಮತ್ತಾಯ, ಅಲ್ಫಾಯನ ಮಗ ಯಾಕೋಕ, ತದ್ದಾಯ, ಮತಾಭಿಮಾನಿಯಾದ ಸೀಮೋನ ಮತ್ತು ಇಸ್ಕರಿಯೋತ ಯೂದ).

## ಒಗಟಿನ ಉತ್ತರಗಳು 7










## ಆಟ 7

ಪಿಂಗ್ ಪಾಂಗ್

ಒಂದು ಮಗು ವಾಕ್ಯದ ಮೊದಲನೆಯ ಪದವನ್ನು ಹೇಳಬೇಕು, ಇನ್ನೊಂದು ಮಗು ಎರಡನೆಯ ಪದವನ್ನು ಹೇಳಬೇಕು, ಹಾಗೆಯೇ ಒಬ್ಬರ ನಂತರ ಒಬ್ಬರು ಹೇಳಬೇಕು. ಮಕ್ಕಳು ಇಬ್ಬಿಬ್ಬರಾಗಿ ಅಥವಾ ತಂಡವಾಗಿ ಈ ಆಟವನ್ನು ಆಡಬಹುದು.






## ಹೋಮ್ ವರ್ಕ್ 7

ಯೇಸು ಕ್ರಿಸ್ತನು ಯಾರು, ಆತನು ಏನು ಹೇಳಿದನು ಮತ್ತು ಮಾಡಿದನು ಎಂಬದನ್ನು ಕಲಿತುಕೊಳ್ಳುತ್ತಿರುವ ಕ್ರೈಸ್ತ ಸ್ನೇಹಿತರ ಗುಂಪಿಗೆ ಯಾರನ್ನಾದರೂ ಆಹ್ವಾನಿಸಿರಿ. ಹೀಗೆ ಅವರನ್ನು ಸಭೆಗೂ ಕರೆಯಬಹುದು.

# ಯೇಸು ಕ್ರಿಸ್ತನು ಒದಗಿಸುತ್ತಾನೆ

08

## ನೀರು ದ್ರಾಕ್ಷಾರಸವಾಯಿತು: ಯೋಹಾನ 2:1-11



### ನಾಟಕ (ಮೊದಲನೆಯ ಭಾಗ)

ಕಳೆದ ವಾರ ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡದ್ದರಿಂದ ಏಜೆಂಟ್ ಇನ್ನೂ ಸಂತೋಷವಾಗಿದ್ದನು. ಭಾನುವಾರದಂದು ಮೊದಲನೆ ಬಾರಿಗೆ ಆತನು ಆಲಯಕ್ಕೆ ಹೋದನು ಮತ್ತು ಪ್ರತಿಯೊಬ್ಬರು ಮುಂದಿನ ವಾರವೂ ಬರುವಂತೆ ಅವನಿಗೆ ಹೇಳಿದರು. ಇಲ್ಲಿ ನ್ಯಾಯ ತಂಡದ ಮುಖ್ಯ ಕಛೇರಿಯಲ್ಲಿ, ಸಭೆಯಲ್ಲಿ ತಾನು ಕಲಿತುಕೊಂಡ ವಿಷಯಗಳನ್ನು ಅವನು ತಿಳಿಸುತ್ತಾ ಇದ್ದನು: ಅವು ಯಾವುವೆಂದರೆ, ತಪ್ಪದೆ ಸಭೆಗೆ ಹೋಗುವದು, ಅವರು ಕೊಟ್ಟಿರುವ ಸತ್ಯವೇದವನ್ನು ಓದುವದು ಮತ್ತು ದೇವರಿಗೆ ಪ್ರಾರ್ಥನೆ ಮಾಡುವದು. ಈ ಎಲ್ಲಾ ಕಾರ್ಯಗಳ ಬಗ್ಗೆ ಅವನು ಸಂತೋಷವುಳ್ಳವನಾದರೂ, ದೇವರಿಗೆ ಇಷ್ಟು ಮಾತ್ರವೇ ಸಾಕೇ ಎಂದು ಕೇಳಿದನು. ಯೇಸು ಕ್ರಿಸ್ತನು ಏನನ್ನು ಕಲಿಸಿದನು ಮತ್ತು ಮಾಡಿದನು ಎಂಬದನ್ನು ತಿಳಿಯಲು ಅವರು ಸಮಯದ ಹಿಂದೆ ಹೋಗಲು ತೀರ್ಮಾನಿಸಿದರು.

### ಪಾಠ 8

ಯೇಸು ಕ್ರಿಸ್ತನು, ಮರಿಯಳು ಮತ್ತು ಶಿಷ್ಯರು ಒಂದು ಮದುವೆಗೆ ಹೋಗಿದ್ದರು, ಆದರೆ ಮದುವೆ ಮನೆಯಲ್ಲಿ ಒಂದು ಸಮಸ್ಯೆ ಕಾಣಿಸಿಕೊಂಡಿತು. ಯೇಸು ಕ್ರಿಸ್ತನ ತಾಯಿಯಾದ ಮರಿಯಳಿಗೆ ಸಮಸ್ಯೆಯು ಗೊತ್ತಾಯಿತು ಮತ್ತು ಸಹಾಯಕ್ಕಾಗಿ ಯಾರ ಬಳಿಗೆ ಹೋಗಬೇಕು ಎಂಬದು ಆಕೆಗೆ ಚೆನ್ನಾಗಿ ತಿಳಿದಿತ್ತು. ಆಕೆ ಯೇಸು ಕ್ರಿಸ್ತನನ್ನು ಬೇಡಿಕೊಂಡಳು.

ಯೋಹಾನ 2:1-11 ಓದಿರಿ

ಯೇಸು ಕ್ರಿಸ್ತನು ಸಮಸ್ಯೆಯನ್ನು ಬಗೆಹರಿಸುವನು ಎಂಬದನ್ನು ಮರಿಯಳು ಅರ್ಥಮಾಡಿಕೊಂಡಳು ಮತ್ತು ಆತನು ಖಂಡಿತವಾಗಿಯೂ ಪರಿಹಾರ ಮಾಡುವನು ಎಂಬದಾಗಿ ನಂಬಿದಳು.

ಎಷ್ಟೊಂದು ಅದ್ಭುತವೆಂದರೆ ಕೆಲಸಗಾರರು ಯೇಸು ಕ್ರಿಸ್ತನ ಮಾತುಗಳಿಗೆ ವಿಧೇಯರಾದರು ಮತ್ತು ಬಾನೆಗಳನ್ನು ಸುಮ್ಮನೆಯಲ್ಲ ಬದಲಾಗಿ ಕಂಠದ ಮಟ್ಟಿಗೆ ತುಂಬಿಸಿದರು! ಅವರು ಸೋಮಾರಿಗಳಾಗಿ ಬಾನಿಗಳಿಗೆ ಸ್ವಲ್ಪ ಅಥವಾ ಅರ್ಧ ಮಾತ್ರ ನೀರನ್ನು ತುಂಬಿಸಿರಬಹುದಾಗಿತ್ತು ಆದರೆ ಅವರು ಯೇಸು ಕ್ರಿಸ್ತನ ಸೂಚನೆಗಳಂತೆಯೇ ಮಾಡಿದರು. ಅಲ್ಲದೆ ಅವರು ಧೈರ್ಯದಿಂದ ಅದನ್ನು ಮುಖ್ಯಪಾನದಾಯಕನಿಗೆ ಕೊಟ್ಟರು!

ನಾವು ಸಹ ಯೇಸು ಕ್ರಿಸ್ತನನ್ನು ಹೀಗೆಯೇ ಹಿಂಬಾಲಿಸಬೇಕು. ನಮ್ಮ ಹಾಗೂ ನಮ್ಮ ಸುತ್ತಮುತ್ತಲಿನಲ್ಲಿರುವ ಜನರ ಜೀವಿತಗಳಲ್ಲಿಯೂ ಆತನು ಕಾರ್ಯಮಾಡುವನೆಂದು ನಾವು ನಿರೀಕ್ಷಿಸಬೇಕು. ಸೋಮಾರಿಗಳಾಗಿರದೆ ಅಥವಾ ಹಿಂಜರಿಯದೆ ನಾವು ಸಹ ಸಾಧ್ಯವಾದಷ್ಟು ಪೂರ್ತಿಯಾಗಿ ವಿಧೇಯರಾಗಬೇಕು. ಇದಲ್ಲದೆ ಯೇಸು ಕ್ರಿಸ್ತನು ಅತ್ಯುತ್ತಮವಾದದ್ದನ್ನು ಒದಗಿಸುವನು ಎಂಬ ಭರವಸೆ ನಮಗಿರಬೇಕು.

ನಿಮಗೆ ನಿಜವಾದ ಅವಶ್ಯಕತೆಯಿದ್ದು, ನಿಮಗೆ ಯಾರೂ ಸಹಾಯ ಮಾಡದ ಪರಿಸ್ಥಿತಿಯನ್ನು ಎದುರಿಸಿದ್ದೀರೋ? ಅಥವಾ ಯಾರೋ ಹೆಸರಿಗೆ ಮಾತ್ರ ಅಲ್ಪಸ್ವಲ್ಪ ಸಹಾಯ ಮಾಡಿದ ಅನುಭವ ನಿಮಗಾಗಿದೆಯೇ? ಅಥವಾ ನಿಮಗೆ ಕೊರತೆ ಎದುರಾದಾಗ ನೀವು ಊಹಿಸಿದ್ದಕ್ಕಿಂತ ಹೆಚ್ಚಿನ ಸಹಾಯ ಹೊಂದಿದ ಅನುಭವ ನಿಮಗಾಗಿದೆಯೇ? ಯಾರಾದರೂ ಉದಾರವಾಗಿ ಸಹಾಯ ಮಾಡಿದರೆ ನಮಗೆ ಬಹಳ ಖುಷಿಯಾಗುತ್ತದೆ! ಯೇಸು ಕ್ರಿಸ್ತನು ಧಾರಾಳವಾಗಿಯೇ ಸಹಾಯ

ಮಾಡುತ್ತಾನೆ!! ಲೂಕ 6:38 ರಲ್ಲಿ ಯೇಸು ಕ್ರಿಸ್ತನು ಹೇಳಿರುವದೇನೆಂದರೆ, "ಕೊಡಿರಿ, ಆಗ ನಿಮಗೂ ಕೊಡುವರು; ಜಡಿದು ಅಲ್ಲಾಡಿಸಿ ಹೊರಚೆಲ್ಲುವ ಹಾಗೆ ತುಂಬಾ ಅಳತೆಯನ್ನು ಅಳೆದು ನಿಮ್ಮ ಸೆರಗಿಗೆ ಹಾಕುವರು. ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು." ನಾವು ಈ ಪ್ರಕಾರ ಜೀವಿಸಬೇಕು.

### ಕಂಠಪಾಠ ವಚನ 8

ಲೂಕ 6:38 "ಪರರನ್ನು ಕ್ಷಮಿಸಿರಿ, ದೇವರು ನಿಮ್ಮನ್ನೂ ಕ್ಷಮಿಸುವರು; ಪರರಿಗೆ ಕೊಡಿ, ದೇವರು ನಿಮಗೂ ಕೊಡುವರು; ಅಳತೆಯಲ್ಲಿ ತುಂಬಿ, ಕುಲುಕಿ, ಅದುಮಿ ತುಳುಕುವಂತೆ ಅಳೆದು ನಿಮ್ಮ ಮಡಿಲಿಗೆ ಹಾಕುವರು. ನೀವು ಕೊಟ್ಟ ಅಳತೆಯಲ್ಲೇ ದೇವರು ನಿಮಗೂ ಅಳೆದುಕೊಡುವರು," ಎಂದರು."

### ನಾಟಕ (ಎರಡನೇ ಭಾಗ)

ತಮ್ಮ ಕಾರ್ಯದಿಂದ ಹಿಂದಿರುಗಿ ಬರುವಾಗ, ಬಾನೆಗಳು ಒಂದು ಕ್ಷಣ ಶುದ್ಧ ನೀರಿನಿಂದ ತುಂಬಿದ್ದು ಮತ್ತೊಂದು ಕ್ಷಣದಲ್ಲೇ ದ್ರಾಕ್ಷಾರಸವಾದದ್ದರ ಬಗ್ಗೆ ಸಂತೋಷದಿಂದ ಚರ್ಚೆ ಮಾಡುತ್ತಾ ಇದ್ದರು. ಏಜೆಂಟ್ ಮತ್ತು ತಂಡದವರು ಕಂಠದ ಮಟ್ಟಿಗೆ ನೀರು ತುಂಬಿಸಿದ ಕೆಲಸಗಾರರ ಬಗ್ಗೆ ಮಾತನಾಡುತ್ತಾ ಇದ್ದರು ಮತ್ತು ಭಾನುವಾರ ಅಥವಾ ಪ್ರಾರ್ಥನೆಯ ಸಮಯಗಳಲ್ಲಿ ಮಾತ್ರವಲ್ಲದೆ ತಮ್ಮ ಜೀವನದ ಪ್ರತಿಕ್ಷಣ ದೇವರಿಗೆ ವಿಧೇಯರಾಗಿ, ಇತರರೊಂದಿಗಿರುವಾಗ ಮತ್ತು ಅನುದಿನ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ತಾವು ಕಲಿತು ವಿಷಯಗಳನ್ನು ಅಭ್ಯಾಸ ಮಾಡಬೇಕು ಎಂಬ ತೀರ್ಮಾನಕ್ಕೆ ಅವರು ಬಂದರು. ಅದರ ಅರ್ಥ ಏನು ಎಂಬದು ಅವರಿಗೆ ಯಾವಾಗಲೂ ತಿಳಿಯುವದಿಲ್ಲವಾದ್ದರಿಂದ, ತಂಡದಲ್ಲಿರುವ ಪ್ರತಿಯೊಬ್ಬರು ಸತತವಾಗಿ ಸತ್ಯವೇದ ಓದಲು ಮತ್ತು ತಮ್ಮಿಂದ ಸಾಧ್ಯವಾಗುವವುಗಳನ್ನು ಕಲಿತುಕೊಳ್ಳಲು ಸಭೆಗೆ ಹೋಗುವ ಮತ್ತು ತಮ್ಮ ಜೀವಿತಗಳನ್ನು ಸಂಪೂರ್ಣವಾಗಿ ದೇವರಿಗೆ ಒಪ್ಪಿಸಿ ಜೀವಿಸಲು ಮುಂದಾದರು.

### ನ್ಯಾಯ 8


ನಾವು ಜನರಿಗೆ ಸಹಾಯ ಮಾಡುವವರಾಗುವಂತೆ ದೇವರು ನಮ್ಮನ್ನು ಉಪಯೋಗಿಸಿಕೊಳ್ಳಲು ಬಯಸುತ್ತಾನೆ. ನಾವು ವಿಧೇಯತೆಯುಳ್ಳವರು ಮತ್ತು ಧಾರಾಳತೆಯುಳ್ಳವರಾದಾಗ, ನಾವು ಎಲ್ಲಿಂದ ಪ್ರಾರಂಭಿಸಿದೆವೋ ಅದನ್ನು ದೇವರು ಉಪಯೋಗಿಸುತ್ತಾನೆ ಮತ್ತು ಅದನ್ನು ಜೀವವನ್ನು ಬದಲಾಯಿಸುವ ಕಾರ್ಯಗಳನ್ನಾಗಿ ಅಭಿವೃದ್ಧಿಪಡಿಸುತ್ತಾನೆ.

### ಆತ್ಮಚರಿತ್ರೆ (ಅಂಗಡಿಯ ಕ್ಲರ್ಕ್) 8

ಅಂಗಡಿಯ ಕ್ಲರ್ಕ್ ಆಗಿ, ನೀವು ದೊಡ್ಡ ಅಂಗಡಿಯ ಅನೇಕ ಸಿಬ್ಬಂದಿಗಳಲ್ಲಿ ಒಬ್ಬರಾಗಿರಬಹುದು ಅಥವಾ ದೊಡ್ಡ ಮಳಿಗೆಯಲ್ಲಿರುವ ಸಣ್ಣ ಅಂಗಡಿಯಲ್ಲಿ ನೀವೊಬ್ಬರೇ ಇರಬಹುದು. ಯಾವುದೇ ಪರಿಸ್ಥಿತಿಯಲ್ಲಾದರೂ ಅಂಗಡಿಯ ಕ್ಲರ್ಕ್ ಗ್ರಾಹಕರ ಬೇಡಿಕೆಗಳನ್ನು ಪೂರೈಸಲು ಎಚ್ಚರಿಕೆಯಿಂದಿರಬೇಕು ಮತ್ತು ಅವರಿಗೆ ಅವಶ್ಯಕವಾದ ಸಹಾಯವನ್ನು ಮಾಡಬೇಕು.
*ಜವಾಬ್ದಾರಿಕೆಗಳು:* ಅಂಗಡಿಯ ಕ್ಲರ್ಕ್ ತನಗೆ ಅಂಗಡಿಯ ಯಜಮಾನ ಅಥವಾ ಡಿಪಾರ್ಟ್ ಮೆಂಟ್ ಮ್ಯಾನೇಜರ್ ಹೇಳುವ ಕೆಲಸವನ್ನು ಮಾಡಬೇಕು. ಅದು ಯಾವಾಗಲೂ ನಿಮ್ಮ ನೆಚ್ಚಿನ ಕೆಲಸವಲ್ಲದೆ ಇರಬಹುದು, ಯಾಕಂದರೆ ಅಂಗಡಿಯ ಅವಶ್ಯಕತೆಗಳು ಆಯಾ ವಿಭಾಗಗಳು ಕಾರ್ಯನಿರತವಾಗಿರುವದರ, ಕ್ಲರ್ಕ್ ಗಳ ಲಭ್ಯತೆ ಮತ್ತು ಕ್ಲರ್ಕ್ ಗಳಿಗೆ ಇರುವ ಕೌಶಲ್ಯಗಳು ಹಾಗೂ ತರಬೇತಿಗಳ ಮೇಲೆ ಆಧಾರವಾಗಿರುತ್ತದೆ.
ಅವಕಾಶಗಳು: ಉದ್ಯೋಗಕ್ಕೆ ಹೋಗುವ ಮೊದಲು ಅಥವಾ ಉದ್ಯೋಗದ ಸಮಯದಲ್ಲಿ ತರಬೇತಿಯನ್ನು ಕೊಡಲಾಗುತ್ತದೆ, ಆದ್ದರಿಂದ ತರಬೇತಿಯು ಪ್ರಾಮುಖ್ಯವಾಗಿದೆ. ಹಾಗೆಯೇ ಇದು ಸೇವೆಯ ಉದ್ಯೋಗವಾಗಿದೆ ಮತ್ತು ಸೇವೆ ಮಾಡುವದು


ದೇವರ ರಾಜ್ಯದ ಪ್ರಮುಖ ವಿಷಯವಾಗಿದೆ, ಆದ್ದರಿಂದ ಹೇಗೆ ಸೇವೆ ಮಾಡುವದೆಂಬದನ್ನು ಕಲಿತುಕೊಂಡರೆ ಅದು ಜೀವನ ಪರ್ಯಂತರ ಸಹಾಯ ಮಾಡುತ್ತದೆ. ನೀವು ಅತ್ಯುತ್ತಮರಾಗಿ ಕಾಣಿಸಿಕೊಳ್ಳಬೇಕು ಮತ್ತು ಸ್ಪಷ್ಟವಾಗಿ ಆಲೋಚಿಸಿ ಗ್ರಾಹಕರೊಂದಿಗೆ ಮಾತನಾಡಲು ವಿಶ್ರಾಂತಿ ತೆಗೆದುಕೊಳ್ಳಬೇಕು, ಇದಲ್ಲದೆ ಅನೇಕ ಬೆಲೆಯುಳ್ಳ ಕಾರ್ಯಗಳು ನಿಮಗೆ ಸಹಾಯ ಮಾಡುತ್ತವೆ.

## ಪ್ರಶ್ನೆಗಳು ಮತ್ತು ಉತ್ತರಗಳು 8




1. ಒಂದುವೇಳೆ ದೇವರು ನಮ್ಮನ್ನು ಆಶೀರ್ವದಿಸಬೇಕೆಂದು ಬಯಸಿದರೆ, ನಮ್ಮ ಜೀವಿತದಲ್ಲಿ ಕೆಟ್ಟ ಕಾರ್ಯಗಳು ಯಾಕೆ ಸಂಭವಿಸುತ್ತವೆ?
(ನಾವು ಪಾಪದಿಂದ ತುಂಬಿರುವ ಲೋಕದಲ್ಲಿ ಜೀವಿಸುತ್ತಿದ್ದೇವೆ ಆದ್ದರಿಂದ ಎಲ್ಲರ ಜೀವಿತದಲ್ಲಿಯೂ ಕೆಟ್ಟ ಕಾರ್ಯಗಳು ಸಂಭವಿಸುತ್ತವೆ. ಇದಲ್ಲದೆ, ದೇವರು ನಮ್ಮ ದೇಹಗಳಿಗಿಂತ ಹೆಚ್ಚಾಗಿ ನಮ್ಮ ಹೃದಯಗಳ ಬಗ್ಗೆ ಚಿಂತಿಸುತ್ತಾನೆ, ಯಾಕಂದರೆ ನಮ್ಮ ಪ್ರಾಣಗಳು ಮತ್ತು ಆತ್ಮಗಳು ಶಾಶ್ವತವಾದವುಗಳಾಗಿವೆಯೇ ಹೊರತು ದೇಹವಲ್ಲ. ನಮ್ಮ ಹೃದಯವನ್ನು ಬದಲಾಯಿಸಲು ಮತ್ತು ನಮ್ಮ ಪಕ್ವತೆಯನ್ನು ಅಭಿವೃದ್ಧಿಪಡಿಸಲು ದೇವರು ನೋವು ಹಾಗೂ ಕಷ್ಟದ ಪರಿಸ್ಥಿತಿಗಳನ್ನು ಉಪಯೋಗಿಸುತ್ತಾನೆ).
2. ಅವಶ್ಯಕತೆಯಲ್ಲಿರುವವರಿಗೆ ಸಹಾಯ ಮಾಡುವಂತೆ ನಿಮ್ಮನ್ನು ಜವಾಬ್ದಾರರನ್ನಾಗಿಸುವಂಥ ಯಾವ ನಿಯಮಗಳು ನಿಮ್ಮ ಸಮಾಜದಲ್ಲಿವೆ?
(ಲೋಕದಾದ್ಯಂತವಿರುವ ವಿವಿಧ ಸಂಸ್ಕೃತಿಗಳ ಸಮಾಜಗಳಲ್ಲಿರುವ ವಿವಿಧ ನಿಯಮಗಳ ಬಗ್ಗೆ ಚರ್ಚಿಸಿರಿ. ಪ್ರತಿಯೊಂದು ಸಮಾಯದಲ್ಲಿಯೂ ಅನೇಕ ನಿಯಮಗಳನ್ನು ಅರ್ಥಮಾಡಿಕೊಳ್ಳಲಾಗಿರುತ್ತದೆ. ನೀವು ಭಿಕ್ಷುಕರಿಗೆ ಹಣ ಕೊಡಬೇಕೇ? ಒಂದುವೇಳೆ ಒಬ್ಬ ಸ್ತ್ರೀ ಬೀದಿಯಲ್ಲಿ ಬಿದ್ದರೆ, ನೀವು ಆಕೆಗೆ ಸಹಾಯ ಮಾಡಬೇಕೇ? ಒಂದುವೇಳೆ ಮಗು ಏನಾದರೂ ತಪ್ಪಿಸಿಕೊಂಡಿದ್ದರೆ, ಜನರು ಆ ಮಗುವಿಗೆ ಸಹಾಯ ಮಾಡಬೇಕೇ?)
3. "ಅದು ನನ್ನ ಸಮಸ್ಯೆಯಲ್ಲ" ಎಂದು ಹೇಳಿ, ಸಹಾಯ ಮಾಡಲು ನಿರಾಕರಿಸುವದು ಅಥವಾ ಸಹಾಯದ ಅವಶ್ಯಕತೆಯಿಲ್ಲ ಎಂದು ತೀರ್ಮಾನಿಸುವ ಮತ್ತು ಸಹಾಯ ಮಾಡದಿರುವ ಕಾರ್ಯಗಳನ್ನು ಎಷ್ಟು ಸಲ ನೀವು ನೋಡಿದ್ದೀರಿ? (ನಿಮ್ಮ ಸಮಾಜದ ನಿಯಮಗಳನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿರಿ, ಸಹಾಯ ಮಾಡಬೇಕೋ ಅಥವಾ ಮಾಡಬಾರದೋ ಎಂಬದರ ಬಗ್ಗೆ ಮಾತನಾಡಿರಿ. ಪ್ರತಿಯೊಂದು ಉದಾಹರಣೆಗೂ, ದೇವರು ನಮ್ಮಿಂದ ಏನನ್ನು ನಿರೀಕ್ಷಿಸುತ್ತಾನೆ ಎಂಬದನ್ನೂ ಚರ್ಚೆ ಮಾಡಿರಿ).
4. ನಿಮ್ಮ ಜೀವಿತದಲ್ಲಿ ಅತ್ಯಂತ ಪ್ರಾಮುಖ್ಯವಾದ ಕಾರ್ಯವನ್ನು ತ್ಯಾಗ ಮಾಡಿರಿ ಎಂದು ದೇವರು ಹೇಳಿದರೆ, ಅದು ಏನಾಗಿರುವದು? (ನಮ್ಮಲ್ಲಿ ಅನೇಕರಿಗೆ, ನಮ್ಮ ಪ್ರಿಯವಾದ ಕುಟುಂಬವಾಗಿರುವದು. ಆದರೆ ದೇವರು ನಿಜವಾಗಿಯೂ ನಮ್ಮ ಜೀವಿತದಲ್ಲಿ ಪ್ರಥಮ ಆದ್ಯತೆಯಾಗಿರಲು ಬಯಸುತ್ತಾನೆ ಮತ್ತು ಆತನ ಸೇವೆ ಮಾಡುವ ಸಲುವಾಗಿ ನಮಗೆ ಪ್ರಿಯವಾದ ಕುಟುಂಬವನ್ನೂ ತ್ಯಾಗ ಮಾಡುವಂತೆ ಹೇಳುವನು. ಬೇರೆ ದೇಶಗಳಿಗೆ ಹೋಗಿ ಸೇವೆ ಮಾಡುವ ಸಲುವಾಗಿ ತಮ್ಮ ಕುಟುಂಬವನ್ನು ತ್ಯಾಗ ಮಾಡುವ ಮಿಷನರಿಗಳ ಬಗ್ಗೆ ನಿಮ್ಮ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿರಿ).
5. ನಿಮ್ಮ ಜೀವಿತದಲ್ಲಿ ಏನಾದರೂ ನಿರ್ದಿಷ್ಟವಾದ ಸಂಗತಿಯನ್ನು ನೀವು ದೇವರಿಂದ ಬೇಡಿಕೊಳ್ಳುವದಾದರೆ ಅದು ಏನಾಗಿರುವದು? (ಮಕ್ಕಳು ತಮ್ಮ ಉತ್ತರಗಳನ್ನು ಹೇಳಲಿ)

## ಒಗಟಿನ ಉತ್ತರಗಳು 8









## ಆಟ 8

ಬಕೆಟಿನೊಳಗೆ ಎಲ್ಲರೂ

ಸಮಯಕ್ಕಿಂತ ಮುಂಚಿತವಾಗಿಯೇ ರುಚಿಯಾದ ಪಾನೀಯ ಅಥವಾ ಸಾಮಾನ್ಯ ಕುಡಿಯುವ ನೀರು ಮತ್ತು ಸ್ಟ್ರಾಗಳನ್ನು ಸಿದ್ಧಮಾಡಿರಿ. ಪ್ರತಿಯೊಂದು ಗುಂಪಿನವರು ಸಾಧ್ಯವಾದಷ್ಟು ಬಿಗಿಯಾಗಿ ವೃತ್ತವನ್ನು ಮಾಡಬೇಕು. ಗುಂಪಿನ ನಡುವೆ ನೀರಿನ ಗುಂಡಿಯನ್ನು ಇಡಿರಿ ಮತ್ತು ಗುಂಪಿನವರೆಲ್ಲರೂ ತಂಬಿಗೆಯಲ್ಲಿರುವ ಪಾನೀಯವನ್ನು ಕುಡಿದು ಮುಗಿಸಬೇಕು. ಅವರೆಲ್ಲರೂ ಒಟ್ಟಾಗಿ ಕುಡಿಯಬಹುದು ಅಥವಾ ಒಮ್ಮೆಗೆ ಒಬ್ಬರು ಕುಡಿಯಬಹುದು. ನಿಮ್ಮ ಗುಂಪಿನವರ ಸಂಖ್ಯೆ ಹೆಚ್ಚಾಗಿದ್ದರೆ, ಪ್ರತಿಯೊಂದು ತಂಡದವರು ಕುಡಿಯುವ ಸಲುವಾಗಿ ಹೆಚ್ಚಾಗಿ ತಂಬಿಗೆಗಳನ್ನು ಸಿದ್ಧಮಾಡಿರಿ.






## ಹೋಮ್ ವರ್ಕ್ 8

ಯಾರಾದರೂ ಅವಶ್ಯಕತೆಯಲ್ಲಿರುವದಾದರೆ, ಯೇಸು ಕ್ರಿಸ್ತನು ನಮಗೆ ಕೊಡುವ ಹಾಗೆ ಅಂದರೆ "ಜಡಿದು ಅಲ್ಲಾಡಿಸಿ ತುಂಬಿ ಹೊರಸೂಸುವ" ಹಾಗೆ ಕೊಡಿರಿ.

# ಯೇಸು ಕ್ರಿಸ್ತನ ಹಾಗೆ ಪ್ರೀತಿಸಿರಿ

09

## ಒಳ್ಳೆಯ ಸಮಾಯದವನು: ಲೂಕ 10:25-27



### ನಾಟಕ (ಮೊದಲನೆಯ ಭಾಗ)

ತನ್ನ ಜೀವಿತವನ್ನು ಸಂಪೂರ್ಣವಾಗಿ ದೇವರಿಗೆ ಒಪ್ಪಿಸುವದು ಹೇಗೆ ಎಂಬದರ ಬಗ್ಗೆ ಏಜೆಂಟ್ ಯೋಚಿಸುತ್ತಾ ಇದ್ದನು. ತನ್ನಂತೆ ತನ್ನ ನೆರೆಯವರನ್ನು ಪ್ರೀತಿ ಮಾಡುವದು ಹೇಗೆ ಎಂಬದನ್ನು ಅವನು ಸಭೆಯಲ್ಲಿ ಕಲಿತುಕೊಂಡನು. ಈ ವಾರದಾದ್ಯಂತ ತನ್ನ ನೆರೆಯವರೊಂದಿಗೆ ಉತ್ತಮವಾಗಿ ನಡೆದುಕೊಂಡಿದ್ದನು, ಆದರೆ ಅವನ ವೈರಿಯಾಗಿದ್ದ ಒಬ್ಬ ಹುಡುಗನೊಂದಿಗೆ ಮಾತ್ರ ಸರಿಯಾರಿ ನಡೆದುಕೊಳ್ಳಲು ಆಗದೆ ಇರುವದನ್ನು ಅವನು ತನ್ನ ತಂಡದವರೊಂದಿಗೆ ಹಂಚಿಕೊಳ್ಳುತ್ತಾ ಇದ್ದನು. ತಿಳಿದುಕೊಳ್ಳುವ ಸಲುವಾಗಿ ಸಮಯದ ಹಿಂದೆ ಹೋಗುವ ಮೊದಲು ತಂಡದವರು ಅದನ್ನು ಒಪ್ಪಿಕೊಳ್ಳಲಿಲ್ಲ.

### ಪಾಠ 9

ಲೂಕ 10:25-29 ಓದಿರಿ

ದೇವರನ್ನು ಪ್ರೀತಿಸುವದು ಮತ್ತು ನಮ್ಮ ನೆರೆಯವರನ್ನು ನಮ್ಮಂತೆಯೇ ಪ್ರೀತಿಸುವದು ಪ್ರಾಮುಖ್ಯವಾದ ಆಜ್ಞೆಗಳಾಗಿವೆ ಹಾಗೂ ಈ ಎರಡು ಆಜ್ಞೆಗಳಲ್ಲಿ ಉಳಿದವುಗಳು ನೆರವೇರುತ್ತವೆ ಎಂದು ಯೇಸು ಕ್ರಿಸ್ತನು ಹೇಳಿದನು.

ದೇವರನ್ನು ಆರಾಧಿಸುವ ಮತ್ತು ಆತನ ಆಜ್ಞೆಗಳಿಗೆ ವಿಧೇಯರಾಗುವ ಮೂಲಕ ನಾವು ಆತನ ಮೇಲೆ ನಮಗಿರುವ ಪ್ರೀತಿಯನ್ನು ತೋರಿಸುತ್ತೇವೆ. ಆದರೆ ನಮ್ಮ ನೆರೆಯವನು ಯಾರು ಮತ್ತು ನಾವು ನಮ್ಮ ಪ್ರೀತಿಯನ್ನು ಅವನಿಗೆ ತೋರಿಸುವದು ಹೇಗೆ?

ಲೂಕ 10:30-37 ಓದಿರಿ

ಕೆಲವು ಕಾರಣಗಳಿಂದ ಸಮಾರ್ಯದವರು ಮತ್ತು ಯೆಹೂದ್ಯರು ಒಬ್ಬರನ್ನೊಬ್ಬರು ಇಷ್ಟಪಡುತ್ತಾ ಇರಲಿಲ್ಲ. ಆದ್ದರಿಂದ ಯೇಸು ಕ್ರಿಸ್ತನು ಸಮಾರ್ಯದವನನ್ನು ನೆರೆಯವನೆಂದು ಉದಾಹರಣೆಯಾಗಿ ಹೇಳಿದಾಗ, ಅದನ್ನು ಅಂಗೀಕರಿಸಿಕೊಳ್ಳಲು ಯೆಹೂದ್ಯರಿಗೆ ಬಹಳ ಕಷ್ಟವಾಯಿತು. ಮತ್ತು ಯೇಸು ಕ್ರಿಸ್ತನು ಹೇಳಿದ ಕಥೆಯಲ್ಲಿ ಸಮಾರ್ಯದವನು "ಒಳ್ಳೆಯವನಾಗಿದ್ದಾನೆ." ಯೇಸು ಕ್ರಿಸ್ತನು ಹೇಳುತ್ತಾ ಇರುವದೇನೆಂದರೆ ಜನರೆಲ್ಲರೂ ನಮ್ಮ ನೆರೆಯವರಾಗಿದ್ದಾರೆ ಮತ್ತು ನಾವು ಅವರೆಲ್ಲರಿಗೂ ಪ್ರೀತಿ ಹಾಗೂ ಕರುಣೆಯನ್ನು ತೋರಿಸಬೇಕು.

ಮುಂದಿನ ಪ್ರಶ್ನೆ ಏನೆಂದರೆ, "ನಾವು ಅವರಿಗೆ ಪ್ರೀತಿಯನ್ನು ತೋರಿಸುವದು ಹೇಗೆ?" ಮತ್ತೊಮ್ಮೆ ಒಳ್ಳೆಯ ಸಮಾರ್ಯದವನ ಸಾಮ್ಯದಲ್ಲಿ, ಸಮಾರ್ಯದವನು ಯೆಹೂದ್ಯನ ಆರೈಕೆ ಮಾಡಿದನು. ಸಮಾರ್ಯದವನು ಗಾಯಗೊಂಡಿದ್ದವನ ಗಾಯಗಳನ್ನು ಕಟ್ಟಿ, ಅವನನ್ನು ತನ್ನ ಕತ್ತೆಯ ಮೇಲೆ ಕೂರಿಸಿಕೊಂಡು ಛತ್ರಕ್ಕೆ ಕರೆದುಕೊಂಡು ಹೋಗಿ ಸುಮ್ಮನೆ ತನ್ನ ಪಾಡಿಗೆ ತಾನು ಹೊರಟು ಹೋಗಬಹುದಾಗಿತ್ತು. ಆದರೆ ಅವನು ಛತ್ರದವನಿಗೆ ಹಣವನ್ನು ಕೊಟ್ಟು ಅವನನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಹೇಳಿದನು ಮತ್ತು ಹೆಚ್ಚೇನಾದರೂ ಖರ್ಚಾದರೆ ತಾನು ಮತ್ತೆ ಬರುವಾಗ ಕೊಡುವದಾಗಿ ಹೇಳಿದನು. ನಮ್ಮ ಸುತ್ತಮುತ್ತಲಿನಲ್ಲಿರುವವರಿಗೆ ಉದಾರವಾಗಿ ಸಹಾಯ ಮಾಡಲು ಮತ್ತು ಕರುಣೆಯನ್ನು ತೋರಿಸಲು ಇದು ಪ್ರಾಮುಖ್ಯವಾದ ಉದಾಹರಣೆಯಾಗಿದೆ! ಯೇಸು ಕ್ರಿಸ್ತನು ನಮಗಾಗಿ ಈ ಲೋಕಕ್ಕೆ ಬಂದು, ಪ್ರಾಣ ಕೊಡುವ ಮೂಲಕ ಇದೇ ಕಾರ್ಯವನ್ನು ಮಾಡಿದನು.

## ಕಂಠಪಾಠ ವಚನ ೨

ಲೂಕ 10:27 ಅವನು, " 'ನಿನ್ನ ಸರ್ವೇಶ್ವರನಾದ ದೇವರನ್ನು ನಿನ್ನ ಪೂರ್ಣಹೃದಯದಿಂದಲೂ ನಿನ್ನ ಪೂರ್ಣಆತ್ಮದಿಂದಲೂ ನಿನ್ನ ಪೂರ್ಣಶಕ್ತಿಯಿಂದಲೂ ನಿನ್ನ ಪೂರ್ಣ ಮನಸ್ಸಿನಿಂದಲೂ ಪ್ರೀತಿಸು ಮತ್ತು ನಿನ್ನನ್ನು ನೀನೇ ಪ್ರೀತಿಸಿಕೊಳ್ಳುವಂತೆ ನಿನ್ನ ನೆರೆಯವನನ್ನೂ ಪ್ರೀತಿಸು' ಎಂದಿದೆ," ಎಂದು ಉತ್ತರಕೊಟ್ಟನು"

## ನಾಟಕ (ಎರಡನೇ ಭಾಗ)

ತಮ್ಮ ಕಾರ್ಯದಿಂದ ಹಿಂದಿರುಗಿ ಬಂದಾಗ ಏಜೆಂಟ್ ಗಲಿಬಿಲಿಗೊಂಡಿದ್ದನು. ತನ್ನ ವೈರಿಯನ್ನು ಪ್ರೀತಿಸುವದು ಹೇಗೆ ಎಂದು ಅವನಿಗೆ ಗೊತ್ತಿರಲಿಲ್ಲ. ಮೊದಲನೆಯದಾಗಿ, ಅವನಿಗೆ ಕರುಣೆ ತೋರಿಸುವದು ಕಷ್ಟದ ವಿಷಯವಾಗಿತ್ತು ಮತ್ತು ಎರಡನೆಯದಾಗಿ, ಏನು ಮಾಡಬೇಕೆಂದು ಯೋಚಿಸುವದು ಸಹ ಕಷ್ಟವಾಗಿತ್ತು. ವೈರಿಯನ್ನು ಪ್ರೀತಿಸುವ ಬಗ್ಗೆ ವಿವಿಧ ಆಲೋಚನೆಗಳನ್ನು ಹೇಳುತ್ತಿದ್ದ ತಂಡದವರೊಂದಿಗೆ ಅವನು ಮಾತನಾಡಿದನು. ನಾಯಕನು ಅವನಿಗೆ, ನಿನಗೆ ಇಷ್ಟವಾಗದಿದ್ದರೂ ಒಂದು ಸಣ್ಣ ಕಾರ್ಯವನ್ನು ನೀನು ಮಾಡು, ಮಾಡಿದರೆ ಆ ಸಣ್ಣ ಕಾರ್ಯದಿಂದ ನಿನಗೆ ಬಹಳ ಸಮಾಧಾನವಾಗುವದು ಅಂದನು. ಅವರು ಒಟ್ಟಾಗಿ ಪ್ರಾರ್ಥನೆ ಮಾಡಿದರು ಮತ್ತು ಒಂದುದಿನ ಅವನ ವೈರಿಯನ್ನು ಆಶೀರ್ವದಿಸುವಂತೆ ಬೇಡಿಕೊಂಡರು. ಅದು ಬಹಳ ಚಿಕ್ಕ ಕಾರ್ಯವಾದ್ದರಿಂದ ಏಜೆಂಟ್ ಒಪ್ಪಿಕೊಂಡನು. ನಂತರ ಯಾವುದೇ ನಿರೀಕ್ಷೆಯಿಲ್ಲದೆ, ತನ್ನ ವೈರಿ ಕಾಣಿಸಿದಾಗ ಅವನಿಗೆ "ಹಾಯ್" ಹೇಳಲು ತೀರ್ಮಾನಿಸಿದನು. ಅದಾದ ನಂತರ, ವಾತಾವರಣ ಅಥವಾ ಬೇರೆ ಯಾವುದಾದರು ವಿಷಯದ ಬಗ್ಗೆ ಮಾತನಾಡುವವನಾದನು ಮತ್ತು ದೇವರ ಸಹಾಯದಿಂದ ಅವರು ವೈರತ್ವವನ್ನು ಮರೆತು ಸ್ನೇಹಿತರಾದರು.

## ನ್ಯಾಯ ೨

ನಮ್ಮನ್ನು ನಾವು ಪ್ರೀತಿಸುವದರಿಂದ ಏನೆಲ್ಲಾ ರೀತಿಯ ಕಾರ್ಯಗಳನ್ನು ಮಾಡುತ್ತೇವೆ? ಆಹಾರ ಪದಾರ್ಥಗಳನ್ನು ಖರೀದಿಸುತ್ತೇವೆ, ಬಿಲ್ ಪಾವತಿಸುತ್ತೇವೆ, ಸಮಸ್ಯೆಗಳನ್ನು ಬಗೆಹರಿಸುತ್ತೇವೆ. ನಮ್ಮ ಹಾಗೆಯೇ ನಾವು ಇತರರನ್ನು ಪ್ರೀತಿಸಬೇಕೆಂದು ಯೇಸು ಕ್ರಿಸ್ತನು ನಮಗೆ ಹೇಳಿದ್ದಾನೆ. ಇತರರಿಗೆ ನಾವು ಹಿತವನ್ನೇ ಮಾಡೋಣ.

## ಆತ್ಮಚರಿತ್ರೆ (ವೈದ್ಯನು) ೨


ಜನರಿಗೆ ಸಹಾಯ ಮಾಡುವದೇ ವೈದ್ಯನ ಕೆಲಸವಾಗಿದೆ. ಒಂದುವೇಳೆ ಇದು ನಿಮ್ಮ ಕೆಲಸವಾಗಿದ್ದರೆ, ಜನರನ್ನು ಗುಣಪಡಿಸಲು ದೇವರಿಗೆ ವೈದ್ಯರ ಅವಶ್ಯಕತೆಯಿದೆ ಎಂಬದನ್ನು ತಿಳಿಯುವದು ಅವಶ್ಯವಾಗಿದೆ. ಸತ್ಯವೇದದಲ್ಲಿ, ದೇವಜನರು ಅದ್ಭುತವಾಗಿ ಗುಣವಾಗಿರುವದು ನಮಗೆ ಗೊತ್ತಿದೆ, ಇದಲ್ಲದೆ ಅವರಿಗೆ ಅವಶ್ಯವಾದ ತರಬೇತಿಯನ್ನು ಪಡೆಯಲು ದೇವರು ಅವರಿಗೆ ಸಹಾಯ ಮಾಡುತ್ತಾನೆ. ಉದಾಹರಣೆಗೆ ಲೂಕನು ವೈದ್ಯನಾಗಿದ್ದನು ಮತ್ತು ಬಹುಶಃ ಪೌಲನು ಜನರನ್ನು ಗುಣಪಡಿಸುತ್ತಾ ಇದ್ದ ಕಡೆಗಳಲ್ಲಿಯೂ ವೈದ್ಯನಾಗಿ ಕಾರ್ಯಮಾಡುತ್ತಾ ಇದ್ದನು.

*ಜವಾಬ್ದಾರಿಕೆಗಳು:* ಯಾವ ಕಾಯಿಲೆಗೆ ಯಾವ ಔಷಧಿಯನ್ನು ಎಂಬದನ್ನು ತಿಳಿದುಕೊಳ್ಳುವದು ಹಾಗೂ ಸರಿಯಾದ ಸಲಹೆಗಳನ್ನು ಕೊಡುವದು ವೈದ್ಯನ ಜವಾಬ್ದಾರಿಕೆಯಾಗಿದೆ. ಇಡೀ ಸಮುದಾಯದವರು ತಮ್ಮ ಅನುದಿನದ ಆರೋಗ್ಯಕ್ಕಾಗಿ ವೈದ್ಯರ ಮೊರೆ ಹೋಗುವವರಾಗಿದ್ದಾರೆ.

*ಅವಕಾಶಗಳು:* ವೈದ್ಯನು ವಿವಿಧ ರೀತಿಯ ಜನರನ್ನು ಭೇಟಿ ಮಾಡುತ್ತಾನೆ ಮತ್ತು ಅಧ್ಯಯನಗಳ ಮೂಲಕ


ಆತ್ಮವಿಶ್ವಾಸವನ್ನು ಪಡೆಯುತ್ತಾನೆ ಹಾಗೂ ವೈದ್ಯನಾಗಿ ಎಲ್ಲಾ ಜನರಿಗೂ ಅವರ ಕಷ್ಟದ ಪರಿಸ್ಥಿತಿಗಳಲ್ಲಿ ಸೂಕ್ತವಾದ ಸಲಹೆಗಳನ್ನು ಕೊಡುತ್ತಾನೆ.

## ಪ್ರಶ್ನೆಗಳು ಮತ್ತು ಉತ್ತರಗಳು ೯




1. ಸಹವಾಗಿ ಸಹಾಯ ಮಾಡಲು ಮುಂದಾಗದೆ ಇರುವಾಗ ನೀವು ಕೊಡುವ ಕಾರಣಗಳು ಯಾವುವು? (ನಾವು ಕೊಡುವ ಕಾರಣಗಳು ಯಾವುವೆಂದರೆ: ಹಣ, ಸಮಯ, ನಮ್ಮ ತಂದೆತಾಯಿಗಳ ಅನುಮತಿ, ಇತರರು ಏನು ಹೇಳುತ್ತಾರೆ ಅಥವಾ ತೊಂದರೆಗಳಿಗೆ ಒಳಗಾಗುವದು).
2. ನಾವು ಎಲ್ಲರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳಬೇಕೇ? (ನಾವು ಎಲ್ಲರನ್ನು ಪ್ರೀತಿಸಬೇಕು, ಎಲ್ಲರೊಂದಿಗೆ ಸ್ನೇಹದಿಂದ ನಡೆದುಕೊಳ್ಳಬೇಕು. ಆದರೂ ಒಂದುವೇಳೆ ಯಾರಾದರೂ ಕ್ರೂರಿಯಾಗಿ ನಡೆದುಕೊಳ್ಳುತ್ತಾ ಇದ್ದರೆ, ಅಂಥವನನ್ನು ಸ್ನೇಹಿತನನ್ನಾಗಿ ಮಾಡಿಕೊಳ್ಳಲು ನಮಗೆ ಇಷ್ಟವಾಗುವದಿಲ್ಲ).
3. ಜನರೊಂದಿಗೆ ನೀವು ಉದಾರಿಗಳಾಗಿ ನಡೆದುಕೊಳ್ಳಲು ಹೇಗೆ ಸಾಧ್ಯ? (ಮಕ್ಕಳ ಅಭಿಪ್ರಾಯಗಳನ್ನು ಕೇಳಿರಿ. ಸಮಾರ್ಯದವನು ಯೆಹೂದ್ಯನಿಗೆ ಸಹಾಯ ಮಾಡಿದ್ದನ್ನು ಹೇಳುವ ಮೂಲಕ ನೀವು ಮಕ್ಕಳಿಗೆ ಸಹಾಯ ಮಾಡಬಹುದು).
4. ನಿಮ್ಮೊಂದಿಗೆ ಯಾರಾದರೂ ಉದಾರಿಗಳಾಗಿ ನಡೆದುಕೊಂಡಿದ್ದಾರೆಯೇ? (ಮಕ್ಕಳು ಉತ್ತರವನ್ನು ಹೇಳಲಿ).
5. ಒಂದುವೇಳೆ ಸಮಾರ್ಯದವನು ನಿಮಗೆ ಸಿಕ್ಕಿದರೆ ನೀವು ಏನು ಮಾಡುವಿರಿ? (ಒಂದುವೇಳೆ ಮಕ್ಕಳು ಸಹಾಯ ಮಾಡುವೆವು ಎಂದು ಹೇಳಿದರೆ, ಹೇಗೆ ಎಂದು ಕೇಳಿರಿ).

## ಒಗಟಿನ ಉತ್ತರಗಳು ೯





## ಆಟ ೯

ಯಾರೆಂದು ಊಹಿಸಿರಿ



ಪ್ರತಿಯೊಂದು ಮಗುವಿಗೆ ಒಂದು ಕುರ್ಚಿಯನ್ನು ಕೊಡಿರಿ, ಅವುಗಳನ್ನು ವೃತ್ತಾಕಾರದಲ್ಲಿ ಜೋಡಿಸಿರಿ, ಬಣ್ಣದ ಹಾಳೆಗಳನ್ನುತುಂಡಾಗಿ ಕತ್ತರಿಸಿರಿ ಮತ್ತು ಅವುಗಳನ್ನು ಕುರ್ಚಿಯ ಹಿಂದೆ ಅಂಟಿಸಿರಿ. ಪ್ರತಿಯೊಂದು ಬಣ್ಣದ ಹಾಳೆಯು ಕುರ್ಚಿಯಲ್ಲಿ ಮೂರು ಸಲವಾದರೂ ಕಾಣಿಸಬೇಕು.

ಯಾವುದಾದರು ಹಾಡು ಹಾಕಿರಿ ಮತ್ತು ಮಕ್ಕಳಿಗೆ ಕುರ್ಚಿಯ ಸುತ್ತಲು ಹೋಗುವಂತೆ ಹೇಳಿರಿ. ಹಾಡು ನಿಂತು ಕೂಡಲೇ, ಮಕ್ಕಳು ಕೂಡಲೇ ನಿಂತುಕೊಳ್ಳಬೇಕು. ಶಿಕ್ಷಕನು ಯಾವುದಾದರು ಬಣ್ಣವನ್ನು

ಹೇಳಬೇಕು ಮತ್ತು ಆ ಬಣ್ಣದ ಹಾಳೆಯಿರುವ ಕುರ್ಚಿಯಲ್ಲಿ ಕುಳಿತಿರುವ ಮಕ್ಕಳು ಎದ್ದು ನಿಂತು ಕಂಠಪಾಠ ವಾಕ್ಯವನ್ನು ಹೇಳಬೇಕು. ಉದಾಹರಣೆಗೆ, ಒಂದುವೇಳೆ ಶಿಕ್ಷಕನು ಕೆಂಪು ಎಂದು ಹೇಳಿದರೆ, ಕೆಂಪು ಹಾಳೆಯಿರುವ ಕುರ್ಚಿಯಲ್ಲಿ ಕುಳಿತಿರುವ ಪ್ರತಿಯೊಬ್ಬರು ಎದ್ದು ನಿಲ್ಲಬೇಕು ಮತ್ತು ವಾಕ್ಯವನ್ನು ಹೇಳಬೇಕು.




## ಹೋಮ್ ವರ್ಕ್ ೧

ಅವಶ್ಯಕತೆಯಲ್ಲಿರುವ ಯಾರಿಗಾದರೂ ಸಹಾಯ ಮಾಡಲು ಈ ವಾರದಲ್ಲಿ ಮುಂದಾಗಿರಿ ಆದರೂ ಅವರಿಗಾಗಿ ಎರಡು ಮೂರು ಉದಾರದ ಕಾರ್ಯಗಳನ್ನು ಮಾಡಿರಿ.

# ದೇವರು ಅಭಿವೃದ್ಧಿಪಡಿಸುವನು

10

**5000 ಜನರಿಗೆ ಊಟ ಕೊಟ್ಟನು: ಮತ್ತಾಯ 14:13-21**



## ನಾಟಕ (ಮೊದಲನೆಯ ಭಾಗ)

ತನ್ನ ತಾಯಿಗೆ ಪತ್ರ ಬರೆಯುವಂತೆ ಒಂದು ಚಿಕ್ಕ ಮಗುವಿಗೆ ತಾನು ಸಹಾಯ ಮಾಡಿದ್ದು ಮತ್ತು ಆ ಮಗುವನ್ನು ತಾನು ಅಪ್ಪಿಕೊಂಡದ್ದರ ಬಗ್ಗೆ ತನಿಖಾಧಿಕಾರಿಯು ತಂಡದ ಸದಸ್ಯರೊಂದಿಗೆ ಹಂಚಿಕೊಂಡರು. ನನಗೆ ಸಹಾಯ ಮಾಡುವದೆಂದರೆ ಬಹಳ ಪ್ರೀತಿ ಆದರೆ ಎಷ್ಟು ಮಾತ್ರ ಮಾಡಲು ಸಾಧ್ಯ ಎಂದು ಆಶ್ಚರ್ಯವಾಗುತ್ತದೆ ಎಂಬದಾಗಿಯೂ ತನಿಖಾಧಿಕಾರಿ ಹೇಳಿದಳು. ನೀನು ಮಾಡಿದ ಕಾರ್ಯ ಬಹಳ ಪ್ರಾಮುಖ್ಯವಾದದ್ದು ಎಂಬದಾಗಿ ತಂಡದವರು ಆಕೆಯನ್ನು ಪ್ರೋತ್ಸಾಹಪಡಿಸಿದರು, ನಂತರ ಅವರೆಲ್ಲರೂ ಸತ್ಯವೇದದ ಕಥೆಗಾಗಿ ಸಮಯದ ಹಿಂದೆ ಹೋದರು.

## ಪಾಠ 10

ಎಷ್ಟಿದ್ದರೆ ನಮಗೆ ಸಾಕಾಗುತ್ತದೆ?

ಮತ್ತಾಯ 14:15-21 ಓದಿರಿ

ಯೇಸು ಕ್ರಿಸ್ತನ ಮಾತುಗಳನ್ನು ಕೇಳಲು ಜನರು ದೊಡ್ಡ ಗುಂಪಿನಲ್ಲಿ ಸೇರಿದ್ದರು ಮತ್ತು ಅವರಿಗೆ ಆಹಾರದ ಅವಶ್ಯಕತೆಯಿತ್ತು!!

ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ನಿಮ್ಮ ಕೈಗಳಲ್ಲಿರುವ ಸ್ವಲ್ಪ ರೊಟ್ಟಿ ಮೀನನ್ನೇ ಜನರೆಲ್ಲರಿಗೆ ಹಂಚಿರಿ ಅಂದನು.

5 ರೊಟ್ಟಿ ಮತ್ತು 2 ಮೀನುಗಳನ್ನು 5000 ಜನರಿಗೆ ಹಂಚುವಾಗ ಶಿಷ್ಯರ ನಂಬಿಕೆ ಹೇಗಿರಬಹುದೆಂದು ಊಹಿಸಿರಿ?

ಅವರು ಅವುಗಳನ್ನು ನೋಡಬಹುದಾಗಿತ್ತು ಮತ್ತು ಶಿಷ್ಯರಿಗೆ ಅವುಗಳಲ್ಲಿ ಏನೂ ಸಿಗುತ್ತಾ ಇರಲಿಲ್ಲ. ಆದರೆ ಯೇಸು ಕ್ರಿಸ್ತನು ಅದ್ಭುತ ಮಾಡಿದನು ಮತ್ತು ಎಲ್ಲರೂ ತಿಂದು ತೃಪ್ತರಾದರು ಹಾಗೂ 12 ಪುಟ್ಟಿ ರೊಟ್ಟಿ ಹಾಗೂ ಮೀನು ತುಂಡುಗಳು ಉಳಿದವು!! ಎಲ್ಲರೂ ತೃಪ್ತರಾಗುವ ತನಕ ತಿಂದರು ಮತ್ತು ಶಿಷ್ಯರಿಗೆ ನಾಳೆಗೂ ಬೇಕಾಗುವಷ್ಟು ಆಹಾರ ದೊರಕಿತು.

ಯೇಸು ಕ್ರಿಸ್ತನು ತಾನಾಗಿಯೇ ಎಲ್ಲರಿಗೂ ಆಹಾರವನ್ನು ಒದಗಿಸಬಹುದಾಗಿತ್ತು ಆದರೆ ಆತನು ಹಾಗೆ ಮಾಡದೆ ಶಿಷ್ಯರ ಬಳಿಯಿದ್ದದ್ದನ್ನು ತೆಗೆದುಕೊಂಡನು ಮತ್ತು ಅದನ್ನೇ ಅಭಿವೃದ್ಧಿಪಡಿಸಿದನು.

ನಾವು ಸಹ ಶಿಷ್ಯರ ಹಾಗೆ ನಡೆದುಕೊಳ್ಳಬಹುದು. ನಮ್ಮ ಬಳಿಯಿರುವ ಸ್ವಲ್ಪವಾದದ್ದನ್ನೇ ಕೊಡಲು ಬಯಸಿದರೆ, ದೇವರು ಅದರಿಂದ ದೊಡ್ಡ ಅದ್ಭುತವನ್ನೇ ಮಾಡುತ್ತಾನೆ. ಇದು ನಮ್ಮ ಆಹಾರ ಅಥವಾ ಹಣಕ್ಕಿಂತಲೂ ಹೆಚ್ಚಿನದಾಗಿದೆ ಅಂದರೆ ನಮ್ಮ ಸಮಯ ಮತ್ತು ಪರಿಶ್ರಮವನ್ನೂ ಸೂಚಿಸುತ್ತದೆ.

## ಕಂಠಪಾಠ ವಚನ 10

ಮತ್ತಾಯ 19:26 “ಯೇಸು ಅವರನ್ನು ನಿಟ್ಟಿಸಿ ನೋಡುತ್ತಾ, “ಮನುಷ್ಯರಿಗಿದು ಅಸಾಧ್ಯ; ಆದರೆ ದೇವರಿಗೆ ಎಲ್ಲವೂ ಸಾಧ್ಯ,” ಎಂದರು”


## ನಾಟಕ (ಎರಡನೇ ಭಾಗ)

ಪ್ರಸ್ತುತ ಸಮಯಕ್ಕೆ ಹಿಂದಿರುಗಿ ಬಂದಾಗ, ಸಭೆಯ ನಾಯಕನಿಂದ ತನಿಖಾಧಿಕಾರಿಗೆ ಒಂದು ಸಂದೇಶ ಬಂದಿತು. ಮಗುವಿನ

ಕುಟುಂಬದವರು ಪಟ್ಟಣಕ್ಕೆ ಹೋಗಿದ್ದಾರೆ ಮತ್ತು ಅಲ್ಲಿ ಅವರಿಗೆ ಯಾರೂ ಸ್ನೇಹಿತರಾಗದ ಕಾರಣ ಕಷ್ಟಪಡುತ್ತಾ ಇದ್ದಾರೆ ಹಾಗೂ ಒಂಟಿತನ ಅವರನ್ನು ಕಾಡುತ್ತಾ ಇದೆ. ಆದರೆ ಮಗು ಮಾತ್ರ ತನಗೆ ಸಭೆಯಲ್ಲಿ ದೊರತ ಹೊಸ ಸ್ನೇಹಿತನ ಬಗ್ಗೆ ಹೇಳುತ್ತಲೇ ಇತ್ತು ಆದ್ದರಿಂದ ಆ ಪಟ್ಟಣದಲ್ಲಿ ತಮಗೆ ಒಂಟಿತನ ಕಾಡುವದಿಲ್ಲ ಎಂಬ ಸಂತೋಷ ಅವರಿಗಾಯಿತು. ಮತ್ತೊಬ್ಬ ವ್ಯಕ್ತಿ ತನಿಖಾಧಿಕಾರಿಯ ಒಳ್ಳೇತನವನ್ನು ತಿಳಿದುಕೊಂಡು ತನ್ನ ಕುಟುಂಬದವರನ್ನು ಸಹ ಅದೇ ಪಟ್ಟಣಕ್ಕೆ ಕರೆದುಕೊಂಡು ಬರಲು ತೀರ್ಮಾನಿಸಿದನು. ಹಾಗೆಯೇ ಇನ್ನೊಬ್ಬ ವ್ಯಕ್ತಿ ಸಹ ಆಕೆಯ ಮಾದರಿಯನ್ನನುಸರಿಸಲು ಪ್ರೋತ್ಸಾಹಗೊಂಡನು ಮತ್ತು ತನ್ನ ಸುತ್ತಮುತ್ತಲಿನವರೊಂದಿಗೆ ಬೆರೆಯಲು ಮುಂದಾದನು. ಈ ಸಂದೇಶಗಳನ್ನು ಕೇಳಿ, ತನ್ನ ಸಣ್ಣ ದಯೆಯ ಕಾರ್ಯದ ಮೂಲಕ ಒಂದು ಚಿಕ್ಕ ಮಗು ಹಾಗೂ ಇನ್ನೂ ಅನೇಕರ ಜೀವಿತಗಳನ್ನು ಅಭಿವೃದ್ಧಿಪಡಿಸಿದ್ದಕ್ಕಾಗಿ ತನಿಖಾಧಿಕಾರಿ ದೇವರನ್ನು ಸ್ತುತಿಸಿದಳು.

## ನ್ಯಾಯ 10

ಕೆಲವು ಅವಶ್ಯಕತೆಗಳನ್ನು ಪೂರೈಸಲು ಬಗ್ಗೆ ಯೋಚಿಸುವದೂ ಅಸಾಧ್ಯವಾಗಿದೆ. ನಾವು ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಬೇಕೆಂದು ದೇವರು ಬಯಸುವದಿಲ್ಲ ಬದಲಾಗಿ ನಮ್ಮಿಂದಾಗುವ ಕಾರ್ಯವನ್ನು ಮಾಡಬೇಕೆಂದು ಬಯಸುತ್ತಾನೆ. ಉಳಿದ ಕಾರ್ಯವನ್ನು ಆತನು ಮಾಡುತ್ತಾನೆ.



## ಆತ್ಮಚರಿತ್ರೆ (ಅಡುಗೆಯವನು) 10

ಅಡುಗೆಯವನು ಅನುದಿನದ ಜೀವನದಲ್ಲಿ ಬಹಳ ಪ್ರಯೋಜನಕಾರಿಯಾಗಿರುವನು. ವಿಶೇಷವಾದ ಸಮಾರಂಭಗಳ ಸಮಯಗಳಲ್ಲಿ ಜನರು ಊಟ ಮಾಡಲು ಹೋಗುತ್ತಾರೆ. ಶಾಲೆಗಳಲ್ಲಿ ಬಿಡುವ ಊಟದ ಸಮಯ ಉನ್ನತವಾದ ಮೌಲ್ಯವನ್ನು ಕಾಪಾಡುವಲ್ಲಿ ದೊಡ್ಡ ಪಾತ್ರವನ್ನು ನಿರ್ವಹಿಸುತ್ತದೆ. ಕ್ರೀಡಾ ತಂಡಗಳು ಮತ್ತು ಮಿಲಿಟರಿಯಲ್ಲಿ ತಮ್ಮ ತಂಡಗಳಿಗೆ ಯಾವಾಗಲೂ ಉತ್ತಮವಾದ ಆಹಾರವನ್ನು ಒದಗಿಸಲಾಗುತ್ತದೆ, ಅವರ ನೈತಿಕತೆ ಮತ್ತು ಆರೋಗ್ಯ ಎರಡಕ್ಕೂ ಅಲ್ಲಿ ಆದ್ಯತೆಯನ್ನು ಕೊಡಲಾಗುತ್ತದೆ.


*ಜವಾಬ್ದಾರಿಕೆಗಳು:* ಅಡುಗೆಯವನು ಯಾವಾಗಲೂ ತನ್ನ ಯಜಮಾನನು ಅಥವಾ ಮ್ಯಾನೇಜರ್ ಆದೇಶದ ಮೇರೆಗೆ ಕಾರ್ಯ ಮಾಡಬೇಕಾಗುತ್ತದೆ. ಅಡುಗೆಯವನು ಬಡಿಸುವ ಕಾರ್ಯಕ್ಕೆ ಮಾತ್ರವೇ ಸೀಮಿತನಾಗಿರುತ್ತಾನೆ ಮತ್ತು ಅಡುಗೆ ಮಾಡಲು ಎಷ್ಟು ಖರ್ಚಾಗುತ್ತದೆ ಎಂದು ಯೋಚಿಸುತ್ತಾನಾದರೂ, ತನ್ನ ಅಡುಗೆಯನ್ನು ಮತ್ತಷ್ಟು ರುಚಿಯಾಗಿ ಮಾಡುವದು ಹೇಗೆ ಎಂಬದಾಗಿಯೂ ಅವನು ಅಧ್ಯಯನ ಮಾಡುತ್ತಾನೆ. ಶುದ್ಧತೆ ಮತ್ತು ಶಿಸ್ತು ಅಡುಗೆಯವನಿಗೆ ಯಾವಾಗಲೂ ಪ್ರಾಮುಖ್ಯವಾಗಿರುತ್ತದೆ.

*ಅವಕಾಶಗಳು:* ಅಡುಗೆಯವನು ಯಾವಾಗಲೂ ಮೆನೂ ಪ್ರಕಾರ ನಡೆದುಕೊಳ್ಳಬೇಕು ಮತ್ತು ಬಜೆಟ್ ಪ್ರಕಾರವೇ ಹಣ ಖರ್ಚು ಮಾಡಬೇಕು, ಆದರೂ ಕ್ರಿಯಾತ್ಮಕತೆಗೆ ಹೆಚ್ಚು ಅವಕಾಶ ಇರುತ್ತದೆ. ಒಂದುವೇಳೆ ನಿಮ್ಮ ಯಜಮಾನನು ಸಮ್ಮತಿಸುವದಾದರೆ, ಹಾಟ್ ಕೇಕ್ ಆರ್ಡರ್ ಮಾಡುವ ಕುಟುಂಬದವರಿಗೆ ಕ್ರಿಯಾತ್ಮಕವಾಗಿ ಸಿದ್ಧಮಾಡಬಹುದು ಅಂದರೆ- ಚಿಟ್ಟೆಗಳು, ದೊಡ್ಡ ಮೀನು, ಇತ್ಯಾದಿ ಆಕಾರಗಳಲ್ಲಿ ಮಾಡಬಹುದು. ತರಕಾರಿಗಳಿಂದ ಸುಂದರವಾದ ಅಲಂಕಾರಗಳು ಅಥವಾ ಮುಖ್ಯ ಪದಾರ್ಥಗಳು ಗ್ರಾಹಕರಿಗೆ ಒಳ್ಳೆಯ ಅನುಭವವನ್ನು ಕೊಡುತ್ತವೆ ಆಗ ಅವರು ಪುನಃ ಬರುತ್ತಾರೆ ಅಥವಾ ತಮ್ಮ ಸ್ನೇಹಿತರಿಗೆ ಹೇಳುತ್ತಾರೆ. ಈ ಕಾರ್ಯಗಳನ್ನು ಮಾಡುವದು ಹೇಗೆ ಎಂದು ನೀವು ಕಲಿತುಕೊಳ್ಳಬಹುದು ಮತ್ತು ಅಡುಗೆಯವನಾಗಿ ನಿಮ್ಮ ಕಾರ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು.


## ಪ್ರಶ್ನೆಗಳು ಮತ್ತು ಉತ್ತರಗಳು 10

1. ದೇವರು ನಿಮಗೆ ಒದಗಿಸಿದ ಸಾಕ್ಷಿ ಏನಾದರು ಇದೆಯೇ? ಇದ್ದರೆ ಹಂಚಿಕೊಳ್ಳಿರಿ. (ಒಟ್ಟಾಗಿ ಹಂಚಿಕೊಳ್ಳಲು ಅವರಿಗೆ ಸಮಯ ಕೊಡಿರಿ).
2. ಕ್ರೈಸ್ತರಾಗಿದ್ದರೂ ನಿಮಗೆ ಹೆಚ್ಚಿನ ಸೌಕರ್ಯಗಳಿರದೆ, ಕ್ರೈಸ್ತರಲ್ಲದಿದ್ದರೂ ಆಸ್ತಿ, ಕಾರುಗಳು, ಒಳ್ಳೆಯ ಬಟ್ಟೆಗಳು ಮತ್ತು ಎಲ್ಲವೂ ಇರುವಂಥ ಜನರನ್ನು ನೀವು ನೋಡಿದ್ದೀರೋ? (ಹೀಗಿರುವಾಗ ದೇವರನ್ನು ಆತುಕೊಳ್ಳುವದು ತಪ್ಪು ಎಂಬ ಆಲೋಚನೆ ನಿಮಗೆ ಬರಬಹುದು, ಆದರೆ ಎಲ್ಲವೂ ಇರುವ ಬಹುತೇಕರಿಗೆ ಸಮಾಧಾನವೇ ಇರುವದಿಲ್ಲವೆಂದು ನೀವು ತಿಳಿದಿರಬೇಕು. ಕೆಲವೊಮ್ಮೆ ಅವರಿಗೆ ಪ್ರೀತಿಯಾಗಲಿ ಸಂತೋಷವಾಗಲಿ ಇರುವದಿಲ್ಲ, ಅವರು ಜನರನ್ನು ಕ್ಷಮಿಸಿರುವದಿಲ್ಲ ಮತ್ತು ಅವರ ಉದ್ದೇಶ ಹಣ ಸಂಪಾದನೆ ಮಾತ್ರವೇ ಆಗಿರುತ್ತದೆ. ಭೂಲೋಕವು ತಾತ್ಕಾಲಿಕ ಮತ್ತು ಪರಲೋಕವು ಭೂಲೋಕದಲ್ಲಿರುವ ಎಲ್ಲವುಗಳಿಗಿಂತ ಸುಂದರ ಎಂಬದನ್ನು ಅವರು ಮನವರಿಕೆ ಮಾಡಿಕೊಳ್ಳುವದಿಲ್ಲ).
3. ಈ ಲೋಕದಲ್ಲಿ ಜೀವಿಸುವ ಎಲ್ಲರಿಗೂ ಸಾಕಾಗುವಷ್ಟು ಊಟ ಮತ್ತು ಹಣ ಯಾಕೆ ಇಲ್ಲ? (ಈ ಪರಿಸ್ಥಿತಿಯ ಬಗ್ಗೆ ಯೋಚನೆ ಮಾಡಲು ನಿಮ್ಮ ವಿದ್ಯಾರ್ಥಿಗಳಿಗೆ ಸಹಾಯ ಮಾಡಿರಿ. ಯಾಕಂದರೆ ನಾವು ಪರಸ್ಪರ ಒಬ್ಬರೊಂದಿಗೊಬ್ಬರು ಹಂಚಿಕೊಳ್ಳುವದನ್ನು ಕಲಿತುಕೊಳ್ಳಬೇಕೆಂದು ದೇವರು ಬಯಸುವವನಾಗಿದ್ದಾನೆ. ಯಾಕಂದರೆ ಇದು ಆದಾಮನೊಂದಿಗೆ ಲೋಕದೊಳಗೆ ಪ್ರವೇಶಿಸಿದ ಪಾಪದ ಭಾಗವಾಗಿದೆ).
4. ನಿಮ್ಮ ಅಚ್ಚುಮೆಚ್ಚಿನ ಆಹಾರ ಯಾವುದು? (ಮಕ್ಕಳ ಪ್ರತಿಕ್ರಿಯೆಗಳನ್ನು ಕೇಳಿಸಿಕೊಳ್ಳಿರಿ).
5. ಈ ವಾರದಲ್ಲಿ ನಿಮಗೆ ಯಾರಾದರು ಸಹಾಯ ಮಾಡುವರು ಎಂದು ನಿಮಗೆ ಅನ್ನಿಸಿದರೆ ಅವರ ಹೆಸರು ಹೇಳಿರಿ ಮತ್ತು ನೀವು ಅವರಿಗೆ ಹೇಗೆ ಸಹಾಯ ಮಾಡುವಿರಿ.

## ಒಗಟಿನ ಉತ್ತರಗಳು 10






## ಆಟ 10

ಪ್ಲಾಸ್ಟಿಕ್ ಲೋಟಗಳಿಂದ ಗೋಪುರ ಕಟ್ಟುವದು

ಆಟವನ್ನು ಏರ್ಪಡಿಸುವ ಮೊದಲು, ಟೇಬಲ್ ಮೇಲೆ ಪ್ಲಾಸ್ಟಿಕ್ ಲೋಟಗಳನ್ನು ಇಡಿರಿ (ಒಂದು ತಂಡಕ್ಕೆ 36 ಪ್ಲಾಸ್ಟಿಕ್ ಲೋಟಗಳು). ಎರಡು ತಂಡಗಳನ್ನು ಮಾಡಿರಿ. ಎರಡು



ತಂಡಗಳಲ್ಲಿ ಸಮಾನ ಸಂಖ್ಯೆಯ ಸದಸ್ಯರಿರಬೇಕು. ಎರಡೂ ತಂಡದವರಿಗೆ ಎತ್ತರದ ಗೋಪುರ ಕಟ್ಟಲು ಒಂದು ನಿಮಿಷ ಸಮಯವನ್ನು ಕೊಡಿರಿ. ಸಮಯ ಮುಗಿದ ನಂತರ ಯಾರು ಎತ್ತರದ ಗೋಪುರವನ್ನು ನಿರ್ಮಿಸಿರುತ್ತಾರೋ ಅವರು ಗೆಲ್ಲುತ್ತಾರೆ.




### ಹೋಮ್ ವರ್ಕ್ 10

ಶಾಲೆಗೆ ಊಟವನ್ನು ಒಂದು ಡಬ್ಬಿಯಲ್ಲಿ ಹೆಚ್ಚಾಗಿಯೇ ತನ್ನಿರಿ ಮತ್ತು ನಿಮಗೆ ಹೆಚ್ಚು ಪರಿಚಯವಿಲ್ಲದವರಿಗೆ ಅಥವಾ ತಿನ್ನಲು ಊಟ ಇಲ್ಲದವರಿಗೆ ಆ ಡಬ್ಬಿಯನ್ನು ಕೊಡಿರಿ.

# ದೇವರಲ್ಲಿ ನಂಬಿಕೆಯುಳ್ಳವರಾಗಿರುವದು 11

## ಯೇಸು ಕ್ರಿಸ್ತನು ಬಿರುಗಾಳಿಯನ್ನು ನಿಲ್ಲಿಸಿದನು: ಲೂಕ 8:22-25



### ನಾಟಕ (ಮೊದಲನೆಯ ಭಾಗ)

ಏಜೆಂಟ್ ತಂಡದವರಿಗೆ ರಸ್ತೆಯಲ್ಲಿ ಎರಡು ಗೂಳಿಗಳಿವೆ ಅವರು ಆ ಮಾರ್ಗವಾಗಿ ಹೋಗುವವರಿಗೆ ಮತ್ತು ಬರುವವರಿಗೆ ಬಹಳ ತೊಂದರೆ ಕೊಡುತ್ತವೆ ಎಂದು ತಿಳಿಸಿದನು. ಅವುಗಳು ವಿಶೇಷವಾಗಿ ನನಗೆ ತೊಂದರೆ ಕೊಡುತ್ತವೆ, ಆದ್ದರಿಂದ ಪ್ರತಿಬಾರಿ ಆ ಮಾರ್ಗವಾಗಿ ಹೋಗುವಾಗಲೂ ನನಗೆ ಬಹಳ ಭಯವಾಗುತ್ತದೆ ಎಂದು ಅವರಿಗೆ ಹೇಳಿದನು. ಅನೇಕ ಸಲ ಅವರು ಓಡಿ ಹೋಗಲು ಪ್ರಯತ್ನಿಸಿದಾಗಲೂ, ಅವುಗಳು ಅವನಿಗಿಂತ ಬಲಿಷ್ಠವಾದ್ದರಿಂದ ಅವನನ್ನು ಬೆನ್ನಟ್ಟಿ ಅವನಿಗೆ ತೊಂದರೆ ಕೊಡುತ್ತವೆ. ಅವನ ಪರಿಸ್ಥಿತಿಯನ್ನು ಕೇಳಿ ತಂಡದವರಿಗೆ ಬಹಳ ಚಿಂತೆಯಾಯಿತು ಮತ್ತು ನಾವು ನಿನಗಾಗಿ ಪ್ರಾರ್ಥನೆ ಮಾಡುತ್ತೇವೆ ಹಾಗೂ ಸಹಾಯ ಮಾಡುವ ಬಗ್ಗೆ ಯೋಚಿಸುತ್ತೇವೆ ಎಂದು ಹೇಳಿದರು. ನಂತರ ಅವರು ತಮ್ಮ ಮುಂದಿನ ಕಾರ್ಯಕ್ಕಾಗಿ ಟೈಮ್ ಮಿಷನ್ ಹತ್ತಿದರು.

### ಪಾಠ 11

ನಿಮಗೆ ಎಂದಾದರು ಅಪಾಯಕಾರಿ ಪರಿಸ್ಥಿತಿ ಎದುರಾಗಿದೆಯೇ? ನೀವು ಎಂದಾದರು ಹೆದರಿಕೊಂಡಿದ್ದೀರೋ? ಒಂದುದಿನ ಶಿಷ್ಯರು ದೋಣಿಯಲ್ಲಿ ಪ್ರಯಾಣಿಸುವಾಗ ದೊಡ್ಡ ಬಿರುಗಾಳಿ ಬಂದದ್ದರಿಂದ ಬಹಳವಾಗಿ ಹೆದರಿಕೊಂಡರು.

ಲೂಕ 8:22-25 ಓದಿರಿ

ಬಿರುಗಾಳಿ ಮಧ್ಯದಲ್ಲಿ, ತಮ್ಮ ಜೊತೆಯಲ್ಲಿ ಯಾರಿದ್ದಾರೆ ಎಂಬದನ್ನು ಶಿಷ್ಯರು ಮನವರಿಕೆ ಮಾಡಿಕೊಳ್ಳಲಿಲ್ಲ. ವಾತಾವರಣ, ಬಿರುಗಾಳಿ ಮತ್ತು ಅಲೆಗಳ ಮೇಲೆ ಸಂಪೂರ್ಣ ಅಧಿಕಾರವಿರುವ ಯೇಸು ಕ್ರಿಸ್ತನು ಅವರೊಂದಿಗಿದ್ದನು. ನೀರನ್ನು ನಿಮ್ಮ ಕೈಗಳಲ್ಲಿ ಹಿಡಿದುಕೊಳ್ಳಲು ನಿಮ್ಮಿಂದ ಸಾಧ್ಯವೇ? ನಮಗೆ ಅಸಾಧ್ಯ ಆದರೆ ದೇವರು ಸರ್ವಶಕ್ತನು.

ಯೇಸು ಕ್ರಿಸ್ತನು ದೋಣಿಯಲ್ಲಿ ನಿದ್ದೆ ಮಾಡುತ್ತಿದ್ದ ಹಾಗೆ ನಾವು ದೇವರನ್ನು ಭರವಸೆಯನ್ನಿಟ್ಟು ವಿಶ್ರಮಿಸಿಕೊಳ್ಳಬಹುದು. ಇದರ ಅರ್ಥ ನಮ್ಮ ಜೀವಿತದಲ್ಲಿ ಕೆಟ್ಟ ಪರಿಸ್ಥಿತಿ ಬರುವದೇ ಇಲ್ಲ ಎಂಬದಾಗಿಯಲ್ಲ. ಆ ದೋಣಿಯೊಳಗಿದ್ದ ಶಿಷ್ಯರಲ್ಲಿ ಒಬ್ಬನನ್ನು ಬಿಟ್ಟು ಉಳಿದವರೆಲ್ಲರೂ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ಕಾರಣ ಕೊಲ್ಲಲ್ಪಟ್ಟರು. ಇದು ಒಳ್ಳೆಯ ಸಂಗತಿಯಲ್ಲ. ಆದರೆ ಏನೇಆಗಲಿ ಅಥವಾ ನಾವು ಎಂಥಾ ಪರಿಸ್ಥಿತಿಯಲ್ಲಿಯೇ ಇರಲಿ, ದೇವರಲ್ಲಿ ಭರವಸೆಯನ್ನಿಡಬಹುದು ಮತ್ತು ವಿಶ್ರಮಿಸಿಕೊಳ್ಳಬಹುದು ಯಾಕಂದರೆ ಆತನು ಕೆಟ್ಟ ಕಾರ್ಯಗಳನ್ನು ಸೇರಿ ಎಲ್ಲವುಗಳನ್ನು ನಿಯಂತ್ರಿಸುವಾತನಾಗಿದ್ದಾನೆ. ಆತನು ಯಾವ ಸಮಯದಲ್ಲಾದರೂ ಯಾವ ರೀತಿಯ ಕೆಟ್ಟ ಪರಿಸ್ಥಿತಿಯನ್ನಾದರೂ ಸರಿಪಡಿಸುವಾತನಾಗಿದ್ದಾನೆ. ಒಂದುವೇಳೆ ಕೆಟ್ಟ ಪರಿಸ್ಥಿತಿಯಲ್ಲಿ ಸರಿಪಡಿಸಲು ಆತನಿಂದ ಆಗದೆ ಹೋದರೆ, ಆತನು ಅದರ ಮೂಲಕವಾಗಿಯೇ ಏನೋ ಒಳಿತನ್ನು ಮಾಡುವನು ಎಂಬದಾಗಿ ನಾವು ಆತನಲ್ಲಿ ಭರವಸೆಯನ್ನಿಡಬಹುದು. ಇದಲ್ಲದೆ ಏನೇ ಆದರೂ ನಾನು ನಿಮ್ಮೊಂದಿಗಿರುವೆನು ಎಂದು ದೇವರು ನಮಗೆ ವಾಗ್ದಾನ ಮಾಡಿದ್ದಾನೆ. ನಾವು ಬಿರುಗಾಳಿಯಲ್ಲಿ ಸಿಲುಕುವಾಗಲೂ, ಶಿಷ್ಯರೊಂದಿಗೆ ದೋಣಿಯಲ್ಲಿದ್ದ ಹಾಗೆ ನಮ್ಮೊಂದಿಗಿರುವನು ಎಂದು ನಾವು ತಿಳಿದುಕೊಳ್ಳಬಹುದು. ಇದಲ್ಲದೆ ನಾವು ಯೇಸು ಕ್ರಿಸ್ತನಲ್ಲಿ ನಮ್ಮ ನಂಬಿಕೆಯನಿಡುವಾಗ, ಅತನ ಕರಗಳಲ್ಲಿ ಸುರಕ್ಷಿತರಾಗಿರುವೆವು ಮತ್ತು ಆತನೊಂದಿಗೆ ಪರಲೋಕದಲ್ಲಿ ಶಾಶ್ವತವಾಗಿ ಜೀವಿಸುವೆವು.

ಯೇಸು ಕ್ರಿಸ್ತನು ಬಿರುಗಾಳಿಯಲ್ಲಿ ಶಾಂತಪಡಿಸಿದ ನಂತರ, ಶಿಷ್ಯರಿಗೆ ಯೇಸು ಕ್ರಿಸ್ತನನ್ನು ನೋಡಿ ಬಹಳ ಭಯವಾಯಿತು. ದೇವರು ಎಷ್ಟು ದೊಡ್ಡವನು ಮತ್ತು ಶಕ್ತನು ಎಂಬದು ನಮಗೆ ಅರಿವಾಗುವಾಗ ಮತ್ತು ಆತನು ನಮ್ಮನ್ನು ಎಷ್ಟು ಹೆಚ್ಚಾಗಿ ಪ್ರೀತಿಸವನು ಎಂದು ತಿಳಿಯುವಾಗ, ಬೇರೆ ಯಾವುದಕ್ಕೂ ನಾವು ಹೆದರುವದಿಲ್ಲ.

## ಕಂಠಪಾಠ ವಚನ 11

ಧರ್ಮೋಪದೇಶಕಾಂಡ 31:8 "ಸರ್ವೇಶ್ವರ ತಾವೇ ನಿನ್ನ ಮುಂದುಗಡೆ ಹೋಗುವರು; ಅವರೇ ನಿನ್ನ ಸಂಗಡ ಇರುವರು; ನಿನ್ನನ್ನು ಅಪಜಯಕ್ಕೆ ಗುರಿಪಡಿಸುವುದೇ ಇಲ್ಲ, ಕೈಬಿಡುವುದಿಲ್ಲ. ಅಂಜಬೇಡ; ಧೈರ್ಯದಿಂದಿರು," ಎಂದು ಹೇಳಿದನು."

## ನಾಟಕ (ಭಾಗ ಎರಡು)

ತಮ್ಮ ಕಾರ್ಯದಿಂದ ಹಿಂದಿರುಗಿ ಬಂದ ನಂತರ, ತಾವು ಕಂಡ ಕಾರ್ಯಗಳಿಗೆ ಬಹಳ ಆಶ್ಚರ್ಯಪಟ್ಟರು. ಯೇಸು ಕ್ರಿಸ್ತನು ಮತ್ತು ಶಿಷ್ಯರೊಂದಿಗೆ ದೋಣಿಯೊಳಗಿದ್ದು ಗಾಳಿ ಮತ್ತು ಅಲೆಗಳು ಯೇಸು ಕ್ರಿಸ್ತನು ವಿಧೇಯವಾದದ್ದನ್ನು ಕಂಡು ಅವರ ನಂಬಿಕೆ ಬಹಳವಾಗಿ ಹೆಚ್ಚಳವಾಯಿತು. ಏಜೆಂಟ್ ಗೆ ರಸ್ತೆಯಲ್ಲಿ ತನಗೆ ತೊಂದರೆ ಕೊಡುತ್ತಾ ಇದ್ದ ಗೂಳಿಗಳು ದೇವರಿಗಿಂತ ಬಲಿಷ್ಟವಲ್ಲ ಎಂಬದು ಅರಿವಾಯಿತು. ದೇವರು ಯಾವಾಗಲೂ ನಿನ್ನ ಸಂಗಡ ಇದ್ದಾನೆ ಎಂದು ತಂಡದವರು ಅವನನ್ನು ಪ್ರೋತ್ಸಾಹಪಡಿಸಿದರು. ಯೇಸು ಕ್ರಿಸ್ತನು ದೋಣಿಯೊಳಗೆ ಮಲಗಿದ್ದ ಹಾಗೆಯೇ, ಏಜೆಂಟ್ ಗೂಳಿಗಳನ್ನು ಮತ್ತು ಕೆಟ್ಟ ಹೆಸರಿನಿಂದ ಜನರು ಅವನನ್ನು ಕರೆಯುವದನ್ನು ಲಕ್ಷ್ಯಕ್ಕೆ ತಂದುಕೊಳ್ಳಲಿಲ್ಲ ಯಾಕಂದರೆ ಇಡೀ ಲೋಕದ ಪಾಲಕನಾದ ಯೇಸು ಕ್ರಿಸ್ತನು ಅವನನ್ನು ಪ್ರೀತಿಸುವವನಾಗಿದ್ದನು. ಏಜೆಂಟ್ ಅಲ್ಲಿಂದ ತನ್ನ ಮನೆಗೆ ಹೋದನು. ಅದಾದ ಕೆಲವು ನಿಮಿಷಗಳ ಬಳಿಕ, ತಾನು ಗೂಳಿಗಳಿಗೆ ಲಕ್ಷ್ಯ ಕೊಡಲಿಲ್ಲ ಅವುಗಳು ನನಗೆ ಯಾವ ತೊಂದರೆಯು ಮಾಡಲಿಲ್ಲವೆಂದು ನಾಯಕನಿಗೆ ಸಂದೇಶವನ್ನು ಕಳುಹಿಸಿದನು.

## ನ್ಯಾಯ 11

ಆತನಲ್ಲಿ ನಂಬಿಕೆಯಿಡುವ ನಿಮ್ಮನ್ನು ದೇವರು ಎಂದಿಗೂ ಕೈಬಿಡದ ಮತ್ತು ತೊರೆಯದ ಹಾಗೆ ಆತನಲ್ಲಿ ನಂಬಿಕೆಯಿಡುವ ಇತರರು ನಿಮ್ಮ ಮಾತುಗಳನ್ನೆಲ್ಲಾ ಕೇಳದೆ ಹೋದರೂ ಆತನು ಅವರನ್ನು ಕೈಬಿಡುವದಿಲ್ಲ ತೊರೆಯುವದೂ ಇಲ್ಲ. ನಾವು ಒಪ್ಪಿಕೊಳ್ಳದ ವಿಷಯಗಳಿಗೆ ಲಕ್ಷ್ಯ ಕೊಡುವ ಬದಲು, ದೇವರು ಇತರರ ಜೀವಿತಗಳಲ್ಲಿ ಹೇಗೆ ಕಾರ್ಯಮಾಡುತ್ತಾ ಇದ್ದಾನೆ ಎಂಬದನ್ನು ನಾವು ಗಮನಿಸೋಣ.

## ಆತ್ಮಚರಿತ್ರೆ (ತಾಯಿ) 11


ಮಕ್ಕಳನ್ನು ಬೆಳೆಸಲು ದೇವರು ತಾಯಂದಿರನ್ನು ಪ್ರಮುಖವಾಗಿ ಉಪಯೋಗಿಸಿಕೊಳ್ಳುತ್ತಾನೆ. ಅವರು ಮಗುವಿನ ಜೀವಿತದ ಎಲ್ಲಾ ವಿಷಯಗಳನ್ನು ಕಲಿಸುತ್ತಾರೆ ಆದ್ದರಿಂದ ಮಗು ಬೆಳೆಯುತ್ತದೆ ಮತ್ತು ಸಮಾಜದಲ್ಲಿ ಜೀವಿಸುವದು ಹೇಗೆ ಎಂಬದನ್ನು ಕಲಿತುಕೊಳ್ಳುತ್ತದೆ. ಯೇಸು ಕ್ರಿಸ್ತನು ತಾನೇ ಈ ಲೋಕದಲ್ಲಿ ಮಗುವಾಗಿ ಜನಿಸಿ ಬರಲು ತೀರ್ಮಾನಿಸಿದಾಗ, ತನ್ನನ್ನು ಬೆಳೆಸಲು ಆತನು ವಿಶೇಷವಾದ ತಂಡವನ್ನು ರೂಪಿಸಿಕೊಳ್ಳಲಿಲ್ಲ-ಆತನು ತಾಯಿಯನ್ನು ಆರಿಸಿಕೊಂಡನು.

*ಜವಾಬ್ದಾರಿಕೆಗಳು:* ತಾಯಂದಿರು ತಾವು ಜನ್ಮ ಕೊಡುವ ಮಗುವನ್ನು ಚಿಕ್ಕಂದಿನಿಂದ ಅವರು ದೊಡ್ಡವರಾಗುವ ತನಕ ಬೆಳೆಸುತ್ತಾರೆ ಮತ್ತು ಅವರಿಗೆ ಸಲಹೆಗಳನ್ನು ಕೊಡುವ ಮೂಲಕ ತಮ್ಮ ಜವಾಬ್ದಾರಿಕೆಯನ್ನು ಮುಂದುವರೆಸುತ್ತಾರೆ. ಜೀವನದಲ್ಲಿ ಸಮಾಧಾನ, ಹೋರಾಟಗಳು, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವದು ಅಥವಾ ದುರಂತಗಳು

ಎದುರಾಗುವಾಗ ನಿಜವಾದ ಸವಾಲುಗಳು ನಮಗೆ ಬರುತ್ತವೆ. ಏನೇ ಆದರೂ ತಾಯಂದಿರು ತಾಯಂದಿರಾಗಿರುವದನ್ನು ಮುಂದುವರೆಸಬೇಕು.

*ಅವಕಾಶಗಳು:* ತಾಯಂದಿರಿಗೆ ತಮ್ಮ ಮಗುವಿನೊಂದಿಗೆ ಅಥವಾ ಮಕ್ಕಳೊಂದಿಗೆ ವಿಶೇಷವಾದ ಸಂಬಂಧವಿರುತ್ತದೆ, ತಾವು ಯಾವ ರೀತಿಯ ವ್ಯಕ್ತಿಯನ್ನು ಬೆಳೆಸುತ್ತಾ ಇದ್ದೇವೆ ಎಂಬದನ್ನು ಅವರು ಕಲಿತುಕೊಳ್ಳುತ್ತಾರೆ. ಇದರಿಂದ ವಿವಿಧ ರೀತಿಯ ತರಬೇತಿ, ವಿವಿಧ ರೀತಿಯ ಕ್ರೀಡೆ ಇತ್ಯಾದಿಗಳಿಗೆ ಅವಕಾಶ ಸಿಗುತ್ತದೆ ಯಾಕಂದರೆ ಮಕ್ಕಳಲ್ಲಿ ವಿವಿಧ ರೀತಿಯ ವ್ಯಕ್ತಿತ್ವಗಳು ನೆಲೆಯಾಗಿರುತ್ತವೆ. ನೀವು ಮಕ್ಕಳನ್ನು ಜೀವದ ಮಾರ್ಗದಲ್ಲಿ ನಡೆಸುವವರಾಗಿರಬೇಕು.


## ಪ್ರಶ್ನೆಗಳು ಮತ್ತು ಉತ್ತರಗಳು 11




1. ನಮ್ಮ ಜೀವಿತದಲ್ಲಿ ಕೆಟ್ಟ ಘಟನೆಗಳು ಸಂಭವಿಸಲು ದೇವರು ಯಾಕೆ ಅನುಮತಿಸುತ್ತಾನೆ? (ದೇವರು ನಮ್ಮ ಆತ್ಮ ಮತ್ತು ಪ್ರಾಣದ ಬಗ್ಗೆ ಹೆಚ್ಚು ಯೋಚಿಸುತ್ತಾನೆ ಆದ್ದರಿಂದ ಅನೇಕ ಕೆಟ್ಟ ಘಟನೆಗಳು ನಿಜವಾಗಿಯೂ ಕೆಟ್ಟವುಗಳಲ್ಲ ಬದಲಾಗಿ ನಮ್ಮ ಹಿತಕ್ಕಾಗಿಯೇ ನಮಗೆ ಸಂಭವಿಸುತ್ತವೆ. ಇದಲ್ಲದೆ ನಾವು ಜೀವಿಸುತ್ತಿರುವ ಲೋಕವು ಪಾಪದಿಂದ ತುಂಬಿದೆ ಮತ್ತು ದೇವರು ಸೈತಾನನಿಗೆ ಭೂಲೋಕದಾದ್ಯಂತ ತಿರುಗುವ ಅವಕಾಶ ಕೊಟ್ಟಿದ್ದಾನೆ ಎಂಬದನ್ನು ನಾವು ಮನವರಿಕೆ ಮಾಡಿಕೊಳ್ಳಬೇಕು. ಆದ್ದರಿಂದ ಮರಣ, ಯುದ್ಧಗಳು, ಭೂಕಂಪಗಳು, ವಿಕೋಪಗಳು ಮತ್ತು ಅನೇಕ ಜನರು ಕೆಟ್ಟ ಕಾರ್ಯಗಳನ್ನು ಮಾಡುವಂಥದ್ದು ಹಾಗೂ ಕ್ರೈಸ್ತರು ಇತರರ ಹಾಗೆ ತೊಂದರೆಗಳಿಗೆ ಒಳಗಾಗುವದನ್ನು ನಾವು ನೋಡುತ್ತೇವೆ).
2. ನೀವು ಎಂದಾದರು ಹೆದರಿಕೊಂಡಿದ್ದೀರೋ? (ನೀವು ಯಾವುದಾದರು ಪರಿಸ್ಥಿತಿಯಲ್ಲಿ ಹೆದರಿಕೊಂಡಿದ್ದೀರೋ ಎಂದು ಚರ್ಚಿಸಿರಿ ಅಂದರೆ ಶಿಷ್ಯರು ಬಿರುಗಾಳಿಗೆ ಸಿಕ್ಕಿಕೊಂಡಂಥ ಪರಿಸ್ಥಿತಿ ನಿಮಗೆ ಎದುರಾಗಿದೆಯೇ ಯೋಚಿಸಿರಿ. ಕಷ್ಟದ ಪರಿಸ್ಥಿತಿಗಳಲ್ಲಿ ಅಂದರೆ ಅವುಗಳನ್ನು ನೋಡಲು ನಿಮ್ಮಿಂದ ಆಗದೆ ಇರುವಂಥ ಪರಿಸ್ಥಿತಿಗಳಲ್ಲಿಯೂ ದೇವರು ನಿಮ್ಮ ಸಂಗಡ ಇರುವನು ಎಂದು ಮಕ್ಕಳಿಗೆ ಜ್ಞಾಪಕಪಡಿಸಿರಿ).
3. ಕಷ್ಟದ ಪರಿಸ್ಥಿತಿಗಳು ಎದುರಾಗುವಾಗ, ಪ್ರಯತ್ನಿಸುವದನ್ನು ನಿಲ್ಲಿಸುವಾಗ ಮತ್ತು ದೇವರಿಗೂ ನಿಮ್ಮ ಸಮಸ್ಯೆಯನ್ನು ಒಪ್ಪಿಸದೆ ಇರುವಾಗ, ದೃಢವಾಗಿ ಹೇಗೆ ನಿಲ್ಲುವಿರಿ? (ಶೋಧನೆಗಳು, ಕಷ್ಟದ ಪರಿಸ್ಥಿತಿಗಳು ನಮ್ಮ ಜೀವಿತದಲ್ಲಿ ನಮಗೆ ಎದುರಾಗುತ್ತವೆ, ಆಗ ನಾನು ಒಂಟಿಯಲ್ಲ ಎಂದು ನೀವು ನೆನಪು ಮಾಡಿಕೊಳ್ಳಬೇಕು, ನನ್ನ ಜೀವನದಲ್ಲಿ ಎದುರಾಗುವ ಪರಿಸ್ಥಿತಿಗಳನ್ನು ನಿಭಾಯಿಸಿಕೊಳ್ಳಲು ನನ್ನಿಂದ ಆಗುವದಿಲ್ಲವೆಂದು ದೃಢಪಡಿಸಿಕೊಳ್ಳಬೇಕು. ದೊಡ್ಡ ಬಿರುಗಾಳಿಯನ್ನು ಕಂಡು ಶಿಷ್ಯರು ಹೆದರಿಕೊಂಡರು ಆದರೆ ಯೇಸು ಕ್ರಿಸ್ತನು ಬಿರುಗಾಳಿಯನ್ನು ಶಾಂತಪಡಿಸಿದಾಗ ಸಮಾಧಾನವು ನೆಲೆಸಿತು. ಇದೇ ಪ್ರಕಾರ, ನಿಮ್ಮ ಜೀವಿತದಲ್ಲಿಯೂ ಕಷ್ಟದ ಪರಿಸ್ಥಿತಿಗಳು ಬರಬಹುದು, ಆದರೆ ಯೇಸು ಕ್ರಿಸ್ತನು ನಿಮ್ಮ ಜೀವಿತದಲ್ಲಿ ಇರುವದಾದರೆ ಸಮಾಧಾನವು ನಿಮಗೆ ದೊರೆಯುವದೆಂದು ನೀವು ತಿಳಿದಿರಬೇಕು).
4. ಯಾವ ಪ್ರಾಣಿ ನಿಮ್ಮನ್ನು ಹೆದರಿಸುತ್ತದೆ? (ಪರಸ್ಪರ ಹೇಳಿಕೆಗಳನ್ನು ಕೇಳಿಸಿಕೊಳ್ಳಿರಿ).
5. ನಿಮ್ಮ ಹೃದಯದಲ್ಲಿ ಧೈರ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು ಯಾವ ಕಾರ್ಯಗಳನ್ನು ನೀವು ಅಭ್ಯಾಸ ಮಾಡಬಹುದು? (ಉತ್ತರಗಳನ್ನು ಕೊಡುವ ಮೊದಲು ತಮ್ಮ ಸ್ವಂತ ಆಲೋಚನೆಗಳ ಯೋಚಿಸಲು ವಿದ್ಯಾರ್ಥಿಗಳಿಗೆ ಅವಕಾಶ ಕೊಡಿರಿ. ಜನರೊಂದಿಗೆ ತಮ್ಮ ನಂಬಿಕೆಯನ್ನು ಸ್ವಲ್ಪಸ್ವಲ್ಪವಾಗಿ ಹಂಚಿಕೊಳ್ಳಲು ಕೆಲವು ಆಲೋಚನೆಗಳು

6. ಪೂರ್ವಭಾವಿಯಾಗಿರಬೇಕು. ಒಂದುವೇಳೆ ಭಯಹುಟ್ಟಿಸುವಂಥದ್ದಾದರೂ ದೇವರ ಸೇವೆ ಮಾಡಲು ದೊರೆಯುವ ಅವಕಾಶಗಳನ್ನು ಅಂಗೀಕರಿಸಿಕೊಳ್ಳುವ ಬಗ್ಗೆ ಅವರು ಮೊದಲೇ ತೀರ್ಮಾನಿಸಿಕೊಂಡವರಾಗಿರಬೇಕು. ಧೈರ್ಯಕ್ಕೆ ನಡೆಸುವ ನಂಬಿಕೆಯನ್ನು ಕಟ್ಟಲು, ಸತ್ಯವೇದ ಓದುತ್ತಾ, ಪ್ರಾರ್ಥನೆ ಮಾಡುತ್ತಾ, ದೇವರನ್ನು ಸ್ತುತಿಸುತ್ತಾ, ಇತರರ ಸಾಕ್ಷಿಗಳನ್ನು ಕೇಳಿಸಿಕೊಳ್ಳುತ್ತಾ ಮತ್ತು ನಿಮ್ಮ ಜೀವಿತದಲ್ಲಿ ದೇವರು ಮಾಡಿರುವ ಕಾರ್ಯಗಳನ್ನು ನೆನಪು ಮಾಡಿಕೊಳ್ಳುತ್ತಾ ಅಥವಾ ಬರೆದುಕೊಳ್ಳುತ್ತಾ ನೀವು ಸಮಯವನ್ನು ಕಳೆಯಬಹುದು).

## ಒಗಟಿನ ಉತ್ತರಗಳು 11






## ಆಟ 11

ಒಂದುವೇಳೆ ಎಂದು ವಾಕ್ಯವನ್ನು ಹೇಳಿರಿ . . .

ಒಂದುವೇಳೆ ಎಂದು ವಾಕ್ಯವನ್ನು ಹೇಳಿರಿ . . . ಇಂದು ಬೆಳಗ್ಗೆ ತಿಂಡಿ ತಿಂದಿರಾ, ನಿನ್ನೆ ರಾತ್ರಿ ಸ್ನಾನ ಮಾಡಿದಿರಾ, ನಿಮ್ಮ ಕಣ್ಣುಗಳು ಕಂದು ಬಣ್ಣದವುಗಳಾಗಿವೆ, ನಿಮಗೆ ಕಾಯಿಪಲ್ಯ ಇಷ್ಟವೇ, ನಿಮ್ಮ ಹಾಸಿಗೆಯನ್ನು ಮಡಚಿದಿರಾ, ನಿಮಗೆ ಸಹೋದರಿ ಇದ್ದಾಳೆಯೇ, ನೀವು ಕೆಂಪು ಬಟ್ಟೆ ಹಾಕಿದ್ದೀರೇ ಇತ್ಯಾದಿ. ಇದು ಅನೇಕ ಸಲ ವಾಕ್ಯವನ್ನು ಹೇಳುವ ಸುಲಭ ವಿಧಾನವಾಗಿದ್ದು ಮಕ್ಕಳು ಕಂಠಪಾಠ ಮಾಡಲು ಸಹಾಯ ಮಾಡುತ್ತದೆ.






## ಹೋಮ್ ವರ್ಕ್ 11

ಯಾರಾದರೂ ಹೆದರಿಕೆಯುಂಟು ಮಾಡುವ ಅಥವಾ ಕಠಿಣವಾದ ಕೆಲಸವನ್ನು ಮಾಡುತ್ತಾ ಇದ್ದರೆ ಸ್ವೇಚ್ಛೆಯಿಂದ ಅವರೊಂದಿಗೆ ಹೋಗಿರಿ.

# ಯೇಸು ಕ್ರಿಸ್ತನು ಯಾರು? 12

## ನಾನು ಯಾರೆಂದು ನೀವು ಹೇಳುತ್ತೀರಿ? ಮತ್ತಾಯ 16:13-20



### ನಾಟಕ (ಮೊದಲನೆಯ ಭಾಗ)

ಈ ವಾರ ತನಿಖಾಧಿಕಾರಿಯು ಗೊಂದಲದಲ್ಲಿದ್ದಾಳೆ. ಬಹಳ ವಿನಯ, ದೀನತೆ ಮತ್ತು ಸಂತೋಷವಾಗಿರುವ ಒಬ್ಬ ವ್ಯಕ್ತಿಯನ್ನು ಆಕೆ ಭೇಟಿ ಮಾಡಿದಳು ಆದರೆ ಆ ವ್ಯಕ್ತಿ ಬೇರೆ ಧರ್ಮದವನಾಗಿದ್ದನು. ಆಕೆಗೆ ಬಹಳ ಗೊಂದಲವಾಯಿತು ಯಾಕಂದರೆ, ಧರ್ಮದ ವ್ಯತ್ಯಾಸದ ಹೊರತಾಗಿ, ಆ ವ್ಯಕ್ತಿಯಲ್ಲಿ ಒಬ್ಬ ಕ್ರೈಸ್ತನಲ್ಲಿರುವ ಎಲ್ಲಾ ಗುಣಗಳೂ ಇದ್ದವು. ಆದ್ದರಿಂದ ಆಕೆ ಕ್ರೈಸ್ತತ್ವದಿಂದಾಗುವ ವ್ಯತ್ಯಾಸ ಏನು ಎಂಬ ಆಶ್ಚರ್ಯದಲ್ಲಿ ತನ್ನ ಗೊಂದವನ್ನು ನಾಯಕ ಮತ್ತು ಏಜೆಂಟ್ ಸಂಗಡ ಹಂಚಿಕೊಂಡಳು. ತಮ್ಮ ಕಾರ್ಯಕ್ಕೆ ಹೋಗುವ ಮೊದಲು ಉತ್ತರ ಹೇಳಬಾರದೆಂದು ನಾಯಕ ತೀರ್ಮಾನಿಸಿದನು ಯಾಕಂದರೆ ಅವರು ಪ್ರಾಮುಖ್ಯವಾದ ವಿಷಯಕ್ಕಾಗಿ ಅಂದು ಸಮಯದ ಹಿಂದೆ ಪ್ರಯಾಣಿಸುವವರಾಗಿದ್ದರು. ಅವರು ಮಷಿನ್ ಹತ್ತಿ ಯೇಸು ಕ್ರಿಸ್ತನನ್ನು ಹಾಗೂ ಆತನ ಶಿಷ್ಯರನ್ನು ನೋಡಲು ಹೊರಟರು.

### ಪಾಠ 12

ಯೆಹೂದ್ಯರು ಅತ್ಯಂತ ಪರಿಣಾಮಕಾರಿ ಜನರಾಗಿದ್ದರು ಆದರೆ ಜನರು ವೈರಿಗಳಿಂದ ಬಾಧಿಸಲ್ಪಟ್ಟು ಅಲ್ಲಲ್ಲಿ ಚದುರಿಹೋಗಿದ್ದರು ಮತ್ತು ಅವರ ಸಂಪತ್ತನ್ನು ಇತರರು ಅಪಹರಿಸಿದ್ದರು. ಆದರೆ ದೇವರು ಅವರಿಗೆ ನಿಮಗೆ ಸಹಾಯ ಮಾಡಲು ಒಬ್ಬನು ಬರುವನು ಎಂದು ವಾಗ್ದಾನ ಮಾಡಿದನು, ಆತನನ್ನು ಮೆಸ್ಸೀಯ ಎಂದು ಕರೆಯುವರು. ಸಹಜವಾಗಿ ಯೆಹೂದ್ಯರು ತಮ್ಮ ದೇಶದಿಂದ ಅತಿಕ್ರಮಣಕಾರರನ್ನು ಓಡಿಸಿ ತಮ್ಮನ್ನು ರಕ್ಷಿಸಿ ಒಬ್ಬ ವೀರ ಯೋಧ ಬರುವನು ಎಂಬದಾಗಿ ಯೋಚಿಸಿದರು. ಆದರೆ ಯೇಸು ಕ್ರಿಸ್ತನು ಅಂಥವನಿಗಿಂತಲೂ ಹೆಚ್ಚಿನವನಾಗಿ ಬಂದನು. ಅವರ ದೇಶ ಮತ್ತು ಆಸ್ತಿಯನ್ನು ಕಾಪಾಡುವ ಬದಲು, ಆತನು ಅವರ ಹೃದಯಗಳನ್ನು ಕಾಪಾಡಲು ಬಂದನು!

ಮತ್ತಾಯ 16:13-20 ಓದಿರಿ

ಯೇಸು ಕ್ರಿಸ್ತನು ಪ್ರವಾದಿ ಎಂದು ಜನರು ಹೇಳುತ್ತಾ ಇದ್ದರು. ನಾನು ಯಾರೆಂದು ನಿಮಗೆ ಅನ್ನಿಸುತ್ತದೆ ಹೇಳಿರಿ ಎಂದು ಯೇಸು ಕ್ರಿಸ್ತನು ತನ್ನ ಸ್ನೇಹಿತರನ್ನು ಕೇಳಿದನು. ಯೇಸು ಕ್ರಿಸ್ತನು ಜೀವಿಸುವ ದೇವರ ಮಗನಾಗಿರುವ ಮೆಸ್ಸೀಯನು ಮತ್ತು ಇಸ್ರಾಯೇಲ್ಯರ ಬಿಡುಗಡೆದಾಯಕನು ಎಂದು ಪೇತ್ರನು ಸರಿಯಾಗಿ ಹೇಳಿದನು! ಈ ಹೇಳಿಕೆಯು ಬಂಡಯಾಗಿದೆ ಅಂದರೆ ಹೊಸ ಸಭೆಯ ಅಡಿಪಾಯವಾಗಿದೆ ಎಂದು ಯೇಸು ಕ್ರಿಸ್ತನು ಅದಕ್ಕೆ ಉತ್ತರಿಸಿದನು.

ಯೇಸು ಕ್ರಿಸ್ತನು ನಿಮಗೆ ಯಾರಾಗಿದ್ದಾನೆ? ಆತನು ಸತ್ಯವೇದದಲ್ಲಿ ಬರುವ ಪ್ರವಾದಿ ಅಥವಾ ಉತ್ತಮ ಬೋಧಕನಾಗಿದ್ದಾನೆಯೇ? ಅಥವಾ ಆತನು ದೇವಕುಮಾರನಾಗಿದ್ದು ನಿಮ್ಮನ್ನು ನಿಮ್ಮ ಪಾಪಗಳಿಂದ ಬಿಡಿಸಲು ಹಾಗೂ ನಿಮಗೆ ಉತ್ತಮವಾದ ಹೊಸ ಜೀವವನ್ನು ಕೊಡಲು ಬಂದವನಾಗಿದ್ದಾನೆಯೇ?

ಯೋಹಾನ 3:16 ಹೇಳುವದೇನೆಂದರೆ "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು."

ಯೇಸು ಕ್ರಿಸ್ತನು ಯಾರೆಂದು ನಾವು ಅರ್ಥಮಾಡಿಕೊಳ್ಳಬೇಕು ಮತ್ತು ಆತನಲ್ಲಿ ನಂಬಿಕೆಯನ್ನಿಡಬೇಕು ಎಂದು ಬಯಸುತ್ತಾನೆ ಆಗ ಆತನು ನಮಗೆ ಉತ್ತಮವಾದವುಗಳನ್ನು ಕೊಡುತ್ತಾನೆ!

### 🌎 ಕಂಠಪಾಠ ವಚನ 12

ಯೊವಾನ್ನ 3:16 “ದೇವರು ಲೋಕವನ್ನು ಎಷ್ಟಾಗಿ ಪ್ರೀತಿಸಿದರೆಂದರೆ ತಮ್ಮ ಏಕೈಕ ಪುತ್ರನನ್ನೇ ಧಾರೆಯೆರೆದರು; ಆತನಲ್ಲಿ ವಿಶ್ವಾಸವಿಟ್ಟ ಯಾರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂಬುದೇ ದೇವರ ಉದ್ದೇಶ”

### 🌎 ನಾಟಕ (ಎರಡನೇ ಭಾಗ)

ತಮ್ಮ ಕಾರ್ಯದಿಂದ ಹಿಂದಿರುಗಿ ಬಂದ ನಂತರ, ತನಿಖಾಧಿಕಾರಿಯು ತಾವು ಕಂಡದ್ದನ್ನು ತಂಡದವರೊಂದಿಗೆ ಚರ್ಚಿಸಿದಳು. ಯೇಸು ಕ್ರಿಸ್ತನಲ್ಲಿರುವ ಧರ್ಮಗಳ ನಡುವೆಯ ವ್ಯತ್ಯಾಸವನ್ನು ಆಕೆ ತಿಳಿದುಕೊಂಡಳು ಏನೆಂದರೆ ಆತನು ದೇವಕುಮಾರನು, ನಮಗಾಗಿ ಪಾಣ ಕೊಟ್ಟನು ಮತ್ತು ಆತನು ಮಾತ್ರವೇ ನಮ್ಮನ್ನು ಪರಲೋಕಕ್ಕೆ ನಡೆಸುವ ಮಾರ್ಗವಾಗಿದ್ದಾನೆ ಹಾಗೂ ನಿಜವಾದ ದೇವರೊಂದಿಗೆ ಜೀವಿಸಲು ನಿತ್ಯಜೀವವನ್ನು ಕೊಡುತ್ತಾನೆ. ಇತ್ತೀಚಿಗೆ ತಾನು ಭೇಟಿಯಾದ ವ್ಯಕ್ತಿಯೊಂದಿಗೆ ಯೇಸು ಕ್ರಿಸ್ತನ ಬಗ್ಗೆ ಹಂಚಿಕೊಳ್ಳುವ ಅವಕಾಶಕ್ಕಾಗಿ ಕಾಯುತ್ತಾಳೆ ಯಾಕಂದರೆ ಹೊರಗಿನಿಂದ ಎಲ್ಲವೂ ಸರಿಯಾಗಿ ಕಂಡರೂ, ಅವನು ರಕ್ಷಣೆ ಹೊಂದಬೇಕಾದರೆ ಯೇಸು ಕ್ರಿಸ್ತನನ್ನು ಅರಿಯಬೇಕು.

### 🌎 ನ್ಯಾಯ 12

ಯೋಹಾನ 3:16 ಹೇಳುವದೇನೆಂದರೆ ದೇವರು ನಮ್ಮನ್ನು ಬಹಳವಾಗಿ ಪ್ರೀತಿಸಿ ತನ್ನ ಒಬ್ಬನೇ ಮಗನನ್ನು ನಮಗಾಗಿ ಕೊಟ್ಟನು! ನಾವು ಆತನ ಮಾದರಿಯನ್ನು ಅನುಸರಿಸೋಣ ಮತ್ತು ಇತರರಿಗೆ ಏನು ಮಾಡುತ್ತಾ ಇದ್ದೇವೆ ಎಂದು ಪರೀಕ್ಷಿಸಿಕೊಳ್ಳೋಣ.


### 🌎 ಆತ್ಮಚರಿತ್ರೆ (ಸಂಡೇ ಸ್ಕೂಲ್ ಟೀಚರ್) 12

ನಂಬಿಕೆಯಲ್ಲಿ ಬೆಳೆಯುವ ಸಲುವಾಗಿ ಪ್ರಮುಖವಾದ ವಿಷಯಗಳನ್ನು ತಿಳಿದುಕೊಳ್ಳುವಂತೆ ಮಕ್ಕಳಿಗೆ ಸಹಾಯ ಮಾಡುವ ಸಲುವಾಗಿ ಸಭಾಪಾಲಕ ಅಥವಾ ಸಭೆಯ ಆಡಳಿತವು ಸಂಡೇ ಸ್ಕೂಲ್ ಟೀಚರ್ ಅನ್ನು ನೇಮಕ ಮಾಡುತ್ತಾರೆ.

*ಜವಾಬ್ದಾರಿಕೆಗಳು:* ಸಂಡೇ ಸ್ಕೂಲ್ ಟೀಚರ್ ತರಗತಿಯನ್ನು ಏನು ನಡೆಸಬೇಕು ಎಂಬದನ್ನು ತಿಳಿದುಕೊಳ್ಳಬೇಕು ಅಥವಾ ಕಲಿತುಕೊಳ್ಳಬೇಕು, ವಿದ್ಯಾರ್ಥಿಗಳಿಗಾಗಿ ಪಠ್ಯ ಪುಸ್ತಕಗಳನ್ನು ಸಿದ್ಧವಾಗಿಟ್ಟುಕೊಂಡಿರಬೇಕು ಮತ್ತು ಸುಗಮವಾಗಿ ಸಂಡೇ ಸ್ಕೂಲ್ ನಡೆಸಲು ಇತರೆ ಸಿಬ್ಬಂದಿಗಳೊಂದಿಗೆ ಕಾರ್ಯ ಮಾಡಬೇಕು.


*ಅವಕಾಶಗಳು:* ಮಕ್ಕಳು ಆತ್ಮೀಕವಾಗಿ ಹೇಗಿದ್ದಾರೆ ಎಂಬ ವಿವೇಚನೆಯೊಂದಿಗೆ ಸಂಡೇ ಸ್ಕೂಲ್ ಟೀಚರ್ ಕಲಿಕಾ ಶೈಲಿಗಳನ್ನು ಉಪಯೋಗಿಸಬೇಕು ಮತ್ತು ಅವರ ಬೆಳವಣಿಗೆಗೆ ಸಹಾಯ ಮಾಡಬೇಕು. ಟೀಚರ್ ಮಕ್ಕಳಲ್ಲಿ ದರ್ಶನಗಳನ್ನು ಹುಟ್ಟಿಸಬೇಕು-ಇಂದು ಸಾಧಾರಣವೆನಿಸುವ ಮಾರ್ಗಗಳನ್ನು ಅನುಸರಿಸುವದರಿಂದ ಭವಿಷ್ಯದ ಆಗಬಹುದಾದ ಫಲಿತಾಂಶಗಳ ಬಗ್ಗೆ ಯೋಚಿಸುವಂತೆ ಮಾಡಬೇಕು. ಕೆಲವು ಸಂದರ್ಭಗಳಲ್ಲಿ, ಲೌಕಿಕ ಶಾಲೆಗಳು ತಮ್ಮ ಶಾಲೆಗಳಲ್ಲಿ ಆತ್ಮೀಕ ಕಾರ್ಯಗಳಿಗೆ ಅವಕಾಶ ಕೊಡುವದಿಲ್ಲ, ಆದ್ದರಿಂದ ಮಕ್ಕಳ ಶಿಕ್ಷಣಕ್ಕೆ ಸಹಾಯವಾಗುವ ರೀತಿಯಲ್ಲಿ ಸಂಡೇ ಸ್ಕೂಕ್ ಟೀಚರ್ ಕಾರ್ಯಮಾಡಬೇಕು.

## ಪ್ರಶ್ನೆಗಳು ಮತ್ತು ಉತ್ತರಗಳು 12




1. ಭವಿಷ್ಯದಲ್ಲಿ ಯಾವ ರೀತಿ ದೇವರ ಸೇವೆ ಮಾಡಲು ನೀವು ಬಯಸುತ್ತೀರಿ? (ಈ ವಿಷಯದ ಬಗ್ಗೆ ಚರ್ಚಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಪಡಿಸಿರಿ. ದೇವರು ಪ್ರತಿಯೊಬ್ಬರಿಗೆ ವಿವಿಧ ವರಗಳನ್ನು ಕೊಡುತ್ತಾನೆ ಎಂಬದನ್ನು ಮರೆಯಬೇಡಿರಿ).
2. ಯೇಸು ಕ್ರಿಸ್ತನು ಬಗ್ಗೆ ನೀವು ನಂಬುವ ವಿಷಯಗಳು ನಿಮಗೆ ಎಲ್ಲಿಂದ ಗೊತ್ತಾದವು? ಸಂಪ್ರದಾಯದಿಂದ, ಬೋಧಕ ಅಥವಾ ಅಧ್ಯಾಪಕ ಹೇಳಿದ ಮಾತುಗಳಿಂದ ಅಥವಾ ದೇವರೊಂದಿಗೆ ನಿಮಗಿರುವ ವೈಯಕ್ತಿಕ ಅನುಭವದಿಂದ ಬಂದಿದೆಯೇ? (ದುಃಖದ ವಿಷಯವೆಂದರೆ ಸಭೆಗೆ ಬರುವ ಬಹುತೇಕ ಮಕ್ಕಳು ನಾವು ದೇವರನ್ನು ನಂಬುತ್ತೇವೆ ಎಂದು ಹೇಳುತ್ತಾರೆ ಆದರೆ ಅವರಿಗೆ ಯೇಸು ಕ್ರಿಸ್ತನೊಂದಿಗೆ ವೈಯಕ್ತಿಕವಾದ ಯಾವ ಅನುಭವವೂ ಇರುವದಿಲ್ಲ. ಸಭೆಯಲ್ಲಿ ಕ್ರೈಸ್ತನಾಗಿರುವದು, ಆತ್ಮೀಕನೆಂದು ಹೇಳಿಕೊಳ್ಳುವದು ಮತ್ತು ನಿಮ್ಮ ಸುತ್ತಮುತ್ತಲು ಇರುವ ಜನರೆದುರು ಸಂಪ್ರದಾಯದಿಂದ ನಡೆದುಕೊಳ್ಳುವದು ಸುಲಭ. ಆದರೆ ದಾರಿಯಲ್ಲಿ, ಕೆಲಸದ ಸ್ಥಳದಲ್ಲಿ, ನಾವು ಹೋಗುವ ಎಲ್ಲಾ ಕಡೆಗಳಲ್ಲಿ ದೇವರು ನಮಗೆ ನಮ್ಮ ಜೀವನದ ದೊಡ್ಡ ಪಾಠಗಳನ್ನು ಕಲಿಸುತ್ತಾನೆ. ಇಂಥ ಪರಿಸ್ಥಿತಿಗಳಲ್ಲಿ ಯೇಸು ಕ್ರಿಸ್ತನನ್ನು ವೈಯಕ್ತಿಕವಾಗಿ ತಿಳಿದುಕೊಳ್ಳಲು ನಮಗೆ ಸಾಧ್ಯವಾಗುತ್ತದೆ).
3. ವೈಯಕವಾಗಿ, ಯೇಸು ಕ್ರಿಸ್ತನ ಬಗ್ಗೆ ನೀವು ನಂಬುವದೇನು? (ಅತ್ಯಂತ ಪ್ರಾಮುಖ್ಯವಾದ ಕಾರ್ಯವೇನೆಂದರೆ ಆತನು ನಿಮ್ಮ ರಕ್ಷಕನೆಂದು ನೀವು ನಂಬುವಿರಿ, ವೈಯಕ್ತಿಕವಾಗಿ ಆತನ ಬಗ್ಗೆ ನಿಮಗೆ ತಿಳುವಳಿಕೆ ಇರುತ್ತದೆ ಮತ್ತು ಸಭೆಯಲ್ಲಿ ಕಾಣಿಸಿಕೊಂಡರೆ ಸಾಕು ಎಂಬ ಭಾವನೆ ಇರುವದಿಲ್ಲ).
4. ಯೇಸು ಕ್ರಿಸ್ತನ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳಲು ಎಲ್ಲಿ ಸಾಧ್ಯ ಎಂದು ನಿಮಗೆ ಅನ್ನಿಸುತ್ತದೆ? (ನಾವು ಸಹಜವಾಗಿ ಸಭೆಯ ಬಗ್ಗೆ ಯೋಚಿಸುತ್ತೇವೆ, ಆದರೆ ಸತ್ಯವೇದವನ್ನು ಓದುವಾಗ ಮತ್ತು ಆತನೊಂದಿಗೆ ವೈಯಕ್ತಿಕ ಸಂಬಂಧವುಳ್ಳವರಾಗಿರುವಾಗ ಯೇಸು ಕ್ರಿಸ್ತನ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಓದುವದು ಮತ್ತು ವಿಧೇಯತೆ ಆಳವಾದ ತಿಳುವಳಿಕೆಗೆ ನಡೆಸುತ್ತದೆ, ಅದರಿಂದ ದೇವರ ಮೇಲೆ ಹೆಚ್ಚಿನ ಪ್ರೀತಿ ಉಂಟಾಗುತ್ತದೆ, ಹಾಗೂ ಇದರಿಂದ ಹೆಚ್ಚಿನ ಓದುವಿಕೆ ಹಾಗೂ ವಿಧೇಯತೆ ಉಂಟಾಗುತ್ತದೆ).
5. ನಿಮ್ಮ ಜೀವನದ ಬಗ್ಗೆ ಯೇಸು ಕ್ರಿಸ್ತನನ್ನು ಏನಾದರೂ ಕೇಳುವ ಅವಕಾಶ ನಿಮಗೆ ದೊರೆತರೆ ನೀವು ಏನು ಕೇಳುವಿರಿ? (ಯೇಸು ಕ್ರಿಸ್ತನಿಗೆ ನಮ್ಮ ಬಗ್ಗೆ ಎಲ್ಲವೂ ಗೊತ್ತು ಎಂಬದನ್ನು ಮರೆಯಬೇಡಿರಿ. ಕೆಲವೊಮ್ಮೆ ನಮ್ಮ ಜೀವನದ ನಮಗೆ ಕೆಲವು ಸಂದೇಹಗಳಿರುತ್ತವೆ ಅಥವಾ ಕೆಲವು ಕಾರ್ಯಗಳು ಯಾಕೆ ಸಂಭವಿಸುತ್ತವೆ ಎಂದು ನಾವು ಯೋಚಿಸುತ್ತೇವೆ. ಮಕ್ಕಳು ತಮ್ಮ ಉತ್ತರಗಳನ್ನು ಹೇಳಲಿ. ದೇವರು ನಿಮ್ಮ ಮಾತುಗಳನ್ನು ಕೇಳಿಸಿಕೊಳ್ಳುತ್ತಾನೆ ಮತ್ತು ನಿಮ್ಮ ಪ್ರಶ್ನೆಗಳಿಗೆ ವಿವಿಧ ರೀತಿಯಲ್ಲಿ ಉತ್ತರಿಸುತ್ತಾನೆ ಎಂದು ಅವರಿಗೆ ಹೇಳಿರಿ).

## ಒಗಟಿನ ಉತ್ತರಗಳು 12






## ಆಟ 12

ಟಂಬ್ಲರ್ ಬಲೂನ್



ಆಟ ಪಾರಂಭಿಸುವ ಮೊದಲು 15 ಪ್ಲಾಸ್ಟಿಕ್ ಲೋಟಗಳನ್ನು ಟೇಬಲ್ ಅಂಚಿನಲ್ಲಿ ಸಾಲಾಗಿ ಇಡಬೇಕು. ಗಡಿಯಾರವು ಚಲಿಸುವಾಗ ಆಟಗಾರನಿಗೆ ಕೊಡಲಾಗುವ 60 ಸೆಕೆಂಡುಗಳಲ್ಲಿ ಅವನು ಬಲೂನಿಗೆ ಗಾಳಿ ಊದಬೇಕು ಮತ್ತು ಟೇಬಲಿನ ಮತ್ತೊಂದು ಕಡೆಯಿಂದ ಬಲೂನಿಗೆ ಊದಿರುವ ಗಾಳಿಯ ಮೂಲಕ ಪ್ಲಾಸ್ಟಿಕ್ ಲೋಟಗಳನ್ನು ಕೆಳಗೆ ಬೀಳಿಸಬೇಕು. ಗುರಿ ತಲುಪುವ ಸಲುವಾಗಿ ಬಲೂನನ್ನು ಎಷ್ಟು ಸಲ ಬೇಕಾದರೂ ಗಾಳಿಯಿಂದ ತುಂಬಿಸಬಹುದು. ಟೇಬಲ್ ಮೇಲೆ ಒಂದುವೇಳೆ ಯಾವುದಾದರೂ ಲೋಟ ಸಮಯ ಮುಗಿದ ನಂತರ ಹಾಗೆಯೇ ಉಳಿದಿದ್ದರೆ ಆಟವಾಡುತ್ತಿದ್ದ ಮಗು ಸೋತಂತೆ, ನಂತರ ಮತ್ತೊಬ್ಬ ಮಗುವಿಗೆ ಅವಕಾಶವನ್ನು ಕೊಡಬೇಕು. ನೀವು ಎರಡು ತಂಡಗಳನ್ನು ಮಾಡಬಹುದು (ಹುಡುಗರ ಮತ್ತು ಹುಡುಗಿಯರ ತಂಡ) ಮತ್ತು ಇಬ್ಬಿಬ್ಬರನ್ನು ಆಡಿಸಿ ಯಾರು ಮೊದಲು ಎಲ್ಲಾ ಲೋಟಗಳನ್ನು ಬೀಳಿಸುತ್ತಾರೆ ಎಂದು ಗುರುತಿಸಬಹುದು.




## ಹೋಮ್ ವರ್ಕ್ 12

ಯೇಸು ಕ್ರಿಸ್ತನ ಬಗ್ಗೆ ತಿಳಿದುಕೊಳ್ಳಬೇಕಾಗಿರುವ ವ್ಯಕ್ತಿಯನ್ನು ಆರಿಸಿರಿ ಮತ್ತು ಆತನಿಗಾಗಿ ಸಮಯವನ್ನು ಬೇರ್ಪಡಿಸಿ ಪ್ರತಿದಿನ ಆತನಿಗಾಗಿ ಪ್ರಾರ್ಥನೆ ಮಾಡಿರಿ. ನಂತರ ಅವರಿಗಾಗೊಂದು ಸಣ್ಣ ಉಡುಗೊರೆಯನ್ನು ಖರೀದಿಸಿರಿ ಮತ್ತು ಕೊಡಿರಿ. ಅವರಿಗೆ ಯೇಸು ಕ್ರಿಸ್ತನ ಬಗ್ಗೆ ಹೇಳಿ ಸಂಡೇ ಸ್ಕೂಲಿಗೆ ಬನ್ನಿರಿ ಎಂದು ಆಹ್ವಾನಿಸಿರಿ.

# ಯೇಸು ಕ್ರಿಸ್ತನು ಶಕ್ತಿಯನ್ನು ಪ್ರದರ್ಶಿಸಿದನು 13

**ಲಾಜರನು: ಯೋಹಾನ 11:32-44**



### ನಾಟಕ (ಮೊದಲನೇ ಭಾಗ)

ಏಜೆಂಟ್ ತನ್ನ ತಂಡದವರಿಗೆ ನಿನ್ನೆ ದಿನ ಬಹಳ ಬೇಸರವಾಗಿತ್ತು ಎಂದು ಹೇಳಿದನು. ಎಲ್ಲವೂ ತಪ್ಪಾಗಿಯೇ ನಡೆಯುತ್ತಾ ಇತ್ತು, ನೆಲದ ಮೇಲೆ ಊಟ ಚೆಲ್ಲಿ ಹೋಯಿತು, ಪ್ರಮುಖವಾದ ಹಾಳೆಯ ಮೇಲೆ ಜೂಸ್ ಚೆಲ್ಲಿತು, ಅನಿರೀಕ್ಷಿತವಾಗಿ ತಲೆಗೆ ಏಟಾಯಿತು . . . ಅವನು ಹಾಳೆಯನ್ನು ಬದಲಾಯಿಸಲು ಅಂಗಡಿಗೆ ಹೋದಾಗ ಜೋರಾಗಿ ಮಳೆ ಸುರಿಯಿತು ಆದ್ದರಿಂದ ಅವನು ಹತ್ತಿರದ ಅಂಗಡಿಯ ಬಳಿಗೆ ಓಡಿ ಹೋಗಲು ಬಯಸಿದನು. ಆದರೆ ಓಡುವಾಗ ಅವನ ಕಾಲು ಜಾರಿ ಬಿದ್ದು ಅವನ ಎಡಗಾಲಿನ ಚಪ್ಪಲಿ ಕಿತ್ತು ಹೋಗಿತ್ತು. ಅಂದು ಅವನಿಗೆ ಬಹಳ ಘೋರವಾದ ದಿನವೆನಿಸಿತು. ಅಷ್ಟರೊಳಗೆ, ಕೆಲವು ವಾರಗಳ ಹಿಂದೆ ಅವನು ಹೇಳುತ್ತಿದ್ದ ವೈರಿ ಆ ಅಂಗಡಿಯ ಬಳಿಗೆ ಬಂದನು ಆದರೆ ಅವನ ಬಲಿಗಾಲಿನ ಚಪ್ಪಲಿ ಕಿತ್ತು ಹೋಗಿತ್ತು. ಆಗ ಏಜೆಂಟ್ ಗೆ ಅವರಿಬ್ಬರೂ ಒಂದೇ ರೀತಿಯ ಚಪ್ಪಲಿ ಹಾಕಿಕೊಂಡಿರುವದು ಗೊತ್ತಾಯಿತು, ಆದ್ದರಿಂದ ತನ್ನ ಕಾಲಿನಲ್ಲಿದ್ದ ಚಪ್ಪಲಿಯನ್ನು ತೆಗೆದು ಅವನಿಗೆ ಕೊಟ್ಟನು. ಆಶ್ಚರ್ಯದಿಂದ ಅವನು ಚಪ್ಪಲಿಯನ್ನು ತೆಗೆದುಕೊಂಡನು ಮತ್ತು ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸಿದನು. ಕ್ರಮೇಣವಾಗಿ ಅವರು ದೇವರ ಬಗ್ಗೆ ಮಾತನಾಡಲು ಪ್ರಾರಂಭಿಸಿದರು. ಏಜೆಂಟ್ ಗೆ ಹೆಚ್ಚಿನ ವಿಷಯಗಳು ಗೊತ್ತಿಲ್ಲದೆ ಇದ್ದರೂ, ಯೇಸು ಕ್ರಿಸ್ತನ ಬಗ್ಗೆ ಹೇಳಲು ಬಹಳವಾಗಿ ಪ್ರಯತ್ನಿಸಿದನು. ಮಳೆ ನಿಂತ ಮೇಲೆ, ಏಜೆಂಟ್ ಬಳಿಯಲ್ಲಿ ಚಪ್ಪಲಿ ಇರಲಿಲ್ಲ, ತಲೆ ಬಹಳವಾಗಿ ನೋಯಿತ್ತಾ ಇತ್ತು ಆದರೂ ಅವನು ಹಾಳೆಯನ್ನು ಖರೀದಿಸಬೇಕಾಗಿತ್ತು. ಆದರೂ ಅವನು ಎಲ್ಲವುಗಳ ಹೊರತಾಗಿಯೂ ಬಹಳ ಸಂತೋಷವಾಗಿದ್ದನು. ತಂಡದವರು ಕಥೆಯನ್ನು ಕೇಳಿ ಸಂತೋಷಿಸಿದರು ಮತ್ತು ಯೇಸು ಕ್ರಿಸ್ತನನ್ನು ನೋಡಲು ಸಮಯದ ಹಿಂದೆ ಪ್ರಯಾಣಿಸಿದರು.

### ಪಾಠ 13

ಯೇಸು ಕ್ರಿಸ್ತನಿಗೆ ಕೆಲವು ಸ್ನೇಹಿತರಿದ್ದರು. ಲಾಜರನು, ಮರಿಯಳು ಮತ್ತು ಮಾರ್ಥಳು ಆತನಿಗೆ ಪ್ರಿಯ ಸ್ನೇಹಿತರಾಗಿದ್ದರು. ಆದರೆ ಲಾಜರನು ಅಸ್ವಸ್ಥತೆಯಿಂದ ಸತ್ತು ಹೋದನು. ಲಾಜರನನ್ನು ಸಮಾಧಿ ಮಾಡಿದ ಬೆಥಾನ್ಯದಲ್ಲಿದ್ದ ಅವನ ಕುಟುಂಬದವರನ್ನು ನೋಡಲು ಯೇಸು ಕ್ರಿಸ್ತನು ಅಲ್ಲಿಗೆ ಹೋದನು.

ಯೋಹಾನ 11:32-44 ಓದಿರಿ

ಯೇಸು ಕ್ರಿಸ್ತನು ಒಂದುವೇಳೆ ಅಲ್ಲಿ ಇದ್ದಿದ್ದರೆ ಲಾಜರನು ಸಾಯುತ್ತಿರಲಿಲ್ಲ ಎಂಬದು ಅವನ ಇಬ್ಬರು ಸಹೋದರಿಯರ ನಂಬಿಕೆಯಾಗಿತ್ತು. ಆತನು ಅನೇಕರನ್ನು ರಕ್ಷಿಸಿದ್ದ ಹಾಗೆಯೇ ಲಾಜರನನ್ನು ಸಹ ರಕ್ಷಿಸುತ್ತಾ ಇದ್ದನು ಎಂಬದು ಅವರ ಯೋಚನೆಯಾಗಿತ್ತು. ಆದರೆ ಯೇಸು ಕ್ರಿಸ್ತನ ಯೋಚನೆಯೇ ಬೇರೆಯಾಗಿತ್ತು.

ಯೇಸು ಕ್ರಿಸ್ತನು ತನಗೆ ಅನಾರೋಗ್ಯದ ಮೇಲೆ ಅಧಿಕಾರವಿದೆ ಎಂಬದನ್ನು ತೋರಿಸುವ ಸಲುವಾಗಿ ಅನೇಕ ರೋಗಿಗಳನ್ನು ಗುಣಪಡಿಸಿದ್ದನು, ಆದರೆ ಈಗ ತನಗೆ ಮರಣದ ಮೇಲೆಯೂ ಅಧಿಕಾರವಿದೆ ಎಂಬದನ್ನು ಆತನು ತೋರಿಸುವವನಾಗಿದ್ದನು!!

ಅದ್ಭುತಕಾರ್ಯವನ್ನು ಮಾಡುವ ಮೊದಲು, ಲಾಜರನ ಮೃತದೇಹದಿಂದ ದುರ್ವಾಸನೆ ಬರುತ್ತದೆ ಎಂದು ಮಾರ್ಥಳು

ಹೇಳಿದಳು. ಆಕೆ ಇನ್ನು ನಂಬುವವಳಾಗಿರಲಿಲ್ಲ. ಆದರೆ ಆಗ, ಯೇಸು ಕ್ರಿಸ್ತನು ಲಾಜರನನ್ನು ಕರೆದನು ಮತ್ತು ಅವನು ಸಮಾಧಿಯಿಂದ ನಡೆದುಕೊಂಡು ಹೊರಗೆ ಬಂದನು!! ಆಹಾ ಎಂಥಾ ಸಂತೋಷದ ದಿನ!

ದೇವರು ಸಹಜವಾಗಿ ನಾವು ನಿರೀಕ್ಷೆ ಮಾಡದ ರೀತಿಯಲ್ಲಿ ಕಾರ್ಯಮಾಡುತ್ತಾನೆ. ಆತನು ತನ್ನ ರೀತಿಯಲ್ಲಿ ಕಾರ್ಯಮಾಡಲು ನಾವು ಆತನಿಗೆ ಅವಕಾಶ ಕೊಡಬೇಕು. ದೇವರು ನಮ್ಮ ಜೀವಿತದಲ್ಲಿ ಯಾವುದೋ ಕಾರ್ಯ ಮಾಡಿದ ಮಾತ್ರವೇ, ಆತನು ಬೇರೆಯವರ ಜೀವಿತದಲ್ಲಿಯೂ ಅದನ್ನೇ ಮಾಡುವನು ಎಂದು ಅದರ ಅರ್ಥವಲ್ಲ. ಆದರೆ ದೇವರು ಏನೇ ಕಾರ್ಯ ಮಾಡುವ ಆಯ್ಕೆ ಮಾಡಿದರೂ ಅಥವಾ ಮಾಡದಿದ್ದರೂ, ಆತನು ಎಲ್ಲವುಗಳ ಮೇಲೆ ಅಧಿಕಾರವುಳ್ಳವನು ಎಂದು ನಾವು ಭರವಸೆಯಿಡಬೇಕು ಹಾಗೂ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ನಮಗೆ ನಿತ್ಯಜೀವ ದೊರೆಯುತ್ತದೆ.

### ಕಂಠಪಾಠ ವಚನ 13

ಯೊವಾನ್ನ 11:25 "ಯೇಸು, ಅವಳಿಗೆ, "ಪುನರುತ್ಥಾನವೂ ಜೀವವೂ ನಾನೇ; ನನ್ನಲ್ಲಿ ವಿಶ್ವಾಸವಿಟ್ಟವನು ಸಾವಿಗೀಡಾದರೂ ಜೀವಿಸುವನು"

### ನಾಟಕ (ಎರಡನೇ ಭಾಗ) 13

ತಮ್ಮ ಕಾರ್ಯದಿಂದ ಹಿಂದಿರುಗಿ ಬಂದ ನಂತರ, ನಾವು ಊಹಿಸದ ರೀತಿಯಲ್ಲಿ ದೇವರು ಹೇಗೆ ಕಾರ್ಯಮಾಡುತ್ತಾನೆ ಎಂಬದನ್ನು ಅವರು ಚರ್ಚಿಸಿದರು ಅಂದರೆ ಏಜೆಂಟ್ ಎದುರಿಸಿದ ಕೆಟ್ಟ ದಿನವೂ ಯೇಸು ಕ್ರಿಸ್ತನ ಬಗ್ಗೆ ತನ್ನ ವೈರಿಗೆ ಹೇಳಲು ಸಹಾಯ ಮಾಡಿತು. ಏಜೆಂಟ್ ಅವರಿಗೆ ಇನ್ನು ಮೇಲೆ ಅವನನ್ನು ನನ್ನ ವೈರಿ ಎಂದು ಕರೆಯಬೇಡಿರಿ ಎಂದು ಹೇಳಿದನು ಯಾಕಂದರೆ ಅವನು ಇನ್ನು ಮೇಲೆ ಅವನನ್ನು ವೈರಿ ಎಂದು ಪರಿಗಣಿಸುತ್ತಾ ಇರಲಿಲ್ಲ. ಈಗ ಅವರು ಸ್ನೇಹಿತರಾಗಿದ್ದಾರೆ.

### ನ್ಯಾಯ 13

ಜನರಿಗೆ ಸಹಾಯ ಮಾಡಲು ದೇವರು ನಮ್ಮ ಮೂಲಕ ಕಾರ್ಯಮಾಡಬೇಕೆಂದು ಬಯಸುತ್ತಾನೆ. ದೇವರು ಬಯಸುವ ರೀತಿಯಲ್ಲಿ ಕಾರ್ಯಮಾಡಲು ಆತನಿಗೆ ಎಚ್ಚರಿಕೆಯಿಂದ ಅವಕಾಶವನ್ನು ಕೊಡೋಣ.

### ಆತ್ಮಚರಿತ್ರೆ (ಕಸ ಆಯುವವನು) 13


ಕಸ ಆಯುವವನು ಪಟ್ಟಣವನ್ನು ಶುದ್ಧವಾಗಿಡಲು ಮತ್ತು ಪ್ರಾಣಿಗಳಿಂದ ಯಾವುದೇ ಕಾಯಿಲೆ ಹರಡುವದನ್ನು ತಡೆಯಲು ಕಾರ್ಯಮಾಡುತ್ತಾನೆ. ಅವನು ಯಾವಾಗಲೂ ಜನರ ಸಂಗಡ ಕೆಲಸ ಮಾಡಬೇಕಾಗುತ್ತದೆ: ಅವನು ಪಟ್ಟಣದ ಜನರ ನಡುವೆಯೇ ಇರಬೇಕಾಗುತ್ತದೆ. ಅವನ ಕೆಲಸದ ಅವಧಿ ಅಧಿಕವಾಗಿರುತ್ತದೆ ಮತ್ತು ಅವನು ಕೆಲವೊಮ್ಮೆ ತಡರಾತ್ರಿಯ ತನಕ ಅಥವಾ ವಾರಾಂತ್ಯಗಳಲ್ಲಿಯೂ ಕೆಲಸ ಮಾಡಬೇಕಾಗುತ್ತದೆ.

*ಜವಾಬ್ದಾರಿಕೆಗಳು:* ಕಸ ಆಯುವವನು ತನ್ನನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಪಟ್ಟಣಕ್ಕಾಗಿ ಅಥವಾ ಕಂಪನಿಗಾಗಿ ಕೆಲಸ ಮಾಡುತ್ತಾನೆ. ಸಮಯ ಪಾಲನೆ ಮತ್ತು ಕೆಲಸದ ಅವಧಿ ಮುಗಿಯುವಾಗ ಮನೆಗೆ ಹೋಗಬೇಕೇ ಹೊರತು ಸುಮ್ಮನೆ ಹಾಗೆ ಹೋಗಬಾರದು. ಅವನು ತನ್ನ ಜೊತೆಯಲ್ಲಿರುವವರೊಂದಿಗೆ ಸರಿಯಾಗಿ ನಡೆದುಕೊಳ್ಳಬೇಕು ಮತ್ತು ತನ್ನ ಪಟ್ಟಣದ ಜನರನ್ನು ಆದರಿಸಬೇಕು.

*ಅವಕಾಶಗಳು:* ಕಸ ಆಯುವವನಿಗೆ ತನ್ನ ಪಟ್ಟಣದಲ್ಲಿರುವ ಎಲ್ಲರನ್ನು ಭೇಟಿ ಮಾಡುವ ಅವಕಾಶ ದೊರೆಯುವದರಿಂದ, ಅವಶ್ಯಕತೆಯಲ್ಲಿರುವವರಿಗಾಗಿ ಪ್ರಾರ್ಥನೆ ಮಾಡುವ, ದುಃಖದಲ್ಲಿರುವವರನ್ನು ಸಂತೈಸುವ ಮತ್ತು ಕುಗ್ಗಿದವರನ್ನು ಪ್ರೋತ್ಸಾಹಪಡಿಸುವ ಅವಕಾಶವೂ ಹೆಚ್ಚಾಗಿರುತ್ತದೆ. ಇದರಲ್ಲಿ ಅವನ ತಂಡದ ಸದಸ್ಯರೂ ಇರುತ್ತಾರೆ. ಅವಕಾಶ ಇರುವಾಗ ಅವನು ಹೆಚ್ಚಿನದಾಗಿಯೂ ಸಹಾಯ ಮಾಡಬಹುದು ಮತ್ತು ತನ್ನ ಕೆಲಸಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು.


## ಪ್ರಶ್ನೆಗಳು ಮತ್ತು ಉತ್ತರಗಳು 13


1. ದೇವರಿಂದ ಮಾಡಲು ಆಗದೆ ಇರುವಂಥ ಕಾರ್ಯಗಳು ಏನಾದರೂ ಇವೆಯೇ? (ಇಲ್ಲ, ಸತ್ಯವೇದವು ಹೇಳುವದೇನೆಂದರೆ ದೇವರು ಸರ್ವಶಕ್ತನು, ಎಲ್ಲವನ್ನು ನೋಡುವಾತನು, ಅರ್ಥಮಾಡಿಕೊಳ್ಳುವಾತನು, ಪ್ರಾರಂಭದಿಂದ ಇಂದಿನ ತನಕ ಹಾಗೂ ಭವಿಷ್ಯದ ಎಲ್ಲಾ ವಿಷಯಗಳು ಆತನಿಗೆ ಗೊತ್ತು. ದೇವರಿಗೆ ಅಸಾಧ್ಯವಾದದ್ದು ಒಂದೂ ಇಲ್ಲ).
2. ನೀವು ಎಂದಾದರು ಅದ್ಭುತಕಾರ್ಯವನ್ನು ನೋಡಿದ್ದೀರೋ? (ನಿಮ್ಮ ವಿದ್ಯಾರ್ಥಿಗಳು ಸಣ್ಣದಾಗಲಿ ಅಥವಾ ದೊಡ್ಡದಾಗಲಿ ಯಾವುದಾದರು ಅದ್ಭುತಕಾರ್ಯವನ್ನು ನೋಡಿದ್ದರೆ ಅವುಗಳನ್ನು ಹಂಚಿಕೊಳ್ಳಲು ಅವರಿಗೆ ಅವಕಾಶ ಕೊಡಿರಿ. ಒಂದುವೇಳೆ ವೈಯಕ್ತಿಕ ಸಾಕ್ಷಿ ಏನಾದರು ಇದ್ದರೆ ಅದನ್ನು ಹಂಚಿಕೊಳ್ಳಿರಿ. ಆ ಅದ್ಭುತಕಾರ್ಯಗಳು ಅವಕಾಶಗಳಾಗಿರಬಹುದು, ಯಾರಾದರೂ ಸುವಾರ್ತೆಗೆ ತಮ್ಮ ಹೃದಯವನ್ನು ತೆರೆದಿರಬಹುದು, ಸ್ವಸ್ಥರಾಗಿರಬಹುದು, ಅವರ ಸ್ವಭಾವಗಳು ಬದಲಾಗಿರಬಹುದು ಅಥವಾ ದೇವರು ಅವರನ್ನು ಸಂರಕ್ಷಿಸಿರಬಹುದು).




3. ದೇವರು ನನ್ನನ್ನು ಯಾಕೆ ಉಂಟುಮಾಡಿದ್ದಾನೆ? (ದೇವರ ಪ್ರೀತಿ, ಆತನ ಸೇವೆ ಮಾಡಲು ದೊರೆಯುವ ಅವಕಾಶ ಮತ್ತು ದೇವರಿಗೆ ನಿಮ್ಮ ವರಗಳು, ತಲಾಂತುಗಳು, ಅಭಿರುಚಿ ಹಾಗೂ ಗುಣಗಳು ಎಲ್ಲವೂ ಹೇಗೆ ಗೊತ್ತು ಎಂಬದರ ಬಗ್ಗೆ ಮಾತನಾಡಿರಿ).
4. ಯೇಸು ಕ್ರಿಸ್ತನು ಬದುಕಿಸಿದ ನಂತರ ಲಾಜರನು ಹೇಗೆ ಕಂಡನು ಎಂದು ನಿಮಗೆ ಅನ್ನಿಸುತ್ತದೆ? (ಸಂತೋಷವುಳ್ಳವನಾಗಿದ್ದನೇ, ಆಶ್ಚರ್ಯಪಟ್ಟನೇ, ಆಯಾಸಗೊಂಡಿದ್ದನೇ, ವಿವಿಧ ಉತ್ತರಗಳನ್ನು ಕೊಟ್ಟನೆ ಮತ್ತು ಅವನಿಗೆ ಹೇಗೆ ಆಗಿರಬಹುದು ಎಂದು ಮಕ್ಕಳೇ ಹೇಳಲಿ).
5. ನಿಮ್ಮ ಜೀವಿತವನ್ನು ದೇವರು ಹೇಗೆ ಉಪಯೋಗಿಸಬೇಕು ಎಂಬದು ನಿಮ್ಮ ಬಯಕೆಯಾಗಿದೆ? (ಮಕ್ಕಳು ತಮ್ಮ ಅಭಿಪ್ರಾಯವನ್ನು ಹೇಳಲಿ, ಬಹುಶಃ ಬೋಧಕನಾಗಬೇಕು, ಸಂಗೀತಗಾರನಾಗಬೇಕು, ಮಿಷನರಿಯಾಗಬೇಕು, ಶಿಕ್ಷಕನಾಗಬೇಕು ಇತ್ಯಾದಿ ಉತ್ತರಗಳು ಅವರಿಂದ ಬರಬಹುದು)

## ಒಗಟಿನ ಉತ್ತರಗಳು 13






### ಆಟ 13

ಬ್ಯಾಸ್ಕೆಟ್ ಬಾಲ್



ನಿಮ್ಮ ಕಂಠಪಾಠ ವಚನದ ಪ್ರತಿಯೊಂದು ಪದವನ್ನು ಹಾಳೆಯ ಮೇಲೆ ಬರೆಯಿರಿ ಮತ್ತು ಅದನ್ನು ಹಾಳೆಯನ್ನು ಚೆಂಡನ್ನಾಗಿ ಮಾಡಿರಿ. ತರಗತಿಯನ್ನು ತಂಡವಾಗಿ ವಿಭಾಗಿಸಿರಿ ಮತ್ತು ಪ್ರತಿಯೊಂದು ತಂಡದವರಿಗೆ ಬೇಕಾಗುವಷ್ಟು ಕಂಠಪಾಠ ವಚನದ "ಚೆಂಡುಗಳನ್ನು" ಮಾಡಿರಿ. ಬ್ಯಾಸ್ಕೆಟ್ ಬಾಲ್ ಹೂಪ್ (ಅಥವಾ ಬಕೆಟ್ ಅಥವಾ ಬುಟ್ಟಿಯನ್ನು) ತರಗತಿಯ ಮುಂಭಾಗದಲ್ಲಿ ಇಡಿರಿ. ತಂಡದವರು ದೂರದಿಂದ ತಮ್ಮ ಪೇಪರ್ ಬಾಲ್ ಗಳನ್ನು ಬುಟ್ಟಿಯೊಳಗೆ ಹಾಕಬೇಕು. ಯಾವ ತಂಡದವರು ಮೊದಲು ಹಾಕುತ್ತಾರೋ ಅವರು ಗೆಲ್ಲುತ್ತಾರೆ, ಅವರು ವಾಕ್ಯವನ್ನು ಒದಬಹುದು ಮತ್ತು ಆಟವನ್ನು ಮುಂದುವರೆಸಬಹುದು.




### ಹೋಮ್ ವರ್ಕ್ 13

ನಿಮ್ಮ ನೆರೆಯವನಿಗೆ ಸಹಾಯ ಮಾಡಲು ನೀವು ಯಾವ ಕಾರ್ಯ ಮಾಡಬಹುದು ಎಂಬದನ್ನು ತೋರಿಸುವಂತೆ ದೇವರನ್ನು ಬೇಡಿಕೊಳ್ಳಿರಿ ಮತ್ತು ಯಾವ ಸಮಯದಲ್ಲಿ ಭೇಟಿ ಮಾಡಬಹುದು ಎಂಬದು ನಿಮ್ಮ ನೆರೆಯವನಿಂದ ವಿಚಾರಿಸಿ ತಿಳಿದುಕೊಳ್ಳಿರಿ.